ಸಂ.ಶಂ.ಕೇ.ಪ್ರಸಾದ್
790

ಕುವೆಂಪು ಅವರ ಕಾನೂರು ಹೆಗ್ಗಡಿತಿ ಕಾದಂಬರಿಯಲ್ಲಿ ಜಾತಿ ಮತ್ತು ಲಿಂಗದ ಪರಿಕಲ್ಪನೆ

ಕನ್ನಡ ವಿಶ್ವವಿದ್ಯಾಲಯಕ್ಕೆ

ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ನಿಬಂಧ

ಪುಟ್ಟರಾಜು.ಬಿ.ಜಿ.

ಸಂಶೋಧನ ವಿದ್ಯಾರ್ಥಿ

ಡಾ. ಟಿ.ವೆಂಕಟೇಶಮೂರ್ತಿ

ಮಾರ್ಗದರ್ಶಕರು

ಅಧ್ಯಯನಾಂಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ

2009

AKSHARA GRANTHALAYA

ACC.NO. 048599

8KO.9
RAJ K
048599

790

ಪ್ರಮಾಣ ಪತ್ರ

ಕುವೆಂಪು ಅವರ ಕಾನೂರು ಹೆಗ್ಗಡಿತಿ ಕಾದಂಬರಿಯಲ್ಲಿ ಜಾತಿ ಮತ್ತು ಲಿಂಗದ ಪರಿಕಲ್ಪನೆ ಎಂಬ ಶೀರ್ಷಿಕೆಯ ನಿಬಂಧವನ್ನು ಡಾ.ಟಿ.ವೆಂಕಟೇಶಮೂರ್ತಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಹಂಪಿಯ ಕನ್ನಡ ವಿಶ್ವವಿದ್ಯಾಲಯದ, ಅಧ್ಯಯನಾಂಗಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ಈ ನಿಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಾಮಾಣಿಕರಿಸುತ್ತೇನೆ.

pttaraj BG

(ಪುಟ್ಟರಾಜು.ಬಿ.ಜಿ)
ಎಂ.ಫಿಲ್. ವಿದ್ಯಾರ್ಥಿ,
ಕಾವ್ಯಮಂಡಲ,
ಬೆಂಗಳೂರು

ದಿನಾಂಕ: 25/09/9
ಸ್ಥಳ : ಬೆಂಗಳೂರು.

790

ದೃಢೀಕರಣ ಪತ್ರ

ಪುಟ್ಟರಾಜು.ಬಿ.ಜಿ. ಇವರು ಕುವೆಂಪು ಅವರ ಕಾನೂರು ಹೆಗ್ಗಡಿತಿ ಕಾದಂಬರಿಯಲ್ಲಿ ಜಾತಿ ಮತ್ತು ಲಿಂಗದ ಪರಿಕಲ್ಪನೆ ಎಂಬ ಶೀರ್ಷಿಕೆಯ ನಿಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಹಂಪಿ ಕನ್ನಡ ವಿಶ್ವವಿದ್ಯಾಲಯದ, ಅಧ್ಯಯನಾಂಗಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ಈ ನಿಬಂಧವನ್ನು ಈ ಮೊದಲು ಇವರು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಾಮಾಣಿಕರಿಸುತ್ತೇನೆ.

(ಡಾ.ಟಿ.ವೆಂಕಟೇಶಮೂರ್ತಿ)
ಮಾರ್ಗದರ್ಶಕರು
ಆಯ್ಕೆ ಶ್ರೇಣಿ ಉಪನ್ಯಾಸಕರು
ಕನ್ನಡ ವಿಭಾಗ,
ಬಿ.ಇ.ಎಸ್.ಸಂಜೆ ಕಾಲೇಜು,
4ನೇ ಬ್ಲಾಕ್, ಜಯನಗರ,
ಬೆಂಗಳೂರು-560011.

ದಿನಾಂಕ: 25/09/09
ಸ್ಥಳ : ಬೆಂಗಳೂರು.

ಸಿರಿಗನ್ನಡ ಗ್ರಂಥಾಲಯ,
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪರಿವಿಡಿ

ಕುವೆಂಪು ಅವರ ಕಾನೂರು ಹೆಗ್ಗಡಿತಿ ಕಾದಂಬರಿಯಲ್ಲಿ ಜಾತಿ ಮತ್ತು ಲಿಂಗದ ಪರಿಕಲ್ಪನೆ

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಹಿಂದೂ ಸಮಾಜದ ಮುಖ್ಯ ತಳಹದಿಯಾಗಿರುವ ಜಾತಿವ್ಯವಸ್ಥೆ ಹಾಗೂ ಲಿಂಗವ್ಯವಸ್ಥೆ ಮೂಲಭೂತವಾಗಿ ಅಸಮಾನತೆಯ ಮೇಲೆ ನಿಂತಿರುವ ಪ್ರಬಲ ಅಧಿಕಾರ ಕೇಂದ್ರಗಳಾಗಿವೆ. ಲಿಂಗಕಲ್ಪನೆ ಹಾಗೂ ಜಾತಿ ಪದ್ಧತಿ ಕುರಿತು ಅಂಬೇಡ್ಕರ್, ಲೋಹಿಯಾ, ಗಾಂಧಿ, ಬಸವಣ್ಣ, ಕುವೆಂಪು ಮೊದಲಾದ ಚಿಂತಕರ ವಿಚಾರಧಾರೆಯು ಮುಖ್ಯವಾಗಿ ವರ್ಣ, ಜಾತಿ, ಅಸ್ಪೃಶ್ಯತೆ, ಧರ್ಮ, ದೇವರು ಇವೇ ಮೊದಲಾದ ಭಾರತೀಯ ಜೀವನ ಮೌಲ್ಯಗಳನ್ನು ತೀವ್ರ ವಿಮರ್ಶೆಗೆ ಒಳಪಡಿಸಿವೆ. ಮಡಿ–ಮೈಲಿಗೆಯ ಕಲ್ಪನೆ, ಅಂತರ್‌ಜಾತಿ ವಿವಾಹ, ಮೇಲು–ಕೀಳಿನ ಬಿಕ್ಕಟ್ಟು, ಲಿಂಗತಾರತಮ್ಯ, ಜಾತಿ ಮತ್ತು ಲಿಂಗ ಇವುಗಳ ನಡುವಿನ ಬಿಕ್ಕಟ್ಟು ಹಾಗೂ ಕೆಳಸಮುದಾಯದ ಶಕ್ತಿಯನ್ನು ದಮನ ಮಾಡಿದ ಮೇಲುವರ್ಗದ ಕ್ರಮವನ್ನು ಸಮಗ್ರವಾಗಿ ಕುವೆಂಪುರವರು ತಮ್ಮ ಕಾದಂಬರಿಯಲ್ಲಿ ಚರ್ಚಿಸಿದ್ದಾರೆ. ಈ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಕುವೆಂಪುರವರ **ಕಾನೂರು ಹೆಗ್ಗಡಿತಿ** ಕಾದಂಬರಿಯ ಹಿನ್ನೆಲೆಯಲ್ಲಿ ಭಾರತದಲ್ಲಿ ಉಂಟಾದ ಬಿಕ್ಕಟ್ಟುಗಳ ಒಳಸೂಕ್ಷ್ಮಗಳನ್ನು ಚರ್ಚಿಸಿಕೊಳ್ಳುವುದು ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ. ಇದರ ಜೊತೆಗೆ ಲೋಹಿಯಾ, ಗಾಂಧಿ, ಅಂಬೇಡ್ಕರ್ ಮೊದಲಾದ ಚಿಂತಕರ ಚಿಂತನೆಗಳ ಮೂಲಕ ಜಾತಿ ಪ್ರಭುತ್ವ ಮತ್ತು ಲಿಂಗ ರಾಜಕಾರಣದ ಬಿಕ್ಕಟ್ಟುಗಳನ್ನು ಗ್ರಹಿಸಲು ಯತ್ನಿಸಲಾಗಿದೆ. ಪಾಶ್ಚಾತ್ಯ ಸಂಸ್ಕೃತಿಯ ಕೈಗಾರೀಕರಣ, ನಗರೀಕರಣ, ಸಾರ್ವಜನಿಕ ಶಿಕ್ಷಣ ಮೊದಲಾದವುಗಳ ಪ್ರಭಾವದಿಂದ ಜಾತಿಪದ್ಧತಿ, ಲಿಂಗಕಲ್ಪನೆ ಹಾಗೂ ಊಳಿಗಮಾನ್ಯ ವ್ಯವಸ್ಥೆಯಲ್ಲಿ ಉಂಟಾದ ಪಲ್ಲಟಗಳನ್ನು ಈ ಅಧ್ಯಯನದಲ್ಲಿ ಪರಿಶೀಲಿಸಲಾಗಿದೆ. ಅಲ್ಲದೆ ರೂಢಿಗತ ಮೌಲ್ಯಗಳಾದ ವರ್ಣಾಶ್ರಮವ್ಯವಸ್ಥೆ, ಧರ್ಮ, ಆಧ್ಯಾತ್ಮ, ಮದುವೆ, ಕುಟುಂಬ ಮೊದಲಾದ ಅಧಿಕಾರ ಕೇಂದ್ರಗಳು ನಡೆಸುವ ರಾಜಕೀಯ ಹುನ್ನಾರುಗಳನ್ನು ಚರ್ಚಿಸಲಾಗಿದೆ. ಲೈಂಗಿಕತೆ ಹಾಗೂ ಪಾವಿತ್ರತೆಯ ಪ್ರಶ್ನೆ ಕಾಮ ಪ್ರೇಮಗಳ ಸಂಬಂಧ, ನೈತಿಕತೆಯ ಪ್ರಶ್ನೆ ಮತ್ತು ಬಿಕ್ಕಟ್ಟುಗಳಿಗೆ ಹೊಸ ಮೌಲ್ಯಗಳನ್ನು ರೂಪಿಸುವ ಆಶಯವಾಗಿ ಈ ಕಾದಂಬರಿ ರೂಪತಾಳಿರುವುದನ್ನು ನಿಬಂಧದ ಅಧ್ಯಾಯಗಳಲ್ಲಿ ವಿವರವಾಗಿ ಚರ್ಚಿಸಲಾಗಿದೆ.

ವಸಾಹತುಶಾಹಿ ಸಂದರ್ಭ : ಜಾತಿ ಮತ್ತು ಲಿಂಗ ಕೇಂದ್ರಗಳ ನಿರ್ವಚನ : ಎಂಬ ಮೊದಲನೆಯ ಅಧ್ಯಾಯದಲ್ಲಿ ವಸಾಹತುಶಾಹಿ ಪ್ರಭಾವ ಮತ್ತು ಪ್ರೇರಣೆಗಳಿಂದ ಭಾರತೀಯ ಸಮಾಜದಲ್ಲಿ ಉಂಟಾದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಪಲ್ಲಟಗಳನ್ನು ಈ ಕಾದಂಬರಿಯ ಹಿನ್ನೆಲೆಯಲ್ಲಿ ಪರಿಶೀಲಿಸಲಾಗಿದೆ. ಆಧುನಿಕತೆಯ ಪ್ರಭಾವದಿಂದ ಭಾರತೀಯ ಸನ್ನಿವೇಶದಲ್ಲಿ ಶೂದ್ರ ಸಮುದಾಯ, ಹಿಂದುಳಿದ ಜಾತಿ, ಬುಡಕಟ್ಟು, ದಲಿತರು ಮತ್ತು ಸ್ತ್ರೀ ಸಮುದಾಯದಲ್ಲಿ ಉಂಟಾದ ಆಕರ್ಷಣೆ ಮತ್ತು ವಿಕರ್ಷಣೆಗಳ ನಡುವಿನ ವೈರುಧ್ಯ ಹಾಗೂ ಸಂಘರ್ಷಗಳು ಪ್ರತಿಪಾದಿತವಾಗಿದೆ. ವಸಾಹತುಶಾಹಿ ರಾಜಕಾರಣ ದೇಶಿ ಸಮಾಜದಲ್ಲಿ ಸೃಷ್ಟಿಸಿದ ಜನಾಂಗ ಭೇದ, ಲಿಂಗಭೇದ, ಜಾತಿ ಭೇದಗಳ ರಾಜಕಾರಣವನ್ನು ಮತ್ತಷ್ಟು ವಿರೂಪಗೊಳಿಸಿ ಜನಸಮುದಾಯವನ್ನು ಸಾಮಾಜಿಕ ನೆಲೆಗಳಲ್ಲಿ ಒಂದು ಖಚಿತವಾದ ಚಹರೆ ಇಲ್ಲದ ಸ್ಥಿತಿಗೆ ದೂಡಿದ ಬಗೆಯನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಇದಲ್ಲದೆ ಗಂಡು-ಹೆಣ್ಣಿನ ಸಂಬಂಧ, ಲಿಂಗರಾಜಕಾರಣ, ಕೌಟುಂಬಿಕ ಮೌಲ್ಯಗಳ ವಿಘಟನೆ, ಅಸ್ಥಿತ್ವವಾದಿ ಯಾತನೆ ಮುಂತಾದ ಸಾಮಾಜಿಕ ಸಮಸ್ಯೆಗಳನ್ನು ಅಧ್ಯಯನದಲ್ಲಿ ಚರ್ಚಿಸಲಾಗಿದೆ.

ಊಳಿಗಮಾನ್ಯ ವ್ಯವಸ್ಥೆ, ಜಾತಿ ಮತ್ತು ಲಿಂಗರಾಜಕಾರಣ : ಎಂಬ ಎರಡನೆಯ ಅಧ್ಯಾಯದಲ್ಲಿ ವಸಾಹತುಶಾಹಿ ಆಧುನಿಕತೆ, ಯಂತ್ರನಾಗರಿಕತೆ, ಆಧುನಿಕ ವಿಜ್ಞಾನ, ಇಂಗ್ಲಿಷ್ ಶಿಕ್ಷಣ, ಸುಧಾರಣಾವಾದಿ ಹಾಗೂ ವೈಚಾರಿಕ ವಿಚಾರಗಳು ಗ್ರಾಮೀಣ ಜಗತ್ತಿಗೆ ಪ್ರವೇಶಿಸಿದ ಫಲವಾಗಿ ಊಳಿಗಮಾನ್ಯ ವ್ಯವಸ್ಥೆಯಲ್ಲಿ ಉಂಟಾದ ಸ್ಥಿತ್ಯಂತರಗಳನ್ನು ಕುವೆಂಪುರವರ 'ಕಾನೂರು ಹೆಗ್ಗಡಿತಿ' ಕಾದಂಬರಿಯಲ್ಲಿ ಗುರುತಿಸಬಹುದಾಗಿದೆ. ಊಳಿಗಮಾನ್ಯ ಯಜಮಾನಿಕೆಯ ಅನುಭವದ ಸಂಬಂಧದಲ್ಲಿ ಪ್ರಬಲ- ದುರ್ಬಲ, ಮೇಲುವರ್ಗ- ಕೆಳವರ್ಗ, ಹಳ್ಳಿ-ನಗರ, ಜ್ಞಾನ-ಅಜ್ಞಾನ, ನಾಗರಿಕ-ಅನಾಗರಿಕ ಮೊದಲಾದ ಸಂಬಂಧಗಳ ನಡುವಿನ ಸಂಘರ್ಷ ಹಾಗೂ ವೈರುದ್ಯಗಳನ್ನು ಈ ಅಧ್ಯಾಯದಲ್ಲಿ ಗ್ರಹಿಸಲೆತ್ನಿಸಲಾಗಿದೆ. ಕುವೆಂಪುರವರು ಹೆಣ್ಣನ್ನು ನಿಸರ್ಗದ ಶಕ್ತಿಯಾಗಿ, ಸ್ತ್ರೀತ್ವದ ಪ್ರತೀಕವಾಗಿ, ವಸಾಹತುಶಾಹಿ ಮತ್ತು ಊಳಿಗಮಾನ್ಯ ಶಕ್ತಿಗಳ ಎದುರು ಒಂದು ಆಯುಧವಾಗಿ ಕಟ್ಟಿರುವ ಕ್ರಮವನ್ನೂ ಪರಿಶೀಲಿಸಲಾಗಿದೆ.

ಜಾತಿ ಮತ್ತು ಲಿಂಗದ ಸಂಬಂಧಗಳ ಬಿಕ್ಕಟ್ಟು, ನೈತಿಕತೆಯ ಪ್ರಶ್ನೆ : ಕುವೆಂಪು ಅವರಿಗೆ ಬ್ರಿಟಿಷ್ ವಸಾಹತುಶಾಹಿ ಪ್ರಭುತ್ವಕ್ಕೆ ಪ್ರತಿಕ್ರಿಯಿಸುವುದು ಎಷ್ಟು ಮುಖ್ಯವಾಗಿತ್ತೋ ಹಾಗೆಯೇ ಧರ್ಮ, ಜಾತಿ ಪುರೋಹಿತಶಾಹಿ, ಲಿಂಗರಾಜಕಾರಣ ಮೊದಲಾದ ಒಳ ವಸಾಹತುಶಾಹಿ

ಶಕ್ತಿಗಳಿಗೆ ಪ್ರತಿಕ್ರಿಯಿಸುವುದು ಅಷ್ಟೇ ಮುಖ್ಯವಾದ ವಿಚಾರವಾಗಿತ್ತು. ಶೂದ್ರಾತಿಶೂದ್ರರಿಗೆ ವಿದ್ಯೆ ಕಲಿಯುವ ಹಕ್ಕು, ಆಧ್ಯಾತ್ಮಿಕ ಹಕ್ಕು, ಸಗೋತ್ರ ಮತ್ತು ಅಂತರ್‌ಜಾತಿಯ ಹೆಣ್ಣನ್ನು ಪ್ರೀತಿಸಿ ಮದುವೆಯಾಗುವ ಹಕ್ಕು ಹಾಗೂ ಹೊಸ ಅಧಿಕಾರ ಸಿದ್ಧಾಂತಗಳು ರೂಪಗೊಂಡಿರುವುದನ್ನು ಕುವೆಂಪು ತಮ್ಮ ಕೃತಿಗಳಲ್ಲಿ ಪರಿಶೀಲಿಸಿದ್ದಾರೆ. ಗಂಡು-ಹೆಣ್ಣಿನ ನಡುವಿನ ಪ್ರೀತಿ, ಪ್ರೇಮ ಹಾಗೂ ಹಾದರದ ಸಂಬಂಧಗಳು ಪುನರ್‌ಮೌಲ್ಯೀಕರಣಗೊಳ್ಳುವ ಬಗೆ, ಸ್ತ್ರೀತ್ವದ ಎದುರು ಪುರುಷಾಧಿಕಾರ ಹಾಗೂ ಊಳಿಗಮಾನ್ಯ ಪ್ರಭುತ್ವಗಳು ತಮ್ಮ ಅಧಿಕಾರವನ್ನು ಕಳೆದುಕೊಳ್ಳುವ ಮುಖ್ಯ ಕ್ರಿಯೆಯನ್ನು ಕುವೆಂಪುರವರ ಕಾದಂಬರಿಗಳಲ್ಲಿ ಕಾಣಬಹುದಾಗಿದೆ. ಹೆಣ್ಣಿನ ಪರಪುರುಷನೊಂದಿಗಿನ ಲೈಂಗಿಕ ಸಂಬಂಧವು ಎಲ್ಲಾ ಬಗೆಯ ಅಧಿಕಾರ ಹಾಗೂ ಅಧಿಕಾರ ಕೇಂದ್ರಗಳ ವಿರುದ್ಧದ ಪ್ರತಿಭಟನೆ ಇಲ್ಲಿ ಮುಖ್ಯವಾದ ವಿಚಾರವಾಗಿದೆ. ಜಾತಿಸಂಕರ, ಸುಬ್ಬಮ್ಮ ಮತ್ತು ಸೇರೆಗಾರರ ಸಂಪತ್ತು ಮತ್ತು ಹೆಣ್ಣು ಜಾತಿ ವ್ಯವಸ್ಥೆ ಹಾಗೂ ಅಧಿಕಾರದ ದುರ್ಬಲತೆಗೆ ಪ್ರಮುಖ ಪ್ರೇರಕ ಶಕ್ತಿಯಾಗಿ ಬಳಕೆಯಾಗಿರುವುದು ಈ ಕಾದಂಬರಿಯ ವಿಶಿಷ್ಟ ಕ್ರಿಯೆಗಳಲ್ಲೊಂದಾಗಿದೆ.

ಕುವೆಂಪು ಅವರು ಪ್ರಕೃತಿ ಹಾಗೂ ಆಧ್ಯಾತ್ಮಗಳ ಮೂಲಕ ಜಾತಿ-ಮತ ಮೌಢ್ಯಗಳು, ಗಂಡು ಮತ್ತು ಹೆಣ್ಣಿನ ಅಸಮಾನತೆ ಹಾಗೂ ನಿಯಂತ್ರಣಗಳನ್ನು ಧಿಕ್ಕರಿಸಿ ಮನುಷ್ಯತ್ವವೇ ದೈವತ್ವ ಎಂಬ ಮಹತ್ವದ ಆಧ್ಯಾತ್ಮಿಕ ವಿಚಾರಗಳನ್ನು ಪ್ರತಿಪಾದಿಸಿದರು. ಕುವೆಂಪುರವರಲ್ಲಿ ಈ ಬಗೆಯ ಸಾಮಾಜಿಕ ಕ್ರೋಧ, ಸಾಂಸ್ಕೃತಿಕ ಪ್ರತಿರೋಧ ಮತ್ತು ಆಧ್ಯಾತ್ಮದ ಹುಡುಕಾಟದ ಮಾದರಿಗಳು ಈ ಕಾದಂಬರಿಯಲ್ಲಿ ಮಂಡಿತವಾಗಿದೆ. ಇಲ್ಲಿಯ ಸ್ತ್ರೀ ಜಗತ್ತಿನ ಮೂಲಕ ಆಧುನಿಕತೆಯ ವಿಮರ್ಶೆಯನ್ನು ಮಾಡಿದ್ದಾರೆ. ಸಮಾಜದಲ್ಲಿ ಪುರುಷ ಪ್ರಾಧಾನ್ಯತೆಯ ಕಾಲ ದುರ್ಬಲಗೊಂಡು ಸ್ತ್ರೀ ಪ್ರಾಧಾನ್ಯತೆ ಆರಂಭವಾದುದ್ದನ್ನು ಈ ಅಧ್ಯಯನ ಗ್ರಹಿಸುತ್ತದೆ. ಒಟ್ಟಿನಲ್ಲಿ ವಸಾಹತುಶಾಹಿ ಸೃಷ್ಟಿಸಿದ ನವನಾಗರಿಕತೆಯ ಪರಿಣಾಮದಿಂದಾಗಿ ಜಾತಿ ಮತ್ತು ಲಿಂಗದ ಸಂಬಂಧಗಳಲ್ಲಿ ಉಂಟಾದ ಬಿರುಕು, ಪಲ್ಲಟಗಳು ಹಾಗೂ ಹೊಸ ನೈತಿಕತೆಯ ಜೊತೆಗೆ ಸ್ತ್ರೀ ಸಂವೇದನೆಗಳಿಗೆ ಸ್ಪಂದಿಸುವ ಕ್ರಿಯೆಯನ್ನು ಈ ಅಧ್ಯಾಯದಲ್ಲಿ ಪರಿಶೀಲಿಸಲಾಗಿದೆ. ಅಲ್ಲದೆ ನಗರೀಕರಣದ ಪ್ರಭಾವವು ಗ್ರಾಮೀಣ ಜಗತ್ತಿನಲ್ಲಿ, ಕುಟುಂಬದಲ್ಲಿ ಮತ್ತು ಹೆಣ್ಣು-ಗಂಡಿನ ಸಂಬಂಧದಲ್ಲಿ ಉಂಟು ಮಾಡಿದ ಮಹಾ ಬಿರುಕನ್ನು ಇಲ್ಲಿ ಚರ್ಚೆಗೆ ಒಡ್ಡಲಾಗಿದೆ.

ತಳಸಂಸ್ಕೃತಿ ಮತ್ತು ಸ್ತ್ರೀತ್ವದ ಅನನ್ಯತೆಯ ನೆಲೆಗಳು : ಎಂಬ ನಾಲ್ಕನೆಯ ಅಧ್ಯಾಯದಲ್ಲಿ ಸಮಕಾಲೀನ ಒತ್ತಡದ ಸಂದರ್ಭದಲ್ಲಿ ತಳಸಂಸ್ಕೃತಿ ಮತ್ತು ಸ್ತ್ರೀ ಜಗತ್ತು ತನ್ನ ಆಶೋತ್ತರಗಳನ್ನು ಹಾಗೂ ಅಸ್ತಿತ್ವವನ್ನು ಬಲಪಡಿಸಿಕೊಳ್ಳಲು ಯತ್ನಿಸುತ್ತಿರುವುದರ ಅನನ್ಯತೆಯ ಚಿತ್ರಣ ಈ ಕಾದಂಬರಿಯಲ್ಲಿ ಬಿಂಬಿತವಾಗುತ್ತದೆ. ಗಾಂಧಿ ಮಾದರಿಯ ಸ್ತ್ರೀತ್ವ, ಸ್ತ್ರೀಸಂವೇನದೆ, ಮಾನವೀಯತೆಯ ಆಶಯಗಳು ಹಾಗೂ ಜಾತಿ ಸಂಕರದ ಸೂಚನೆಗಳು ಕಾದಂಬರಿಯಲ್ಲಿ ಅಲ್ಲಲ್ಲಿ ಕಂಡುಬರುತ್ತವೆ. ಹೆಣ್ಣನ್ನು ಸೃಜನಶೀಲ ಶಕ್ತಿಯಾಗಿ, ಜೈವಿಕ ಶಕ್ತಿಯಾಗಿ, ಗೃಹದೇವತೆಯ ಮಾದರಿಯಾಗಿ, ತಪಸ್ವಿನಿಯಾಗಿ ವಿವಿಧ ಮಾದರಿಗಳಲ್ಲಿ ಇಲ್ಲಿ ನೋಡಲಾಗಿದೆ. ಸ್ತ್ರೀತ್ವದ ಮೂಲಕ ಪ್ರಬಲ ಅಧಿಕಾರ ಕೇಂದ್ರಗಳನ್ನು ಮಣಿಸಿದ ವಿವಿಧ ಮಾದರಿಗಳನ್ನು ಈ ಅಧ್ಯಾಯ ಪರಿಶೀಲಿಸುತ್ತದೆ.

ಒಟ್ಟಿನಲ್ಲಿ ಊಳಿಗಮಾನ್ಯ ವ್ಯವಸ್ಥೆ ಹಾಗೂ ಜಾತಿ ಮತ್ತು ಲಿಂಗ ಅಸಮಾನತೆಗಳ ವಿರುದ್ಧ ಜನಸಮುದಾಯದ ಹೋರಾಟದ ಅನಿವಾರ್ಯತೆಯನ್ನು ಈ ಕಾದಂಬರಿಯಲ್ಲಿ ಗುರುತಿಸಬಹುದಾಗಿದೆ. ವಸಾಹತು ಸಂದರ್ಭದಲ್ಲಿ ಊಳಿಗಮಾನ್ಯ ಪ್ರಭುತ್ವವು ದುರ್ಬಲಗೊಂಡು ಒಡೆತನ, ಹೆಣ್ಣು, ದಾಸ್ಯ ಈ ಸಂಬಂಧಗಳು ಬೇರೆಯದೆ ಆದ ಹೊಸ ಆಯಾಮವೊಂದನ್ನು ಪಡೆಯುವುದನ್ನು ಈ ಕಾದಂಬರಿಯ ಹಲವು ಸನ್ನಿವೇಶಗಳು ಬಿಂಬಿಸುತ್ತವೆ. ಜಾತಿ ಏಣಿಶ್ರೇಣಿ, ಪಾತಿವ್ರತ್ಯ ಹಾಗೂ ಲೈಂಗಿಕ ಸ್ವಾತಂತ್ರ್ಯಗಳನ್ನು ಕಾಯ್ದುಕೊಂಡು ಬಂದಿದ್ದ ಊಳಿಗಮಾನ್ಯ ವ್ಯವಸ್ಥೆಯ ಲಕ್ಷಣಗಳನ್ನು ಇಲ್ಲಿಯ ಸ್ತ್ರೀಜಗತ್ತು ಧಿಕ್ಕರಿಸಿ ತನ್ನದೇ ಆದ ಪ್ರತಿ ಸಂಸ್ಕೃತಿಯನ್ನು ಕಟ್ಟಿಕೊಳ್ಳಲು ಯತ್ನಿಸುವುದನ್ನು ಮತ್ತು ಉದಾತ್ತ ಆದರ್ಶೀಕರಣ ಹಾಗೂ ಆಧ್ಯಾತ್ಮೀಕರಣದ ಮೂಲಕ ಹೊಸ ಮೌಲ್ಯಗಳನ್ನು ಸ್ಥಾಪಿಸುವ ಕುವೆಂಪುರವರ ಆಶಯವನ್ನು ಈ ಆಧ್ಯಯನ ಪರಿಶೀಲಿಸಿದೆ. ಒಟ್ಟಾರೆ ಕುವೆಂಪುರವರ ಸೃಜನಾತ್ಮಕ ಪ್ರಜ್ಞೆ ವ್ಯವಸ್ಥೆಯನ್ನು ಸಂಪೂರ್ಣವಾಗಿ ಧಿಕ್ಕರಿಸದೆ, ಗ್ರಹೀತ ನೆಲೆಗಳನ್ನು ದಾಟುವುದು, ಪುನರ್ ಮೌಲ್ಯೀಕರಣಕ್ಕೆ ಒಳಪಡಿಸುವುದು ಹಾಗೂ ಪುನರ್‌ಸ್ಥಾಪಿಸುವುದು ಅವರ ಒಟ್ಟು ಸಾಹಿತ್ಯದ ಮುಖ್ಯ ಆಶಯವಾಗಿರುವುದನ್ನು ಈ ಅಧ್ಯಯನದಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ-1

ವಸಹಾತುಶಾಹಿ ಸಂದರ್ಭ : ಜಾತಿ ಮತ್ತು ಲಿಂಗ ಕೇಂದ್ರಗಳ ನಿರ್ವಚನ

ವಸಹಾತುಶಾಹಿ ಎಂದರೆ ಹೊರ ಮತ್ತು ಒಳಗಿನ ಕಾರಣಗಳಿಂದ ಏರ್ಪಡುವ ಧಮನಾವಸ್ಥೆ. ಸ್ಥಳೀಯ ಜಗತ್ತಿನ ಧಾರ್ಮಿಕ, ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ವಸಾಹತು ಹಾಗೂ ನಿಯಂತ್ರಣ ಸಾಧಿಸಿದ ಸರ್ವಾಧಿಕಾರಿ ಧೋರಣೆಯನ್ನು ಮತ್ತು ಅದು ಸೃಷ್ಟಿಸಿದ ಪಲ್ಲಟಗಳನ್ನು ವಸಾಹತುಶಾಹಿ ಎಂದು ಕರೆಯಲಾಗುತ್ತದೆ. "ಹತ್ತೊಂಬತ್ತನೆಯ ಹಾಗೂ ಇಪ್ಪತ್ತನೆಯ ಶತಮಾನದ ಮೊದಲ ಭಾಗ ಭಾರತದ ಚರಿತ್ರೆಯಲ್ಲಿ ಅತ್ಯಂತ ಮಹತ್ವದ ಸಂಧಿಕಾಲ. ಭಾರತೀಯ ಜೀವನದಲ್ಲಿ ಹೊರಗಿನ ಶಕ್ತಿಗಳು ಆಕ್ರಮಿಸಿದ ಕಾಲ. ಪರಕೀಯ ರಾಜಕೀಯ ಶಕ್ತಿಗಳು ನಮ್ಮ ಸಾಂಸ್ಕೃತಿಕ ಜೀವನದಲ್ಲಿ ತಮ್ಮ ಪ್ರಭಾವದಿಂದ ತಲ್ಲಣವನ್ನೇ ಸೃಷ್ಟಿಸಿದವು. ಜಾಗತಿಕವಾಗಿ ಏರ್ಪಡುತ್ತಿದ್ದ ಅನೇಕ ಸ್ಥಿತ್ಯಂತರಗಳು ಭಾರತವನ್ನು ನಿಧಾನವಾಗಿ ಪ್ರವೇಶಿಸಿದವು. ಪರಕೀಯ ಆಕ್ರಮಣದೊಂದಿಗೆ ಇಂಥ ಪರಿಸ್ಥಿತಿ ಹೆಚ್ಚು ವೇಗವನ್ನು ಪಡೆದುಕೊಳ್ಳಲು ಕಾರಣವಾಯಿತು. ಈ ಕಾಲಮಾನವನ್ನೇ ತಿಳಿಯಲು ನಮ್ಮ ಸಂದರ್ಭದಲ್ಲಿ ಸೃಷ್ಟಿಯಾದ ಸಾಹಿತ್ಯ ನಿರ್ಮಿತಿಯ ಮೂಲಕ ಚಾರಿತ್ರಿಕವಾಗಿ ವ್ಯಕ್ತವಾಗಿರುವುದನ್ನು ನಾವು ಗುರುತಿಸಬಹುದು".[1]

ಭಾರತೀಯ ಸಮಾಜವು ಸಾಂಸ್ಕೃತಿಕವಾಗಿ ಹೊಸ ಸ್ವೀಕರಣೆ ಹಾಗೂ ನಿರಾಕರಣೆಗಳೆಂಬ ಎರಡೂ ರೀತಿಯ ಅನುಸಂಧಾನ ಪ್ರಕ್ರಿಯೆಗಳನ್ನು ಆರಂಭಿಸಿತು. ಭಾರತೀಯ ಸಾಮಾಜಿಕ ಸ್ಥಿತ್ಯಂತರಗಳನ್ನು ಒಟ್ಟಾರೆಯಾಗಿ ಕಾದಂಬರಿ ಪ್ರಕಾರದಲ್ಲಿ ಕಥನವಾಗಿ ಮಂಡಿತವಾಗಿರುವುದನ್ನು ಕಾಣಬಹುದು. ಮುಖ್ಯವಾಗಿ ಕನ್ನಡದ ಸಂದರ್ಭಗಳಲ್ಲಿ ಈ ರೀತಿಯ ಸಾಮಾಜಿಕ ಹಾಗೂ ಸಾಂಸ್ಕೃತಿಕ ಪಲ್ಲಟಗಳ ಸಚಿತ್ರಣವನ್ನು ನಾವು ಕಾಣಬಹುದಾಗಿದೆ. ವಸಾಹತುಶಾಹಿ ಪ್ರಭಾವ ಮತ್ತು ಪ್ರೇರಣೆಯಿಂದ ಭಾರತೀಯ ಸಮಾಜದಲ್ಲಿ ಆದಂತಹ ಪಲ್ಲಟಗಳೆಂದರೆ ಹಳೆಯ ಪಾರಂಪರಿಕ ವಿದ್ಯಾಭ್ಯಾಸ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಾ ಬಂದು ಸಮಾಜದ ಶೂದ್ರ ವರ್ಗವನ್ನು ಒಳಗೊಂಡಂತೆ ಕೆಳಜಾತಿಗಳು ವಿದ್ಯೆಗೆ ತೆರೆದುಕೊಳ್ಳತೊಡಗಿದವು. ಈ ರೀತಿಯಾಗಿ ಒಂದು ಹೊಸ ಬಗೆಯ ಆಧುನಿಕ ಶಿಕ್ಷಣದ ಕ್ರಮ ಜಾರಿಗೆ ಬಂದಿತು. ಇದರಿಂದಾಗಿ

ಸಾಮಾಜಿಕವಾಗಿ ಸ್ಪಂದನೆ ಹಾಗೂ ಪ್ರತಿಸ್ಪಂದನೆಗಳೂ ಸಹ ಏರ್ಪಟ್ಟವು ಹಾಗೂ ಪಾರಂಪರಿಕವಾಗಿದ್ದಂತಹ ನಂಬಿಕೆ ಹಾಗೂ ಮೌಲ್ಯಗಳನ್ನು ಒಟ್ಟು ಶಿಕ್ಷಣದಿಂದ ಹೊಸ ಜಗತ್ತಿಗೆ ಪ್ರವೇಶಿಸಬೇಕೆಂಬ ಬದಲಾವಣೆಯ ಗಾಳಿ ಪ್ರಬಲವಾಗಿ ಬೀಸತೊಡಗಿತು. ಜೊತೆಗೆ ಆಧುನಿಕ ಹಾಗೂ ಪರಂಪರಾಗತ ಜಗತ್ತುಗಳ ಬಗ್ಗೆ ಆಕರ್ಷಣೆ-ವಿಕರ್ಷಣೆಗಳ ತಲ್ಲಣಗಳನ್ನು ಭಾರತೀಯ ಸಮಾಜದಲ್ಲಿ ಉಂಟುಮಾಡಿತು. ಮತ್ತು ಧಾರ್ಮಿಕ ಪ್ರಯತ್ನ ಹಾಗೂ ಲೌಕಿಕ ಸೇವಾ ಕರ್ಮಗಳು ಒಂದರೊಡನೆ ಒಂದು ಬೆರೆತುಕೊಂಡು ಹಳ್ಳಿಗಾಡಿನ ಪರಿಸರದಲ್ಲಿ ವಂಚನೆಯ ಜಾಲವನ್ನೇ ನಿರ್ಮಾಣ ಮಾಡಿದ ಬಗೆಯನ್ನು ನೋಡಬಹುದು. ಶಿಕ್ಷಣದ ಹೆಸರಿನಲ್ಲಿ ಕ್ರೌರ್ಯ ಹಾಗೂ ಸ್ವಾರ್ಥ ಸಾಧನೆಯು ಪ್ರವೇಶಿಸಿದ ಬಗೆ ಇಡೀ ಭಾರತೀಯ ಸಂದರ್ಭದಲ್ಲಿ ಅನ್ವಯವಾಗುತ್ತದೆ. ಮತ್ತು ವಸಾಹತುಶಾಹಿ ಕಾರಣದಿಂದ ಉಂಟಾದ ಭೌತಿಕ ಬದಲಾವಣೆಗಳಿಗೂ, ಕುಟುಂಬ ವ್ಯವಸ್ಥೆಯಲ್ಲಿ ಉಂಟಾದ ಅನೇಕ ಅವಸ್ಥಾಂತರಗಳನ್ನು ಕುವೆಂಪುರವರ 'ಕಾನೂರು ಹೆಗ್ಗಡತಿ' ಕಾದಂಬರಿ ಹಿನ್ನೆಲೆಯಾಗಿರಿಸಿಕೊಂಡಿದೆ ಎಂಬುದನ್ನು ಪರಿಶೀಲಿಸುವುದು ಈ ಅಧ್ಯಾಯದ ಆಶಯವಾಗಿದೆ.

ಒಟ್ಟು ಭಾರತೀಯ ಜೀವನ ಹಾಗೂ ಸಂಸ್ಕೃತಿಯಲ್ಲಿ ಉಂಟಾದ ಪಲ್ಲಟಗಳಿಂದಾಗಿ ಒಂದು ಹೊಸ ವಾತಾವರಣವೇ ನಿರ್ಮಾಣವಾಯಿತು. ಇಂಗ್ಲಿಷ್ ಶಿಕ್ಷಣ ಪದ್ಧತಿಯು ತನ್ನ ರಾಜಕೀಯ ಸಂಬಂಧಗಳನ್ನು ಗಟ್ಟಿಗೊಳಿಸಿಕೊಳ್ಳಲು ಪೂರಕ ವಿಕಾಸಗೊಂಡಿತಾದರೂ, ಆ ಮೂಲಕ ಹೊಸ ಎಚ್ಚರದ ಬೀಜಗಳು ಮೊಳಕೆಯೊಡೆಯಲೂ ಸಹ ಪ್ರೇರಣೆಯಾಯಿತು. ಇಂಗ್ಲಿಷ್ ವಿದ್ಯಾಭ್ಯಾಸದಿಂದ ಹೊಸ ವಿಚಾರಗಳು ಹೆಚ್ಚು ತಾಂತ್ರಿಕವಾಗಿ ಭಾರತೀಯ ಮನಸ್ಸನ್ನು ಆವರಿಸಿದ್ದರೂ ಆ ಕಾಲದ ಮಹತ್ವದ ವ್ಯಕ್ತಿ ಹಾಗೂ ಸಾಂಘಿಕ ಚಟುವಟಿಕೆಗಳು ಕೂಡ ಪಶ್ಚಿಮದ ವಿಚಾರಧಾರೆಯಿಂದ ಭಾರತೀಯರ ಸಾಂಸ್ಕೃತಿಕ ಜೀವನದ ವಿನ್ಯಾಸದ ಪರಿಷ್ಕರಣೆಗೆ ಕಾರಣವಾಯಿತು. ಭಾರತೀಯ ಸಮಾಜದ ಜಾತಿ, ವರ್ಗ ಹಾಗೂ ಸಾಮಾಜಿಕ ಅಧಿಕಾರಗಳ ಕೇಂದ್ರಗಳಲ್ಲಿ ವಿಘಟನೆ ಕಾಣಿಸಿಕೊಂಡಿತು. ಮುಖ್ಯವಾಗಿ ವಸಾಹತುಶಾಹಿ ಬ್ರಿಟಿಷರ ರಾಜಕೀಯ ಯಂತ್ರ ತನ್ನ ಅಸ್ತಿತ್ವವನ್ನೇ ಬಲಪಡಿಸಿಕೊಳ್ಳುವ ದಿಸೆಯಲ್ಲಿ ಅನೇಕ ಸುಧಾರಣವಾದಿ ಚಟುವಟಿಕೆಗಳಿಗೆ ಪ್ರೇರಣೆಯಾಯಿತು. ಇದರಿಂದಾಗಿ ಪಾರಂಪರಿಕ ಸಮಾಜ ವ್ಯವಸ್ಥೆಯು ಮೂಲಭೂತವಾಗಿ ಬದಲಾವಣೆಗಳಿಗೆ ಕಾರಣವಾಯಿತು.

ಬ್ರಿಟಿಷರು ಇಲ್ಲಿನ ಸಾಂಸ್ಕೃತಿಕ ಜೀವನದ ಮೇಲೆ ತಮ್ಮ ಯಾಜಮಾನ್ಯವನ್ನು ನೆಲೆಗೊಳಿಸಿದ ಕಾರಣದಿಂದ ಉಂಟಾದ ಸಂಘರ್ಷ ನಮ್ಮ ಸಮಷ್ಟಿ ಹಾಗೂ ವೆಷ್ಟಿ ಜೀವನದ

ಮೇಲೆ ಮಹತ್ತರವಾದ ಪ್ರಭಾವ ಪರಿಣಾಮಗಳನ್ನುಂಟುಮಾಡಿತು. ಮುಖ್ಯವಾಗಿ ನಮ್ಮ ಸಾಮಾಜಿಕ ಸಮಸ್ಯೆಗಳಾದ ಜಾತಿಪದ್ಧತಿ, ಜೀತಪದ್ಧತಿ, ಬುಡಕಟ್ಟು, ಸಮುದಾಯ ದಲಿತರು, ಎಲ್ಲ ಕೆಳಜಾತಿಗಳು ಮತ್ತು ಸ್ತ್ರೀ ಸಮುದಾಯದಲ್ಲಿ ಉಂಟಾದ ಆಕರ್ಷಣೆ ಮತ್ತು ವಿಕರ್ಷಣೆ ಮುಂತಾದ ಸಮಸ್ಯೆಗಳನ್ನು ಕುರಿತು ವ್ಯಾಪಕವಾದ ಮರುಚಿಂತನೆ ಈ ಕಾಲದಲ್ಲಿ ಕಾಣಿಸಿಕೊಂಡಿತು. ಭಾರತೀಯ ಇತಿಹಾಸದ ವ್ಯಕ್ತಿಯ ವಿಘಟನೆ ಹಾಗೂ ಸಾಮಾಜಿಕ ವಿಘಟನೆಯ ಸಂದರ್ಭದ ಸೂಕ್ಷ್ಮಗಳನ್ನು ಕುವೆಂಪು ಅವರ 'ಕಾನೂರು ಹೆಗ್ಗಡತಿ' ಕಾದಂಬರಿಯಲ್ಲಿ ಸಮರ್ಥವಾಗಿ ಅನಾವರಣಗೊಂಡಿದೆ. ವಸಾಹತುಶಾಹಿಯ ಕಾಲದ ಸುಧಾರಣಾವಾದಿಗಳಲ್ಲಿ ಸಾಮಾಜಿಕ ಸುಧಾರಣೆ ಒಂದು. ಇದು ಸಾಮಾನ್ಯ ಆಶಯವಾಗಿದ್ದರೂ ಸಹ ಈ ಸುಧಾರಣೆಯ ಕಲ್ಪನೆ ಸಾಮಾಜಿಕ ಸಂದರ್ಭಕ್ಕನುಗುಣವಾಗಿ ಬೇರೆ ಬೇರೆ ರೂಪವನ್ನು ತಳೆಯಿತು. ಬ್ರಾಹ್ಮಣ ಸಮಾಜದ ಸುಧಾರಣೆ ಜೊತೆಗೆ ಹೆಣ್ಣಿನ ಸ್ಥಾನಮಾನ, ಸತಿಪದ್ಧತಿ, ವಿಧವಾವಿವಾಹ, ಬಾಲ್ಯವಿವಾಹ ನಿರ್ಮೂಲನ, ಸ್ತ್ರೀಶಿಕ್ಷಣ ಮುಂತಾದ ಪ್ರಗತಿಗಾಮಿ ಧೋರಣೆಗಳು ಕಾಣಿಸಿಕೊಂಡವು. ಇವುಗಳ ಜೊತೆಗೆ ಉಳಿದ ಸಾಮಾಜಿಕ ಅನಿಷ್ಟಗಳ ಬಗ್ಗೆ ಚಳುವಳಿಯನ್ನು ಕುವೆಂಪು ಸಾರಿದರು. ಜಾತಿಪದ್ಧತಿ ಹಾಗೂ ವರ್ಣ ಸಂಸ್ಕೃತಿಗೆ ಒಂದು ಹೊಸ ವೈಚಾರಿಕತೆಯನ್ನು ಪ್ರತಿಪಾದಿಸುವ ಹೊಸ ಎಚ್ಚರವನ್ನು ಸಮುದಾಯದಲ್ಲಿ ಮೂಡಿಸಿದರು. ಇವರ ವೈಚಾರಿಕತೆಗೆ ಹಿನ್ನೆಲೆಯಾಗಿ ಭಾರತೀಯ ರಾಷ್ಟ್ರ ಕಲ್ಪನೆಯಲ್ಲಿ ಪ್ರಗತಿ, ವಿಮೋಚನೆ, ಸ್ವಾತಂತ್ರ್ಯ ಮುಂತಾದ ಪರಿಕಲ್ಪನೆಗಳು ಹಾಸುಹೊಕ್ಕಾಗಿ ಇದ್ದವು. ಮುಖ್ಯವಾಗಿ ಶೋಷಣೆಯಿಂದ ಬಿಡುಗಡೆಯತ್ತ ನಡೆಯುವ ಸಾಧನವಾಗಿ ವಿದ್ಯಾವಂತ ಯುವಕರನ್ನು ಎತ್ತಿ ಹಿಡಿಯುವುದು ಕುವೆಂಪು ಅವರ ಮುಖ್ಯ ಆಶಯವಾಗಿತ್ತು.

ಕುವೆಂಪುರವರ ಪ್ರಕಾರ 'ಯಂತ್ರ ನಾಗರಿಕತೆ, ಇಂಗ್ಲಿಷ್, ಉದ್ಯೋಗ ವೇಗ! ತಾನು ಎಂದೊ ಹಿಂದಿಕ್ಕಿ ಬಂದ ಆ ಪ್ರಗತಿಗಾಮಿಯಿಂದ ಪ್ರಪಂಚ ಮತ್ತೆ ಬಹುದೂರದ ಮಲೆನಾಡಿನ ಕೊಂಪೆಯಲ್ಲಿ ತನಗೆ ಕ್ಷಣದರ್ಶನ ಕೊಟ್ಟಂತಾಯ್ತು. ನಿಲ್ಲದೆ ಮುಂಬರಿಯುತ್ತಿರುವ ದಿನ ದಿನವೂ ಬದಲಾಯಿಸುತ್ತಿರುವ ಹೊರಗಣ ವಿಶಾಲ ಜಗತ್ತಿಗೆ ಪ್ರತಿಮೆಗಳಾದರೂ, ಆ ಬೈಸಿಕಲ್ ಮತ್ತು ಆದರ ಸಮರ, ಹೂವಯ್ಯನ ಮನಸ್ಸು ಗವಾಕ್ಷದಿಂದೆಂಬಂತೆ ಕಾನೂರು ಮುತ್ತಳ್ಳಿಗಳ ಸಂಕುಚಿತ ಬದುಕಿನಿಂದ ಹೊರ ಲೋಕದ ಬಿತ್ತಾರಕ್ಕೆ ಹಾರಿತು. ಪಟ್ಟಣದ ಸಂದಣಿಯಲ್ಲಿ ಯಾರ ಗಮನಕ್ಕೂ ಬಾರದ ಬೈಸಿಕಲ್ಲು ಕಾಡು ಬೀಡಿನಲ್ಲಿ ವಿಶೇಷಾತಿಥಿಯಾಗಿ ತೋರಿತು. ಎಷ್ಟಾದರೂ ಆಕ್ರಮಣಶೀಲವಾದ ನಾಗರಿಕ ಲೋಕವು ಮಲೆನಾಡಿಗೆ ದಾಳಿಯಿಡುವ ಮೊದಲು ಮುನ್ನಟ್ಟಿದ

ರಣಚಾರನಲ್ಲಿವೆ ಆ ಬೈಸಿಕಲ್ ಸವಾರ'[2] ಎಂದು ಯಂತ್ರಸಂಸ್ಕೃತಿ ಪ್ರತಿಗಾಮಿಯಾಗಿ ಮಲೆನಾಡಿನ ಜೀವನ ಕ್ರಮವನ್ನೇ ಮೂಲಭೂತವಾಗಿ ಪಲ್ಲಟಗೊಳಿಸಿರುವುದನ್ನು ಇಲ್ಲಿ ಕುವೆಂಪು ಚಿತ್ರಿಸಿದ್ದಾರೆ. ಒಂದು ಕಡೆ ವ್ಯಕ್ತಿ ನಿರಪೇಕ್ಷವಾದ ಧಾರ್ಮಿಕ ಸಂದರ್ಭ ಮನುಷ್ಯನ ಬದುಕನ್ನು ತಲ್ಲಣಗೊಳಿಸಿದರೆ, ಮತ್ತೊಂದು ಕಡೆ ಐಹಿಕ ಸಾಧನೆಗಳಾದ ನವೀನ ವಸ್ತು ಪ್ರಪಂಚ ಮನುಷ್ಯನ ಮೂಲಭೂತ ಸಂವೇದನೆಗಳನ್ನು ದಿಗ್ಭ್ರಮೆಗೆ ಈಡುಮಾಡುತ್ತದೆ. ಕಾನೂರನ್ನು ಪ್ರವೇಶಿಸುತ್ತಿರುವ ಹೊಸ ವಿಚಾರಗಳನ್ನೇ ಕಾದಂಬರಿಯ ಮುಖ್ಯಪಾತ್ರವಾದ ಹೂವಯ್ಯ ಕುತೂಹಲದಿಂದ ಗ್ರಹಿಸುತ್ತಿದ್ದಾನೆ. ಕಾನೂರಿನ ಸಂಕಟಗಳೊಂದಿಗೆ ಭಾರತೀಯರ ಸ್ವರಾಜ್ಯ ಸಂಪಾದನೆಯ ಪ್ರಯತ್ನದ ಸಂಕಟಗಳು, ರಾಷ್ಟ್ರನಾಯಕರ ಆಂದೋಲನಕಾರಕ ಉಪನ್ಯಾಸಗಳು, ಬ್ರಿಟಿಷರ ದಬ್ಬಾಳಿಕೆಯ ನಡತೆಗಳು, ಭಾರತೀಯರ ಮೇಲೆ ನಡೆಯುತ್ತಿದ್ದ ಅತ್ಯಾಚಾರಗಳು, ಮುಖಂಡರ ದಸ್ತಗಿರಿಗಳು, ಇವೆಲ್ಲವೂ ವಸಾಹತುಶಾಹಿಯಿಂದ ಉಂಟಾದ ಪಲ್ಲಟಗಳು ಹಾಗೂ ಬಿಕ್ಕಟ್ಟುಗಳನ್ನು ಎಂಬುದನ್ನು ಈ ಕಾದಂಬರಿ ಪ್ರತಿಬಿಂಬಿಸುತ್ತದೆ.

'ನಾನು ಹೇಳಿದ್ದೆ ನಿನಗೆ ಮೊದಲೇ ಈಗಿನ ವಿದ್ಯಾಭ್ಯಾಸ ಹುಡುಗರನ್ನೇ ಹಾಳು ಮಾಡಿಬಿಡುತ್ತದೆ ಎಂದು! ದೇವರು ದಂಡಿರು ಭಕ್ತಿಗಿಕ್ತಿ ಜೊತೆಗೆ ನೂರಾರು ಹವ್ಯಾಸಗಳನ್ನು ಕಲಿತುಬಿಡುತ್ತಾರೆ. ನಿನ್ನ ಮನೆ ಜಮೀನು ಉಳಿಯಬೇಕಾದರೆ ಅವರ ಓದು ನಿಲ್ಲಿಸಿ ಮದುವೆ ಗಿದುವೆ ಮಾಡಿ ಕೆಲಸಕ್ಕೆ ಹಚ್ಚು, ಸಂಸಾರ ತಲೆಗೆ ತಾಗಿದರೆ ಆಗ ಬುದ್ಧಿ ಬರುತ್ತದೆ'[3]

ಈ ಮೇಲಿನ ಸನ್ನಿವೇಶವು ಆಧುನಿಕ ಶಿಕ್ಷಣದಿಂದ ಏರ್ಪಟ್ಟಂತಹ ಬದಲಾವಣೆಗಳ ಭಯ ಹಾಗೂ ಆತಂಕದ ಕ್ಷಣಗಳ ಸಂಕೀರ್ಣತೆಯನ್ನು ಈ ಕಾದಂಬರಿ ಬಿತ್ತರಿಸುತ್ತದೆ. ಜೊತೆಗೆ ಭಾರತೀಯ ಸಮಾಜದಲ್ಲಿ ಮನೆಮಾಡಿಕೊಂಡಿರುವ ಜಾತಿಭೇದ, ವರ್ಗವೈಷಮ್ಯ, ಬಡತನ, ಸುಲಿಗೆ, ಶೋಷಣೆ, ಮೌಢ್ಯ ಮುಂತಾದವುಗಳಲ್ಲಿ ಪಲ್ಲಟಗಳು ಕಾಣಿಸಿಕೊಂಡದನ್ನು ಕಾದಂಬರಿಯಲ್ಲಿ ಅನಾವರಣಗೊಳ್ಳುತ್ತಾ ಹೋಗುತ್ತದೆ. ಪ್ರಧಾನವಾಗಿ ಹೂವಯ್ಯ ಮತ್ತು ರಾಮಯ್ಯ ಇಬ್ಬರು ಆಧುನಿಕ ಶಿಕ್ಷಣದಿಂದ ಪ್ರೇರಣೆಹೊಂದಿದ ಹೊಸ ತಲೆಮಾರುಗಳ ಪ್ರತಿನಿಧಿಗಳು. ಹಾಗೆಯೇ ಎರಡೂ ಪಾತ್ರಗಳು ಕಾನೂರು ಜನತೆಯಲ್ಲಿ ಇದ್ದಂತಹ ಅಜ್ಞಾನವನ್ನು ಕಿತ್ತೆಸೆಯಲು ಪ್ರಯತ್ನಿಸಿದವರು. ಮುಖ್ಯವಾಗಿ ಅಗ್ರಹಾರದ ವೆಂಕಪ್ಪ ಜೋಯಿಸರಿಗೆ ತಾವು ಮಾಡುವಂತಹ ಕುತಂತ್ರಗಳು ಎಲ್ಲಿ ಬಯಲಿಗೆ ಬರುತ್ತವೆಯೋ ಎಂಬಂತಹ ಆತಂಕ ಹಾಗೆಯೇ ಶಿಕ್ಷಣದಿಂದ ಹೊಸ ಆಲೋಚನ ಕ್ರಮಗಳು ಆಗಮಿಸುವುದರಿಂದ ಜೋಯಿಸರು ತಮ್ಮ

ವ್ಯವಹಾರಕ್ಕೆ ಎಲ್ಲಿ ಧಕ್ಕೆ ಉಂಟಾಗುತ್ತದೆಂಬ ಆತಂಕವನ್ನು ಈ ಹೊಸ ನಾಗರಿಕ ಪ್ರತೀಕಗಳು ಸೃಷ್ಟಿಸುತ್ತವೆ. ಹೀಗಾಗಿ ಹೂವಯ್ಯ ವೈಚಾರಿಕ ಪ್ರತಿನಿಧಿಯಾದರೆ ವೆಂಕಪ್ಪಯ್ಯ ಜೋಯಿಸರು ಸಂಪ್ರದಾಯವಾದಿಯಾಗಿ ಪುರೋಹಿತಶಾಹಿಯ ಪ್ರತಿನಿಧಿಯಾಗುತ್ತಾರೆ. ಈ ಇಬ್ಬರ ಸಂಭಾಷಣೆಯಲ್ಲಿ ಪುರೋಹಿತಶಾಹಿಯ ಒಳ-ಹೊರಗುಗಳ ಅಂತರಾಳವು ಬದಲಾಗುತ್ತ ಹೋಗುತ್ತದೆ. ಈ ಹಿನ್ನೆಲೆಯಲ್ಲಿ ಗಮನಿಸಿದಾಗ ಜೋಯಿಸರ ಸ್ವಾರ್ಥ ಅನಾವರಣವಾಗುವುದನ್ನು ನೋಡಬಹುದು ಮತ್ತು ತನ್ನ ಮೌಢ್ಯವೆಂಬ ಶಿಕ್ಷಣಕ್ಕೆ ಎಲ್ಲಿ ಹಾನಿಯುಂಟಾಗುತ್ತದೆಂಬ ಆತಂಕದಿಂದ ಚಂದ್ರಯ್ಯಗೌಡರಿಗೆ ಕಿವಿ ಹಿಂಡುವ ಕೆಲಸ ನಿರ್ವಹಿಸುತ್ತಿರುತ್ತಾರೆ. ಒಂದೆಡೆ ಹೊಸ ತಲೆಮಾರು ಭಾರತೀಯ ಚಲನಶೀಲತೆಗಾಗಿ ಹಾತೊರೆಯುತ್ತಿದ್ದರೆ ಇನ್ನೊಂದೆಡೆ ಅದೇ ಸಮಾಜದಲ್ಲಿನ ಹಳೆಯ ತಲೆಮಾರು ಈ ಬಗ್ಗೆ ಆತಂಕಿತರಾಗಿ ಬದಲಾವಣೆಯನ್ನು ವಿರೋಧಿಸುವುದರ ಬಗ್ಗೆ, ಹೊಸ ಸಾಮಾಜಿಕತೆಯ ಬಗ್ಗೆ ಗುಮಾನಿಯಿಂದ ನೋಡುವ ಪ್ರವೃತ್ತಿಯನ್ನು ಕಾದಂಬರಿಯಲ್ಲಿನ ಘಟನೆಗಳು ಅನಾವರಣಗೊಳಿಸುತ್ತವೆ.

"ಹೌದು ದುಡಿದು ಹಾಕುವವರು ಒಬ್ಬರಿದ್ದರೆ ಮತ್ತೇನು ಮಾಡುತ್ತಾರೆ? ಅವನ ಪಾಲು ಅವನಿಗೆ ಕೊಟ್ಟು ಬೇರೆ ಹಾಕು! ಆಗೆಲ್ಲ ಸರಿಹೋಗುತ್ತದೆ. ಈ ಶೂದ್ರ ಮಕ್ಕಳಿಗೆಲ್ಲ ಉಪನಿಷತ್ತು ಭಗವದ್ಗೀತೆ ಗಂಧವಾದರೂ ಗೊತ್ತಾಗುತ್ತದೆಯೆ? ನಮಗೇ ಗೊತ್ತಾಗುವುದಿಲ್ಲ"[4] ಎಂಬ ಪುರೋಹಿತಶಾಹಿಯ ಮಾತುಗಳು ಭಾರತೀಯ ಸಂಪ್ರದಾಯಿಕ ವ್ಯವಸ್ಥೆಯನ್ನೇ ಎತ್ತಿ ಹಿಡಿಯುತ್ತವೆ. ಭಾರತೀಯ ಸಮಾಜದ ಸ್ಥಗಿತತೆಯನ್ನೇ ವಿರೋಧಿಸುತ್ತಾ ಸಮಾಜವು ಚಲನಶೀಲವಾಗಬೇಕೆಂದು ಪ್ರಗತಿಪರವಾಗಿ ಚಿಂತಿಸುವವರನ್ನು ದಡ್ಡರಂತೆ ಕಾಣುತ್ತದೆ. ಇದನ್ನೇ ವೆಂಕಪ್ಪ ಜೋಯಿಸರಂತಹ ಪಾತ್ರಗಳ ಮೂಲಕ ಕಾಣಬಹುದಾಗಿದೆ.

ಪುರೋಹಿತಶಾಹಿ ವ್ಯವಸ್ಥೆ ಒಡ್ಡಿದ ಮತ್ತೊಂದು ಕ್ರೌರ್ಯವೆಂದರೆ ಶೂದ್ರನು ವಿದ್ಯೆ ಕಲಿಯುವುದು ಮಹಾಪಾಪ ಎಂಬ ವಿಚಾರ. ಆದರೆ ಶೂದ್ರರು ವಿದ್ಯೆಯನ್ನು ಕಲಿತು ಪುರೋಹಿತಶಾಹಿ ವ್ಯವಸ್ಥೆಗೆ ಮುಖಾಮುಖಿಯಾಗಿರುವುದನ್ನು ಈ ಕಾದಂಬರಿ ಸಮರ್ಥವಾಗಿ ಅಭಿವ್ಯಕ್ತಿಸುತ್ತದೆ. ಸಹಜ ಸಾಮರ್ಥ್ಯ, ಸ್ವಂತ ಪರಿಶ್ರಮ, ಪ್ರಯೋಗಶೀಲತೆ, ಕಲಿಯುವ ಬಗೆಗಿನ ಶ್ರದ್ಧೆ ಹಾಗೂ ಕಲಿಯುವ ಗಾಢ ಅನುಭವಗಳು ಈ ಕಾದಂಬರಿಯಲ್ಲಿ ದಟ್ಟವಾಗಿ ಗೋಚರಿಸುತ್ತವೆ. ಕಾದಂಬರಿಯಲ್ಲಿ ಚಂದ್ರಯ್ಯ ಗೌಡರ ಅವಿಭಕ್ತ ಕುಟುಂಬವನ್ನು ಹೊಡೆಯಲೆತ್ನಿಸುವ ಏಕೈಕ ವ್ಯಕ್ತಿ ವೆಂಕಪ್ಪಯ್ಯ ಜೋಯಿಸ. ಚಂದ್ರಯ್ಯಗೌಡರು ಯಾವಾಗಲೂ

ಮೂಢನಂಬಿಕೆಯ ಅಜ್ಞಾನದಿಂದ ಇರುವುದರಿಂದ ವೆಂಕಪ್ಪಯ್ಯ ಜೋಯಿಸರ ಮತಾಂಧತೆ ಶೂದ್ರ ಗೌಡನಿಗೆ ವೇದವಾಕ್ಯವಾಗುತ್ತದೆ. ಭಾರತೀಯ ಜಾತಿ ಸಮಾಜದ ಎರಡು ಭಿನ್ನ ಜಗತ್ತುಗಳಾದ ಊಳಿಗಮಾನ್ಯ ವ್ಯವಸ್ಥೆ ಹಾಗೂ ಪುರೋಹಿತಶಾಹಿಯ ಜಗತ್ತು ಇವರೆಡೂ ಒಂದಾಗಿ ಸೃಷ್ಟಿಸಿದ ಸಾಮಾಜಿಕ ಬಿಕ್ಕಟ್ಟು ಹಾಗೂ ಸಾಂಸ್ಕೃತಿಕ ಪಲ್ಲಟಗಳನ್ನು ಈ ಕಾದಂಬರಿ ಕ್ರಿಯಾತ್ಮಕವಾಗಿ ಅಭಿವ್ಯಕ್ತಿಸುತ್ತದೆ.

"ಹೂವಯ್ಯ ನೀವು ತಿಳಿದವರೆಂದುಕೊಂಡು ಹಳ್ಳಿಯವರಿಗೆ ಮೌಢ್ಯವನ್ನೇ ಉಪದೇಶ ಮಾಡಿ, ನಿಮಿತ್ತ ಹೇಳುವುದು, ವಿಭೂತಿ ಕೊಡುವುದು, ಸತ್ಯನಾರಾಯಣ ವ್ರತ ಮಾಡಿಸುವುದು, ದೆವ್ವ ಪಿಶಾಚಿಗಳಿಗೆ ಬಲಿಕೊಡುವುದು ಇದರಿಂದ ಹೊಟ್ಟೆ ಹೊರೆದುಕೊಳ್ಳುತ್ತಿದ್ದೀರಿ ಟ್ರಂಕು ತಗುಲಿ– ಬೆನ್ನು ನೋವಾಗಿದ್ದರೆ ಔಷಧಿ ಮಾಡಿ ಎಂದು ಹೇಳುವ ಬದಲು ಬೂದಿ ಕುಂಕುಮ ಹಚ್ಚಿ, ಮಂತ್ರ ಹಾಕಿಸಿ ಎಂದು ಹೇಳುತ್ತಿದ್ದೀರಲ್ಲ! ಇದು ಯಾವ ತತ್ವ ಶಾಸ್ತ್ರದಲ್ಲಿ ಹೇಳಿದೆ? ಹಾಗೆ ಹೇಳಿರುವ ಗ್ರಂಥಗಳಿದ್ದರೆ ಅವು ಮನ್ನಣೆಗೆ ಯೋಗ್ಯವಾದುವೆ? ನಿಮ್ಮ ಬೋಧನೆಯಿಂದ ಎಷ್ಟು ಜನರು ರೋಗಕ್ಕೆ ಸರಿಯಾದ ಮದ್ದು ಮಾಡದೆ ಬರಿ ಬೂದಿ ವಿಭೂತಿಗಳನ್ನೇ ಹಚ್ಚಿಕೊಂಡು ಪ್ರಾಣಕಳೆದುಕೊಳ್ಳುತ್ತಿದ್ದಾರೆ"[5] ಈ ಮೂಲಕ ವಸಾಹತುಶಾಹಿಯನ್ನೇ ವಿರೋಧಿಸುವ ಈ ನೆಲೆಯು ಮುಖ್ಯವಾಗಿ ಯಥಾಸ್ಥಿತಿಯನ್ನು ಕಾಪಾಡುವಲ್ಲಿ ಊಳಿಗಮಾನ್ಯ ವ್ಯವಸ್ಥೆ ಹಾಗೂ ಪುರೋಹಿತಶಾಹಿ ವ್ಯವಸ್ಥೆಗಳು ಸದಾ ಜಾಗೃತವಾಗಿರುತ್ತವೆ. ಹಾಗೆಯೇ ಇಲ್ಲಿನ ಜನಸಾಮಾನ್ಯರು ಹಿಂದುಳಿಯಲು ಒಂದು ಮುಖ್ಯಕಾರಣ, ಸಾಕ್ಷರತೆಯ ಅಭಾವ, ಪುರೋಹಿತಶಾಹಿ ಸಾರ್ವತ್ರಿಕ ಶಿಕ್ಷಣವನ್ನೇ ಪ್ರೋತ್ಸಾಹಿಸುವುದಿಲ್ಲ. ಅಂದರೆ ಇಲ್ಲಿನ ಅನರ್ಥಗಳಿಗೆಲ್ಲ ಪುರೋಹಿತಶಾಹಿಯ ಸಂಪೂರ್ಣವಾಗಿ ಹೊಣೆಯಾಗಿದೆ. ಜನರು ಮೂಢನಂಬಿಕೆ, ಕಂದಾಚಾರಗಳ ಕೂಪದಲ್ಲಿ ಮುಳುಗಿದ್ದಾರೆ. ಈ ಪುರೋಹಿತಶಾಹಿ ವರ್ಗ ಮೈಬಗ್ಗಿಸಿ ದುಡಿಯುವುದಿಲ್ಲ. ಹಳ್ಳಿಯವರಿಗೆ ಮೌಢ್ಯವನ್ನೇ ಉಪದೇಶ ಮಾಡಿ ತಮ್ಮ ತಂತ್ರಗಳಿಂದ ಜನಸಾಮಾನ್ಯರನ್ನೇ ಶೋಷಣೆ ಮಾಡುತ್ತಾರೆ ಇವರಿಗೆ ವೇದ–ಶಾಸ್ತ್ರ ಪುರಾರಣಗಳೇ ಬಂಡವಾಳ. ಅವುಗಳಿಂದಲೇ ಅವರ ಜೀವನ ಮಾಡುವುದಕ್ಕೆ ಯಾವ ಕೊರತೆಯು ಇಲ್ಲ. ಜೊತೆಗೆ ಬ್ರಾಹ್ಮಣರ ಅಗ್ರಹಾರದ ಊಟ, ರಸಾಯನ, ಶೂದ್ರರ ಪಾಲಿಗೆ ಸ್ವರ್ಗ ಭೋಜನ. ಇವರು ಜಾತಿಯ ಶ್ರೇಣಿಯಲ್ಲಿ ತುತ್ತ ತುದಿಯಲ್ಲಿದ್ದಾರೆ. ಚಂದ್ರಯ್ಯಗೌಡರಂತಹ ಲೇವಾದೇವಿ ಮತ್ತು ಭೂ ಒಡೆತನದಿಂದ ಹಣವನ್ನು ಪಡೆಯುವ ಸಂಚುಗಾರಿಕೆಯನ್ನು ಹೊಂದಿರುತ್ತಾರೆ ಮತ್ತು ಬೌದ್ಧಿಕವಾಗಿ ಎಲ್ಲರ ಮೇಲೂ ಅವರ ಹಿಡಿತವಿದೆ. ವೇದಪುರಾಣಗಳನ್ನು ಪ್ರಶ್ನಿಸುವ ಹೂವಯ್ಯನನ್ನು ಅವರು ಸಹಿಸರು. ತಮ್ಮ

ವರ್ಗಹಿತಶಕ್ತಿಯನ್ನು ಕಾಪಾಡಿಕೊಳ್ಳಲು ಎಂತಹ ನೀಚ ಕೆಲಸಕ್ಕೂ ಅವರು ಇಳಿಯಬಲ್ಲರು. ಒಟ್ಟಾರೆಯಾಗಿ ಇಲ್ಲಿ ಚರ್ಚಿಸಬೇಕಾದ ಅಂಶವೆಂದರೆ ಹೂವಯ್ಯ ಒಬ್ಬ ವಿದ್ಯಾವಂತ ಜೊತೆಗೆ ಸಮಾಜದಲ್ಲಿ ಆಗುವಂತಹ ದುಷ್ಟ ವ್ಯವಸ್ಥೆಯನ್ನು ಟೀಕಿಸುವಂತಹ ವೈಚಾರಿಕ ಜ್ಞಾನವುಳ್ಳ ವ್ಯಕ್ತಿ. ಮೂಢನಂಬಿಕೆಗಳ ವಿರುದ್ಧ ತಿರುಗಿ ಬೀಳುವ ಹೂವಯ್ಯನಿಗೆ ಸಮಾಜವನ್ನು ರಕ್ಷಿಸುವ ಮನೋಭಾವವು ಇದೆ ಮತ್ತು ಸಮಾಜವನ್ನು ಒಂದು ಹೊಸ ದಿಕ್ಕಿನತ್ತ ಚಲಿಸಬೇಕೆಂಬ ಹಂಬಲ ಹಾಗೂ ಉತ್ಕರ್ಷತೆ ಕೇವಲ ವೃಷ್ಠಿಯ ನೆಲೆಯಲ್ಲಿ ಮಾತ್ರ ಕಾಣಬಹುದು. ಜೊತೆಗೆ ಭಾರತೀಯ ಸಮಾಜದ ಕಂದಾಚಾರ, ಪುರೋಹಿತಶಾಹಿಯ ದುಶ್ಚಟಗಳ ವಿರುದ್ಧ ವೈಧಿಕ ಕ್ರಾಂತಿಯು ಆಗಬೇಕೆಂದು ಹಾತೊರೆಯುತ್ತಾನೆ. ಶೂದ್ರರು (ಶೋಷಿತರು) ವೈಚಾರಿಕ ಹಾಗೂ ವೈಜ್ಞಾನಿಕ ದೃಷ್ಟಿಯನ್ನು ಬಳಸಿಕೊಂಡು ಪಾರಂಪಾರಿಕ ನೆಲೆಗಳಿಂದ ಬಿಡಿಸಿಕೊಂಡು ಆಧುನಿಕ ಜಗತ್ತಿನ ಮನುಷ್ಯನಾಗಬೇಕೆಂದು ಹೂವಯ್ಯನಲ್ಲಿ ಪ್ರಧಾನವಾಗಿ ಕಾದಂಬರಿ ಉದ್ದಕ್ಕೂ ಪ್ರಕಟವಾಗುತ್ತಲೇ ಹೋಗುತ್ತದೆ. ಹೂವಯ್ಯ ಹೊಸ ಕಾಲದ ಸಾಮಾಜಿಕ ಪರಿವರ್ತನೆಯಿಂದ ರೂಪುಗೊಂಡ ವ್ಯಕ್ತಿತ್ವವಾಗಿ ಚಾರಿತ್ರಿಕವಾಗಿ ಬಹಳ ಮುಖ್ಯನಾಗುತ್ತಾನೆ.

'ಈ ಶೂದ್ರ ಸಂಘದ ಮಹಾಸಭೆಯಲ್ಲಿ ನಡೆದ ಕಥೆಯ ಪೂರ್ವೋತ್ತರವನ್ನೆಲ್ಲ ಕೇಳಿ, ಅಗ್ರಹಾರದ ಜೋಯಿಸರಾದ ವೆಂಕಪಯ್ಯನವರು ಮೊದಲಾಗಿ ವೇದ ಮೂರ್ತಿಗಳಾದ ಬ್ರಾಹ್ಮಣ ನಾಗರಿಕರೆಲ್ಲ ಹಾರಿಹಾರಿ ಬಿದ್ದು ನಕ್ಕು "ಹುಟ್ಟುಗುಣ ಸುಟ್ಟರೂ ಹೋದೀತೇ?" ತೆನಾಲಿ ರಾಮಕೃಷ್ಣ ಕರಿಯ ನಾಯಿಯನ್ನು ತೊಳೆದು ಬಿಳಿಯ ನಾಯಿಯನ್ನಾಗಿ ಮಾಡಿದ ಹಾಗೆ! ಎಂದರಂತೆ'.[6]

ಹೂವಯ್ಯನಂತಹ ಹೊಸ ತಲೆಮಾರು ಭಾರತೀಯ ಸಮಾಜದ ಆತ್ಮವಿಮರ್ಶೆಯನ್ನು ಮಾಡುವ ಪ್ರವೃತ್ತಿಗೆ ಒಳಗಾಗಿತ್ತು ಎಂಬುದನ್ನೆ ಹೂವಯ್ಯನ ಪಾತ್ರ ಸೂಚಿಸುತ್ತದೆ. ಸಾಮಾಜಿಕ ಅನಿಷ್ಟಗಳಿಂದ ಮನುಷ್ಯ ಸಾಮಾಜಿಕ ಪ್ರಗತಿಯನ್ನು ಸಾಧಿಸಬೇಕೆಂಬುದು ಇಲ್ಲಿನ ಆಶಯವಾಗಿದೆ. ಈ ಹಿನ್ನೆಲೆಯಲ್ಲಿ ಗಮನಿಸಿದಾಗ ಕುಡಿತ ಮಲೆನಾಡಿನವರಿಗೆ ಪರಂಪರಾನುಗತವಾಗಿ ಬಂದ ಅಭ್ಯಾಸ. ಈ ಅಭ್ಯಾಸ ಅತಿರೇಕಕ್ಕೆ ಹೋದಾಗ ಅದೊಂದು ಸಮಸ್ಯೆಯಾಗುತ್ತದೆ. ಕುಡಿತದಿಂದ ಆಗುವ ಅನಾಹುತಗಳು ಅನೇಕ ಕುಡಿತ ಮತ್ತು ಹೊಡೆತ ಮಲೆನಾಡಿನ ಮನೆಗಳಲ್ಲಿ ಕಂಡು ಬರುವ ದೊಡ್ಡ ಸಮಸ್ಯೆ ಕುಡಿದು ಬಂದು, ಗಂಡ ಹೆಂಡತಿಗೆ ಹೊಡೆಯುವುದು ಸಾಮಾನ್ಯ ಸಂಗತಿ, ಇದು ಮುಖ್ಯವಾಗಿ ಗೃಹಶಾಂತಿಗೆ ಮಾರಕವಾಗುತ್ತದೆ. ಒಟ್ಟಿನಲ್ಲಿ ಶೂದ್ರ ಸಮುದಾಯವು

ಧರ್ಮಸ್ಥಳ, ಕಾಶಿ ಮುಂತಾದ ಸ್ಥಳಗಳಿಗೆ ಹೋಗಿ ಆಣೆಮಾಡಿ ಇನ್ನೂ ಮುಂದೆ ಯಾವಾಗಲೂ ಕುಡಿಯುವಂತಿಲ್ಲ ಎಂದು ಷರತ್ತುಗಳನ್ನು ಹಾಕಿಕೊಳ್ಳುತ್ತಾರೆ. ಆದರೆ ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಪುರೋಹಿತಶಾಹಿ ಸಮುದಾಯವು ಶೂದ್ರ ಸಮುದಾಯಗಳ ಬಗ್ಗೆ ಬಹಳ ವ್ಯಂಗ್ಯವಾಗಿ ಮಾತಾಡಿಕೊಳ್ಳುತ್ತಾರೆ. ವೆಂಕಪ್ಪಯ್ಯ ಜೋಯಿಸರಿಗೆ ಬೆಳಿಗ್ಗೆ ಎದ್ದನಂತರ ಹಣದ ಲೇವಾದೇವಿಗೆ ಚಂದ್ರಯ್ಯಗೌಡರು ಬೇಕು. ಆದರೆ ಶೂದ್ರ ಸಮುದಾಯದ ಬಗ್ಗೆ ಎಂತಹ ಕೀಳರಿಮೆ ಹೇಗಿತ್ತು ಎಂಬುದನ್ನು ಈ ಮೂಲಕ ತಿಳಿದುಕೊಳ್ಳಬಹುದು. ಜೊತೆಗೆ ಜಾತಿ ಇದು ಯಾವಾಗಲೂ ಅವಕಾಶವಾದಿಯ ರಾಜಕಾರಣಕ್ಕೆ ಮುಖ್ಯಧಾತುವಾಯಿತೇ ಹೊರತು ಮೂಲಭೂತವಾದ ಬದಲಾವಣೆ ಸಾಧ್ಯವಾಗಲೇ ಇಲ್ಲ. ಆದರೆ ಜಾತಿ ವಿನಾಶದ ಬಗ್ಗೆ ಅಲ್ಲಲ್ಲಿ ಕಿರು ದನಿಗಳು ಮಾತ್ರ ಕಾಣಿಸಿಕೊಳ್ಳುತ್ತದೆಯೇ ಹೊರತು ಜಾತಿಯಿಂದ ಬಿಡುಗಡೆ ಸಾಧಿಸಬೇಕೆಂಬ ಸಾಮಾಜಿಕ ಬದ್ಧತೆ ಪ್ರಾಮಾಣಿಕವಾಗಿ ಕಂಡು ಬರುವುದಿಲ್ಲ. ಜಾತಿ ಎನ್ನುವುದು ವ್ಯಕ್ತಿ ವಿರೋಧಿ ಮತ್ತು ಕಟ್ಟುಪಾಡುಗಳಿಂದ ಕೂಡಿದ್ದಾಗಿದೆ. ಇದರಿಂದ ಜನರ ಮಧ್ಯೆ ಕಠಿಣವಾದ ನಿರ್ಬಂಧಗಳಿರುತ್ತವೆ. ಊಳಿಗಮಾನ್ಯ ಸಮಾಜದಲ್ಲಿ ಒಂದು ಸಂಪೂರ್ಣ ವ್ಯವಸ್ಥೆಯಾಗಿ ವಿಕಸಿತಗೊಂಡಿದೆ. ಹೀಗಾಗಿ ಊಳಿಗಮಾನ್ಯತೆಯು ಜಾತಿ ವ್ಯವಸ್ಥೆಯ ಅಡಿಪಾಯವಾಗಿದೆ. ಅಸ್ಪೃಶ್ಯತೆ, ಜಾತಿಪದ್ಧತಿಯ ಅತ್ಯಂತ ಕೆಟ್ಟರೂಪ. ಅಸ್ಪೃಶ್ಯತೆಯ ಉದ್ದೇಶ ಶೋಷಣೆಯೇ ಆಗಿರುವುದರಿಂದ ಇದು ಸಾಮಾಜಿಕ ಸಂಬಂಧಗಳಲ್ಲಿ ಕಂಡು ಬರುತ್ತದೆಯೇ ಹೊರತು ಆರ್ಥಿಕ ಸಂಬಂಧಗಳಲ್ಲೆಲ್ಲ ಜಾತಿ ಹುಟ್ಟಿನಿಂದಲೂ ಬಡವರನ್ನು ಶೋಷಿಸುವ ಸಾಧನವಾಗಿ ಕೆಲಸ ಮಾಡುತ್ತಿದೆ. ಹೀಗಾಗಿ ಸಾಮಾಜಿಕ ಬದಲಾವಣೆ ಬಗ್ಗೆ ಕಾಳಜಿ ಹೊಂದಿರುವ ವ್ಯಕ್ತಿಯನ್ನು ಗುರುತಿಸಲಾಗುತ್ತದೆ.

ಶತಶತಮಾನಗಳಿಂದಲೂ ನಿರಂತರವಾಗಿ ದಲಿತರ ಮೇಲೆ ಸಾಮೂಹಿಕ ಅತ್ಯಾಚಾರಗಳು, ಜಾತಿಯ ದೌರ್ಜನ್ಯಗಳು ನಡೆಯುತ್ತಲೇ ಇವೆ. ಆಳುವ ವರ್ಗಗಳ ನಡುವಿನ ಕಚ್ಚಾಟದಲ್ಲಿ ದಲಿತರನ್ನು ಪಗಡೆ ಕಾಯಿಗಳನ್ನಾಗಿ ಬಳಸಿಕೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ಮತ್ತು ಕೆಳಜಾತಿಗಳು ತಮ್ಮ ಹಕ್ಕುಗಳಿಗಾಗಿ ಜಾತಿ ಧರ್ಮದ ವಿರುದ್ಧ ಹೋರಾಡುತ್ತಿದ್ದಾರೆ. ಅಸ್ಪೃಶ್ಯತೆ ನಾಶವಾಗಬೇಕಿದ್ದಲ್ಲಿ, ದೌರ್ಜನ್ಯ ನಿಲ್ಲಬೇಕಿದ್ದಲ್ಲಿ ಈ ಸಾಮಾಜಿಕ ರಚನೆ ಮತ್ತು ಜಾತಿ ವ್ಯವಸ್ಥೆಯನ್ನು ಕಾಪಾಡುವ ಪ್ರಭುತ್ವವನ್ನು ನಿರ್ಮೂಲನಗೊಳಿಸುವುದು ಅಗತ್ಯ.

'ಅಂಬೇಡ್ಕರ್'ರವರ ಪ್ರಕಾರ ಜಾತಿಪದ್ಧತಿಯ ಅವಿಭಾಜ್ಯ ಅಂಗವಾದ ವೃತ್ತಿ ವಿಭಜನೆಯನ್ನು ಇನ್ನೊಂದು ದೃಷ್ಟಿಯಲ್ಲಿ ನೋಡಿದಾಗಲೂ ಸಹ ಇದರಷ್ಟು ಅಮಾನುಷ ದುಷ್ಟ

ಪದ್ಧತಿ ಇನ್ನೊಂದಿಲ್ಲ. ಯಾವ ಕಾರ್ಯಗಾರವೂ ಎಂದಿಗೂ ಸ್ಥಿರವಲ್ಲ. ಪ್ರತಿಕ್ಷಣದಲ್ಲೂ ಅದು ಶೀಘ್ರ ಬದಲಾವಣೆಗಳನ್ನು ಸ್ವಾಗತಿಸುತ್ತಿರುತ್ತದೆ. ಹಾಗೆ ಬದಲಾವಣೆ ಕಾರ್ಯಗಾರದೊಡನೆ ವ್ಯಕ್ತಿಯು ಸಹ ತನ್ನ ವೃತ್ತಿಯನ್ನು ಬದಲಾಯಿಸಿಕೊಳ್ಳುವುದು ಅನಿವಾರ್ಯವಾಗುತ್ತದೆ. ಹಾಗಲ್ಲದೆ ಆ ಬದಲಾವಣೆಗೆ ಹೊಂದಿಕೊಳ್ಳುವಂಥ ಸ್ವಾತಂತ್ರ್ಯವೇ ಅವನಿಗಿಲ್ಲದೆ ಹೋದಾಗ ಅವನ ಬದುಕು ಕೇವಲ ಯಂತ್ರದ ಒಂದು ಬಿಡಿಭಾಗದಂತಾಗಿ ಸವೆದು ಹೋದ ಮೇಲೆ ಮೂಲೆಗೆಸೆಯುವಂತಾಗುತ್ತದೆ. ಒಂದು ವೇಳೆ ಹಿಂದುಗಳು ತಮ್ಮ ವಂಶಪಾರಂಪರ್ಯವಾದ ವೃತ್ತಿಯನ್ನು ಒಟ್ಟು ಇತರ ವೃತ್ತಿಯನ್ನು ಅವಲಂಬಿಸಲು ಹೊರಟರೆ, ಜಾತಿಪದ್ಧತಿ ಅಂಥವರನ್ನು ಸುಮ್ಮನೇ ಬಿಡುವುದಿಲ್ಲ. ಒಬ್ಬ ಹಿಂದೂ ನಿರುದ್ಯೋಗಿಯಾಗಿ ಉಪವಾಸ ಬೀಳುವ ಬದಲು ಯಾವುದಾದರೂ ಇನ್ನೊಂದು ಉದ್ಯೋಗವನ್ನು ಮಾಡುವುದೇ ಮೇಲು ಎಂದರೆ ಅವನ ಜಾತಿಪದ್ಧತಿ ಅದಕ್ಕೆ ಖಂಡಿತವಾಗಿ ಒಪ್ಪುವುದಿಲ್ಲ'.[7]

ಮೇಲಿನ ಅಂಶವನ್ನು ಗಮನಿಸಿದಾಗ ನಂಜನು ಜಾತಿಯಲ್ಲಿ ಕುಂಬಾರನಾಗಿದ್ದರೂ ಬೇರೆ ಉದ್ಯೋಗವನ್ನು ಮಾಡುವುದಕ್ಕೆ ಆಗುವುದಿಲ್ಲ. ಏಕೆಂದರೆ ಶ್ರೇಣಿಕೃತವಾದಂತಹ ವ್ಯವಸ್ಥೆ ಬಿಡುವುದಿಲ್ಲ. ನಂಜನು ಅನೇಕ ಕುಲಕಸುಬುಗಳನ್ನು, ತನ್ನ ಸ್ವಂತ ಪರಿಶ್ರಮದಿಂದ ತನ್ನದಾಗಿಸಿಕೊಂಡಿರುತ್ತಾನೆ ಮತ್ತು ನಂಜನು ಆರ್ಥಿಕವಾಗಿ ಹಿಂದುಳಿದು ಬಡತನದ ಬೇಗೆಯಿಂದ ಬಳಲುತ್ತಿರುವುದರಿಂದ ಬೇರೆ ದಾರಿಯಿಲ್ಲದೆ ಅದೇ ವೃತ್ತಿಯನ್ನು ಅವಲಂಬಿಸಬೇಕಾಗುತ್ತದೆ. "ಅಂಗಡಿಯ ಹೊರಗೂ ಹಲವು ಜನರು ನೆರೆದಿದ್ದರು; ಒಳಗೆ ಮೇಲುಜಾತಿಯವರು, ಹೊರಗೆ ಕೀಳು ಜಾತಿಯವರು. ಅಂಗಡಿಯವನು ತನ್ನ ಮಗನೊಂದಿಗೆ ಮದ್ಯ ವಿನಿಯೋಗ ಕಾರ್ಯದಲ್ಲಿ ತೊಡಗಿದ್ದನು"[8] ಹೀಗೆ ಒಟ್ಟಾರೆಯಾಗಿ ಗಮನಿಸಿದಾಗ ಅಗ್ರಹಾರದಲ್ಲಿ ಜಾತಿ ಎಂಬುದು ಹೇಗೆ ಭಾರತೀಯ ಸಮಾಜದಲ್ಲಿ ಮೂಲಭೂತವಾಗಿ ಸಾಮಾಜಿಕ ವೈರುಧ್ಯಗಳನ್ನು ಸೃಷ್ಟಿಸಿದೆ, ಜೊತೆಗೆ ಇದು ಬ್ರಾಹ್ಮಣ–ದಲಿತ ಎಂಬುದರ ನಡುವಿನ ಅನಾಥವಾದ ತರತಮದ ಬಿರುಕನ್ನು ಉಂಟುಮಾಡಿದೆ. ವಸಾಹತುಶಾಹಿಯಲ್ಲಿ ಕೂಡ ಅಸ್ಪೃಶ್ಯರಲ್ಲಿ ಬದಲಾವಣೆಯ ತಲ್ಲಣವನ್ನು ತಂದಿತೇ ಹೊರತು ಆಳದಲ್ಲಿ ಮೇಲ್ಜಾತಿ ಹಾಗೂ ಬ್ರಾಹ್ಮಣ ತಾರತಮ್ಯವಾದ ವ್ಯವಸ್ಥೆಗಳನ್ನು ಸ್ವೀಕರಿಸಿತು. ಆದ್ದರಿಂದಲೇ ಅಂಬೇಡ್ಕರ್‌ರವರ ಆಕ್ರೋಶ ತೀವ್ರವಾಗಿ ಬೇರೆಯದೆ ಆಗಿತ್ತು. ಹಿಂದುಳಿದವರು ಹಾಗೂ ದಲಿತರ ಬದುಕಿನಲ್ಲಿ ಮಹತ್ತರವಾದ ಬದಲಾವಣೆಗಳು ಕಾಣಿಸಿಕೊಳ್ಳದಿದ್ದರೂ ಸಾಮಾಜಿಕ ಚಲನೆ ಎಂಬುದು ತುಸು ಮಟ್ಟಿಗಾದರೂ ಪಲ್ಲಟವನ್ನು ತಂದಿದೆ ಎಂಬುದು ಚಾರಿತ್ರಿಕವಾಗಿ ಸತ್ಯ. 'ಕೇವಲ ಅಂತರಜಾತೀಯ ಊಟದ ಕೂಟಗಳು

ಮತ್ತು ಅಂತರಜಾತಿ ಮದುವೆ ಮುಂತಾದ ಕಾರ್ಯಕ್ರಮಗಳಿಂದ ಜಾತಿವಿನಾಶ ಸಾಧ್ಯವಿಲ್ಲ. ನಿಜವಾದ ಜಾತಿವಿನಾಶದ ವಿಧಾನವೆಂದರೆ ಜನತೆಯ ಮನಸ್ಸಿನಲ್ಲಿರುವ ಧಾರ್ಮಿಕ ಕಲ್ಪನೆಯನ್ನು ಮೊದಲು ತೊಡೆದುಹಾಕಬೇಕು"[9] ಎಲ್ಲಾ ಜಾತಿಗಳು ಸಾಮೂಹಿಕವಾಗಿ ಊಟ ಮಾಡುವುದು ಸರ್ವಸಾಮಾನ್ಯವಾಗಿದೆ. ಆದರೆ ಅಂತರ್‌ಜಾತಿಯ ಮದುವೆಗಳು ಅಲ್ಲೊಂದು ಇಲ್ಲೊಂದು ಕಾಣಿಸಿಕೊಂಡರೂ ಸಹ ಜಾತಿ ಎನ್ನುವ ದುಷ್ಟ ಪ್ರಾಣಿಯನ್ನು ನಾಶಮಾಡಲು ಸಾಧ್ಯವಾಗಿಲ್ಲ. ಜೊತೆಗೆ ಜನತೆಯ ಮನಸ್ಸಿನಲ್ಲಿರುವಂತಹ ಮೇಲು-ಕೀಳಿನ ಕಲ್ಪನೆಯನ್ನು ಮೊದಲು ತೊಡೆದು ಹಾಕಬೇಕು. "ಅಂಗಳದಲ್ಲಿ ಆಡುತ್ತಿದ್ದ ಇಬ್ಬರು ಹುಡುಗರು ಓಬಯ್ಯನನ್ನು ಕಂಡೊಡನೆ ಶೂದ್ರನು ಬಂದನೆಂದು ಆಟವನ್ನು ಬಿಟ್ಟು ದೂರ ಹೋಗಿ ನಿಂತರು. ಓಬಯ್ಯ ಅವರನ್ನೇ ಮಾತಾಡಿಸಿದನು. ವೆಂಕಪ್ಪಯ್ಯನವರು ಮನೆಗೆ ಬಂದಿಲ್ಲವೆಂದು ಗೊತ್ತಾಯಿತು. ಓಬಯ್ಯನು ನೀರಡಿಕೆಯಾಗುತ್ತದೆ ಎಂದು ಹೇಳಿದ್ದರಿಂದ ಒಬ್ಬ ಹುಡುಗನು ಚೆಂಬಿನಲ್ಲಿ ತಣ್ಣೀರನ್ನು ಒಂದು ಸಣ್ಣ ಬಾಳೆ ಕೀರ್ತಿನಲ್ಲಿ ಕೆಂಬಣ್ಣದ ಜೋನಿ ಬೆಲ್ಲವನ್ನು ತಂದು ದೂರ ನಿಂತನು. ಓಬಯ್ಯ ಹತ್ತು ಹೆಜ್ಜೆ, ಹಿಂದಕ್ಕೆ ಸರಿದು ನಿಲ್ಲಲು, ಹುಡುಗನು ಮುಂದಕ್ಕೆ ಬಂದು ಚೆಂಬನ್ನು ಎಲೆಯನ್ನೂ ಅಂಗಳದಲ್ಲಿ ಇಟ್ಟು ಮತ್ತೆ ಹಿಂದಕ್ಕೆ ಹೋದನು. ಇನ್ನೊಬ್ಬ ಹುಡುಗನು "ಕಚ್ಚಿಕೊಂಡು ಕುಡಿಯಬೇಡೋ ಎತ್ತಿಕೊಂಡು ಕುಡಿ" ಎಂದನು'.[10] ಒಟ್ಟಾರೆಯಾಗಿ ವರ್ಗ ಸಮಾಜ ಹುಟ್ಟಿದ ಸಮಯದಲ್ಲೇ ಶೂದ್ರರಲ್ಲಿನ ಒಂದು ಭಾಗದವರನ್ನು ಅಸ್ಪೃಶ್ಯರೆಂದು ಕರೆದರು. ಬ್ರಾಹ್ಮಣೀಯ ಸಮಾಜದಲ್ಲಿ ಅಸ್ಪೃಶ್ಯರು ಮುಟ್ಟಿದ ನೀರು ಆಹಾರ, ವಸ್ತುಗಳು ಅಶುದ್ಧವೆಂಬ ಅಭಿಪ್ರಾಯ ಮೂಡಿತು ಮತ್ತು ಅಸ್ಪೃಶ್ಯರ ಗಂಡಸರ ಜೊತೆ ಸಂಬಂಧವಿಟ್ಟುಕೊಳ್ಳುವುದು ಪಾಪ ಎಂದು ಪರಿಗಣಿಸಲ್ಪಟ್ಟಿತು. ಚಂದ್ರಯ್ಯಗೌಡರ ಕಿರಿಯಮಗ ವಾಸು ಹೊಲೆಯರ ಭೈರನ ಮಗ ಮಾಂಸದ ಆಸೆಗಾಗಿ ಹಕ್ಕಿಯ ಮರಿಗಳನ್ನು ಕದ್ದನೆಂದು ಕೋಪದಿಂದ ಹಕ್ಕಿಯ ಬಿಸಾಡಿ ದಾರಿಯಲ್ಲಿ ಬೇಲರವನನ್ನು ಮುಟ್ಟಿದ್ದಕ್ಕೆ ಗಂಗನ ಮೈಗೆ ಗುದ್ದಿ ತನ್ನ ಜೇಬಿನಲ್ಲಿದ್ದ ಹಕ್ಕಿಯನ್ನು ಮುಟ್ಟಿದ್ದಕ್ಕೆ ಪ್ರಾಯಶ್ಚಿತ್ತವಾಗಿ ಹಟ್ಟಿಗೆ ಹೋಗಿ ಸಗಣಿಯನ್ನು ಮೆಟ್ಟಿ ಹಿತ್ತಲ ಕಡೆಯ ಬಾಗಿಲಿನಿಂದ ಮನೆಯನ್ನು ಪ್ರವೇಶಿಸಿದಾಗ ಯಾವ ಪ್ರಕ್ರಿಯೆಯಲ್ಲೂ ವ್ಯಕ್ತವಾಗುವುದಿಲ್ಲ. ಈ ವಿವರಣೆಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಧರ್ಮದ ಕಲ್ಪನೆ, ಜಾತಿವ್ಯವಸ್ಥೆ, ಮೌಢ್ಯತೆ ಮೊದಲಾದ ಅನಿಷ್ಟ ಆಚಾರ, ನಂಬಿಕೆ.. ಮುಂತಾದವುಗಳನ್ನು ಆಧುನಿಕ ಸಾಮಾಜಿಕ ಸಂದರ್ಭದಲ್ಲಿ ಬಲಗೊಳ್ಳುವವೆಂಬ ಸೂಚನೆಯನ್ನು ನೀಡುತ್ತ ಹಾಗೆಯೇ ಜೋಯಿಸರ ಮಕ್ಕಳು ಕಂದಚಾರದಿಂದ ಜಿಗುಪ್ಸೆಗೊಂಡು ಹೊರಟುಹೋಗುತ್ತಾರೆ. ಇಲ್ಲಿ ಬ್ರಾಹ್ಮಣ ಶಾಹಿಯಲ್ಲಿ ಬೆಳೆದು ಬಂದ ಮಕ್ಕಳ ರೀತಿ ನೀತಿಗಳನ್ನು ಈ ಮೇಲಿನ ಅಂಶದಿಂದ ಕಾಣಬಹುದಾಗಿದೆ. ಪುರೋಹಿತಶಾಹಿಯ ಕಪಿಮುಷ್ಟಿಗೆ ಸಿಕ್ಕಿ ದಲಿತರ

ಬದುಕು ಸಂಕಷ್ಟಕ್ಕೆ ಸಿಲುಕಿ ಅನೇಕ ಶತಮಾನಗಳೇ ಆಗಿದ್ದವು. ವಸಾಹತು ಶಾಹಿಯ ಶಿಕ್ಷಣವು ಒಂದು ಹೊಸ ಚೈತನ್ಯವನ್ನು ಹಾಗೆಯೇ ವೈಜ್ಞಾನಿಕ ಮತ್ತು ವೈಚಾರಿಕ ದೃಷ್ಟಿಕೋನವನ್ನು ಹೊಸ ಎಚ್ಚರವನ್ನು ತಂದುಕೊಟ್ಟಿತ್ತೆಂಬುದು ಚಾರಿತ್ರಿಕ ವಾಸ್ತವ.

ಒಟ್ಟಿನಲ್ಲಿ ಜಾತಿವಿನಾಶದ ಬಗ್ಗೆ ಆಳವಾಗಿ ಯೋಚಿಸಿದವರಲ್ಲಿ ಅಂಬೇಡ್ಕರ್ ಮೊದಲ ಭಾರತೀಯರು. ಇದಕ್ಕೆ ಸಂಬಂಧಪಟ್ಟ ವಿಚಾರಗಳು ಅವರ ಹಲವಾರು ಕೃತಿ-ಕಾರ್ಯ ಚಟುವಟಿಕೆಗಳಲ್ಲಿ ಅಡಕವಾಗಿದೆ. ಅಂದಿನ ಧಾರ್ಮಿಕ ಸಾಮಾಜಿಕ ಪರಿಸರದಲ್ಲಿ ಎಲ್ಲಕ್ಕೂ ಧರ್ಮ ಶಾಸ್ತ್ರಗಳ ಅನುಮತಿಯನ್ನು ನಿರಾಕರಿಸಿದರು. ಮೊದಲನೆಯದಾಗಿ ಅವರು ಹಿಂದೂ ಧರ್ಮದ ತಾತ್ವಿಕ ತಳಹದಿಯನ್ನೇ ಬದಲಾಯಿಸಬೇಕು, ಯಾಕೆಂದರೆ ಜಾತಿ ಹಿಂದೂ ಧರ್ಮ ಶಾಸ್ತ್ರಗಳಿಂದ ಘೋಷಿತವಾಗಿದೆ. ಅವುಗಳ ಆಧಾರಗಳಿಂದ ಶಾಸ್ತ್ರಗಳನ್ನು ತಿರಸ್ಕರಿಸಬೇಕು, ಅಂತರಜಾತೀ ವಿವಾಹಗಳಾಗಬೇಕು, ಪೌರೋಹಿತ್ಯ ವಂಶ ಪಾರಂಪರ್ಯವಾಗಿರುವುದನ್ನು ತಪ್ಪಿಸಿ, ಅರ್ಹತೆಯಿರುವ ಯಾರಾದರೂ ಪುರೋಹಿತರಾಗಲು ಅವಕಾಶವಿರಬೇಕು. ಆದರೆ ಪೌರೋಹಿತ್ಯ ಸಾಮಾಜೀಕರಣವಾಬೇಕು, ಹಿಂದೂ ಧರ್ಮ ಗ್ರಂಥ ಒಂದೇ ಇರಬೇಕು. ಇದರ ಮೂಲಕ ಜಾತಿವಿನಾಶ ಸಾಧ್ಯ ಎಂದು ಅಭಿಪ್ರಾಯ ಅಂಬೇಡ್ಕರ್‌ರವರದು. ಈ ಹಿನ್ನೆಲೆಯಲ್ಲಿ ಜಾತಿ ವಿನಾಶದ ಬಗ್ಗೆ ಹೋರಾಟ ಮಾಡಿದಂತಹ ಸಂದರ್ಭದಲ್ಲಿ ಧರ್ಮವನ್ನು ಹೊರತುಪಡಿಸಿ ಜಾತ್ಯಾತೀತವಾಗಿ ಮಾತನಾಡಬೇಕು. ಜೊತೆಗೆ ಪುರೋಹಿತಶಾಹಿಯನ್ನು ಒಂದೇ ಜಾತಿಗೆ ಅನ್ವಯಿಸದಂತೆ ಮತ್ತು ಅರ್ಹತೆಯ ಆಧಾರದ ಮೇಲೆ ಅವಕಾಶಗಳನ್ನು ಕಲ್ಪಿಸಿಕೊಟ್ಟಂತ ಸಂದರ್ಭದಲ್ಲಿ ಜಾತಿವಿನಾಶವನ್ನು ತೊಡೆದು ಹಾಕುವುದಕ್ಕೆ ಸಾಧ್ಯವಾಗುತ್ತದೆ. ಇದನ್ನೇ ಕಾದಂಬರಿಯಲ್ಲಿ ಬರುವಂತಹ ಜಾತಿವ್ಯವಸ್ಥೆಗೆ ಅನುಸರಿಸಿದ ಸಂದರ್ಭದಲ್ಲಿ ಬ್ರಾಹ್ಮಣರ ಪ್ರತಿನಿಧಿಯಿಂದ ವೆಂಕಪ್ಪಯ್ಯ ಜೋಯಿಸರು ಯಾವುದೇ ವಿದ್ಯಾಭ್ಯಾಸದ ಅರ್ಹತೆಯಿಲ್ಲದೆ ತಮ್ಮ ಹಳೆಯ ಕಂದಚಾರಗಳನ್ನೇ ಮುಂದಿಟ್ಟುಕೊಂಡು ಪರಂಪರಾನುಗತವಾಗಿ ನಡೆಸಿಕೊಂಡು ಬಂದಿದ್ದಾರೆ. ವೆಂಕಪ್ಪಯ್ಯ ಜೋಯಿಸರು ಚಂದ್ರಯ್ಯಗೌಡರಿಗಿಂತಲೂ ಕಿರಿಯವರಾದರೂ ಕೀಳುಜಾತಿಯಲ್ಲಿರುವ ಗೌಡರನ್ನು ಏಕವಚನದಲ್ಲಿಯೇ ಮಾತನಾಡಿಸುತ್ತಾರೆ. ಆದರೆ ಕಾದಂಬರಿಯಲ್ಲಿ ಆಧುನಿಕ ವಿದ್ಯಾಭ್ಯಾಸದ ಅರ್ಹತೆಯನ್ನು ಪಡೆದಿರುವ ಹೂವಯ್ಯ ಮೂಢನಂಬಿಕೆ ಕಂದಚಾರಗಳ ಬಗ್ಗೆ ತಿರಸ್ಕಾರವನ್ನು ಉಂಟುಮಾಡುವ ಮತ್ತು ವೆಂಕಪ್ಪಯ್ಯ ಜೋಯಿಸರಿಗಿಂತಲೂ ವಿದ್ಯಾವಂತನಾದರೂ ಜಾತಿಯ ಸಂದರ್ಭವು ಬಂದಾಗ ಯಾಕೆ ಅವನ ಅಂತಸ್ತು ಕಡಿಮೆಯಾಗುತ್ತದೆ ಮತ್ತು ಚಂದ್ರಯ್ಯಗೌಡರು ಮನೆ ಆಸ್ತಿಗಳನ್ನು ಪಾಲು ಮಾಡುವ

ಸಂದರ್ಭದಲ್ಲಿ ಆಸ್ತಿಗಳನ್ನು ಹೇಗೆ ಪಾಲುಮಾಡಿಕೊಳ್ಳುತ್ತಾರೋ ಹಾಗೆಯೇ ದಲಿತರನ್ನು ತಮ್ಮ ಹೊಲಗದ್ದೆಗಳಲ್ಲಿ ದುಡಿಸಿಕೊಳ್ಳುವುದಕ್ಕೆ ಪಾಲು ಮಾಡಿಕೊಳ್ಳುತ್ತಾರೆ. ಇಲ್ಲಿ ಮುಖ್ಯವಾಗಿ ಹೂವಯ್ಯ ಒಬ್ಬ ವೈಚಾರಿಕತೆಯನ್ನು ಹೊಂದಿರುವಂತಹನು ಇವನು ದಲಿತರಿಗೆ ಪಾಲುಕೊಡಿಸುವುದರ ಮುಖಾಂತರ ಪ್ರತಿಭಟಸುತ್ತಾನೆ. ದಲಿತರಿಗೆ ಬ್ರಾಹ್ಮಣರು ಬೌದ್ಧಿಕ ಶೋಷಣೆಯ ಒಂದು ಭಾಗವಾದರೆ ಗೌಡರು ಜಾತಿಯ ಶೋಷಣೆಯ ಇನ್ನೊಂದು ಭಾಗವಾಗಿದ್ದಾರೆ. ಹಿಂಸೆಯ ಭಿನ್ನರೂಪಗಳು ದಮನಿತವಾದ ದಲಿತರನ್ನು ಮತ್ತು ಅವರ ಸಾಮಾಜಿಕ ಘನತೆ ಹಾಗೂ ವ್ಯಕ್ತಿತ್ವವನ್ನು ಘಾಸಿಗೊಳಿಸುತ್ತಲೇ ಬರುತ್ತಿವೆ ಎಂಬುದರ ಸ್ಪಷ್ಟ ಚಿತ್ರಣ ಕುವೆಂಪು ಕಾದಂಬರಿಯಲ್ಲಿ ದಟ್ಟವಾಗಿ ವ್ಯಕ್ತವಾಗಿದೆ.

ಜಾತಿಯನ್ನು ವರ್ಗದಿಂದ ಭಿನ್ನವಾಗಿಸುವ ಅಂಶವೇನೆಂದರೆ ವರ್ಗ ಸಂಬಂಧದೊಳಕ್ಕೆ ಪ್ರವೇಶ ಮಾಡಿರುವ ಜಡತೆ ಮತ್ತು ಒಂದು ಇಡೀ ಜಾತಿಯು ಅಂತಸ್ತು ಹಾಗೂ ಆದಾಯದಲ್ಲಿ ಮೇಲಿರುವುದರಲ್ಲಿ ಇರುವ ಜಡತೆ– ಚಲನಶೀಲ ಜಾತಿಯೇ ವರ್ಗ ಜಡವಾದ ಒಂದು ವರ್ಗವೇ ಜಾತಿ. ಪ್ರತಿಯೊಂದು ಸಮಾಜಕ್ಕೆ ಅಥವಾ ನಾಗರಿಕತೆಗೆ ವರ್ಗದಿಂದ ಜಾತಿಗೆ ಜಾತಿಯಿಂದ ವರ್ಗಕ್ಕೆ ಆಗುವ ಈ ಚಲನೆಯ ಅನುಭವವಾಗಿಯೇ ಇದೆ'.[11] ಈ ಹಿನ್ನೆಲೆಯಲ್ಲಿ ಕಾದಂಬರಿಯಲ್ಲಿ ಶೂದ್ರರು ಇಡೀ ಅಂತಸ್ತು ಮತ್ತು ಆದಾಯಗಳಲ್ಲಿ ಒಂದು ಉನ್ನತ ಮಟ್ಟದಲ್ಲಿ ಇರುವಂತವರು ಜಾತಿಯ ಜಡತೆಯು ಯಾವ ಸಂದರ್ಭದಲ್ಲಿ ಆದರೂ ಕುಟುಂಬಗಳಲ್ಲಿ ಕಂಡುಬರಬಹುದು ಒಟ್ಟಿನಲ್ಲಿ ಚಂದ್ರಯ್ಯಗೌಡರು ಅಂತಸ್ತಿನಲ್ಲಿ ಮತ್ತು ಭೂಮಾಲೀಕರಲ್ಲಿ ತುಂಬಾ ಮೇಲುಸ್ಥಾನದಲ್ಲಿರುತ್ತಾರೆ. ಆದರೆ ಪುರೋಹಿತಶಾಹಿಯ ಬಂಧನಕ್ಕೆ ಸಿಲುಕಿ ಚಂದ್ರಯ್ಯಗೌಡರು ಹೇಗೆ ಪರಿತಪಿಸುತ್ತಾರೆಂಬುದನ್ನು ಈ ಕಾದಂಬರಿಯಲ್ಲಿ ಕಾಣಬಹುದು. ಶ್ಯಾಮಯ್ಯಗೌಡರ ಮಗಳು ಸೀತೆಯ ಬಾಳು ಹಾಳಾಗುವುದಕ್ಕೆ ವೆಂಕಪ್ಪಯ್ಯಜೋಯಿಸರೇ ಕಾರಣ. ಆದರೆ ಸೀತೆಯು ಒಲ್ಲದ ಮನಸ್ಸಿನಿಂದ ಒಪ್ಪಿಕೊಂಡು ಮದುವೆಮಾಡಿಕೊಳ್ಳುತ್ತಾಳೆ. ಜೋಯಿಸರು ಸೀತೆಯ ಮಾನಸಿಕ ತೊಂದರೆಗೆ ಚಿಕಿತ್ಸೆ ಮಾಡಿಸುವ ಬದಲು ಬರೆ ಹಾಕಿಸುತ್ತಾನೆ.

'ಸುಬ್ಬಮ್ಮ ದಾರಿದ್ರ್ಯದಲ್ಲಿ ಹುಟ್ಟಿ ಬೆಳೆದು, ಕುಸಂಸ್ಕೃತಿಯಿಂದ ಪೋಷಿತವಾದ್ದರಿಂದ ಅವರ ನಡೆನುಡಿ ಆಚಾರ ವ್ಯವಹಾರಗಳನ್ನು ಕಲಿತ ಸುಬ್ಬಮ್ಮನಲ್ಲಿ ಸುಸಂಸ್ಕೃತವಾದ ಸ್ತ್ರೀಸಹಜವಾದ ಔದಾರ್ಯ, ಗಾಂಭೀರ್ಯ, ನಯವಿನಯ, ಸಂಯಮ, ಸಂಚಲನಗಳು ಒಂದಿನಿತೂ ಇರಲಿಲ್ಲ. ಆದಕಾರಣ ಅದುವರೆಗೂ ಅವಕಾಶ ಸಿಕ್ಕಿತೆ ಅಹಂಕಾರ, ಛಲ, ದರ್ಪ, ಸ್ವಾರ್ಥಪರತೆ

ದುರಭಿಮಾನ ಮೊದಲಾಧ ಕಾಡು ಭಾವಗಳು ಯಜಮಾನರ ಪತ್ನಿಯಾದ ಕಾನೂರಿಗೆ ಹೆಗ್ಗಡಿತಿಯಾದ ಕೂಡಲೇ ಭಯಾನಕವಾಗಿ ಹಡೆಯೆತ್ತಿ ನಿಂತವು. ಆಕೆ ಎಲ್ಲದರಲ್ಲಿಯೂ ಎಲ್ಲರ ಮೇಲೆಯೂ ನಿರ್ದಾಕ್ಷಿಣ್ಯವಾಗಿ ಹುಕ್ಕುಂ ಚಲಾಯಿಸತೊಡಗಿದಳು. ಪ್ರತಿಯೊಂದರಲ್ಲಿಯೂ ಸಣ್ಣ ಬುದ್ಧಿಯೇ ಪ್ರಕಾಶಿತವಾಯಿತು. ಅದು ಎಷ್ಟು ಅಧೋಗತಿಗೆ ಇಳಿಯಿತೆಂದರೆ, ಹುಟ್ಟಿದಂದಿನಿಂದಲೂ ಸಾಬೂನಿನ ಹೆಸರನ್ನೇ ಕೇಳದೆ ಇದ್ದ ಆಕೆ, ಒಂದು ಸಾರಿ ನಾಗಮ್ಮನವರು ವಾಸುವಿನ ಮೈಗೆ ತನ್ನ ಸಾಬೂನನ್ನು ಹಚ್ಚಿದರೆಂದು ಕೇಳಿ ಬಾಯಿಗೆ ಬಂದಂತೆ ಬಯ್ದುಬಿಟ್ಟಳಂತೆ! ನಾಗಮ್ಮನವರಿಗೆ ಆ ಹೊಸ ಕಾಡು ರಾಣಿಯ ಆಳ್ವಿಕೆ ಸರಿಬೀಳಲಿಲ್ಲ. ಪುಟ್ಟಮ್ಮನಿಗಂತೂ ಸುಬ್ಬಮ್ಮನ ನೆರಳು ಕಂಡರೂ ಆಗದಂತಾಯಿತು. ತುಪ್ಪ ಬೆಣ್ಣೆ ಮೊದಲಾದ ಪದಾರ್ಥಗಳಿಗಂತೂ ಆ ಹೆಗ್ಗಡತಿ ಬೀಗ ಮುದ್ರೆ ಮಾಡಿಬಿಟ್ಟಳು. ಹೀಗಾಗಿ ಮನೆಯಲ್ಲಿ ಮೂರು ಹೊತ್ತು ಕದನವಾಗಿ ನೆಮ್ಮದಿ ತಪ್ಪಿಹೋಗಿತ್ತು'.[12]

ಸುಬ್ಬಮ್ಮ ನೆಲ್ಲಹಳ್ಳಿ ಪ್ರಾಚೀನವಾದರೆ ಕಾನೂರೇ ನವೀನ ಈ ಹೊಸಪರಿಸರಕ್ಕೆ ಹೊಸ ಮೌಲ್ಯ ವ್ಯವಸ್ಥೆ ತನ್ನನ್ನೇ ತಾನು ಹೊಂದಿಕೊಂಡು ಹೋಗುವುದು ಸುಬ್ಬಮ್ಮನ ಕರ್ತವ್ಯ. ಆದರೆ ಇದಕ್ಕೆ ಯಾವುದಕ್ಕೂ ಗಾಂಭೀರ್ಯದಿಂದ ನಡೆದುಕೊಳ್ಳುವುದಿಲ್ಲ. ಸುಬ್ಬಮ್ಮ ಇಷ್ಟೆಲ್ಲ ಕ್ರೂರವಾಗಿ ವರ್ತಿಸುತ್ತಿದ್ದರೂ ಚಂದ್ರಯ್ಯಗೌಡರು ಒಂದು ಮಾತನ್ನು ಕೇಳುವುದಿಲ್ಲ; ಕಾರಣವೆಂದರೆ ಸುಬ್ಬಮ್ಮನನ್ನು ಚಿಕ್ಕವಯಸ್ಸಿನಲ್ಲಿ ಮದುವೆಯಾಗಿರುವುದರಿಂದ ಚಂದ್ರಯ್ಯಗೌಡರ ಕಣ್ಣಿಗೆ ಸುಬ್ಬಮ್ಮ ಸುಂದರಿಯಾಗಿ ಕಾಣತೊಡಗುತ್ತಾಳೆ. 'ಹಳೆಯದಕ್ಕೆ ಹೊಸದಾದುದೆಲ್ಲವೂ ಸೌಂದರ್ಯವೇ' ಎನ್ನುವ ಹಾಗೆ ಚಂದ್ರಯ್ಯಗೌಡರು ಸುಬ್ಬಮ್ಮ ಬಹಳ ಸೌಂದರ್ಯಭರಿತವಾಗಿ ಇರುವುದರಿಂದ ಅವಳ ಸೌಂದರ್ಯವನ್ನೇ ಸವಿಯುವದಕ್ಕೆ ಯಾರು ಏನು ಹೇಳಿದರೂ ಸಹ ಚಂದ್ರಯ್ಯಗೌಡರು ತಲೆಕೆಡಿಸಿಕೊಳ್ಳುತ್ತಿರಲಿಲ್ಲ.

'ಮದುವೆ ನಿಶ್ಚಯವಾದರಿಂದ ಸೀತೆ ಹಾಸಿಗೆ ಹಿಡಿದಳು. ದಿನದಿನವೂ ಜ್ವರ ಬಿಟ್ಟುಬಿಟ್ಟು ಬಂದು, ಪ್ರಾತಃಕಾಲದ ಗುಲಾಬಿಗಿಡದ ಹಸುರೆಲೆಗಳ ನಡುವೆ ಅರೆಯರಳಿ ನಲಿವ ಬರಿಮುಗುಳಿನಂತಿದ್ದ ಲಲನೆ ಮುಡಿದು ಧೂಳಿನಲ್ಲಿ ಬಿಸಾಡಿದ ಹೂವಿನಂತೆ ಬಾಡಿದಳು. ಕೆಲವು ಸಾರಿ ಏನನ್ನೋ ಭಯಂಕರ ಸ್ವಪ್ನಗಳನ್ನು ಕಂಡು ಕೂಗಿಕೊಳ್ಳುತ್ತಿದ್ದಳು, ಇನ್ನೊಮ್ಮೆ ಎಚ್ಚೆತ್ತಿರುವಾಗಲೆ ಭ್ರಾಂತಿಯಿಂದ ಭಯಗೊಂಡು ನಡುಗುತ್ತಿದ್ದಳು. ಕಡೆಕಡೆಗೆ ಕೆಲವರ ಗುರುತು ಕೂಡ ಆಕೆಗೆ ಸಿಕ್ಕುತ್ತಿರಲಿಲ್ಲ. ಸೀತೆಮಾನೆ ಸಿಂಗಪ್ಪಗೌಡರಂತೂ ಆಕೆಯ ಸ್ಮೃತಿಯಿಂದ ಕಳಚಿಬಿದ್ದು

ಹೋಗಿದ್ದರು.' ಅವರು ಹತ್ತಿರ ಕುಳಿತು ಮಾತನಾಡಿಸಿದರೂ ಗುರುತು ಸಿಕ್ಕುತ್ತಿರಲಿಲ್ಲ. ಸ್ವಲ್ಪ ಆರೋಗ್ಯವಸ್ಥೆಯಲ್ಲಿದ್ದಾಗ ಕೇಳಲು ನಾಚುತ್ತಿದ್ದರೂ ಸುಂಭ್ರಾಂತ ಸಮಯಗಳಲ್ಲಿ 'ಹೂವಯ್ಯ' ಬಾವನನ್ನು ಕರೆಯುತ್ತಿದ್ದಳು'[13] ತರುಣನೊಬ್ಬನಲ್ಲಿ ನೈಸರ್ಗಿಕವಾಗಿ ಪ್ರೇಮವಿಟ್ಟಿರುವ ಹುಡುಗಿಯನ್ನು ಆಕೆಯ ತಂದೆತಾಯಿಗಳು ಸೇರಿ ಹಣದ ಆಸೆಗೋಸ್ಕರವೋ ಅಥವಾ ಆಸ್ತಿಯ ಆಸೆಗೋಸ್ಕರವೋ ಬೇರೊಬ್ಬರಿಗೆ ವಿವಾಹ ಮಾಡಿದ ಸಂದರ್ಭದಲ್ಲಿ ನಿಜವಾದ ಪ್ರೀತಿ ಇರುವುದು ಪ್ರೀತಿಸಿದ್ದವನಲ್ಲಿಯೇ ಹೊರತು ಮದುವೆ ಆದವನಲ್ಲಿ ಇರುವುದಿಲ್ಲ. ಮದುವೆ ಎನ್ನುವುದು ಎರಡುದೇಹಗಳಿಗೆ ಸಂಬಂಧಿಸಿದ್ದಲ್ಲ, ಬದಲಾಗಿ ಎರಡು ಮನಸ್ಸುಗಳಿಗೆ ಸಂಬಂಧಿಸಿದ್ದಾಗಿರುತ್ತದೆ. ಹೆಣ್ಣಾಗಲಿ ಗಂಡಾಗಲಿ ದೇಹ ಮತ್ತು ಮನಸ್ಸುಗಳನ್ನು ಬೇರೆ ಬೇರೆ ಮಾಡಿ ಬದುಕುವುದು ಕಷ್ಟ. ಒಟ್ಟಾರೆಯಾಗಿ ಈ ಪ್ರೇಮಿಗಳ ನಡುವೆ ವಿಷ ಬೀಜವನ್ನು ಬಿತ್ತಿದ ವ್ಯಕ್ತಿ ವೆಂಕಪ್ಪ ಜೋಯಿಸರು, ಹೂವಯ್ಯ ಮತ್ತು ಸೀತೆಯ ಪಾಲಿಗೆ ಅಡ್ಡವಾದರು. ಏಕೆಂದರೆ ಹೂವಯ್ಯ ವಿದ್ಯಾವಂತ, ಬುದ್ಧಿವಂತ ಯಾವಾಗ ಬೇಕಾದರೂ ನಾವು ನಡೆಸುವ ಪುರೋಹಿತಶಾಹಿಯ ದುರ್ಗಣವನ್ನು ಜನಗಳಿಗೆ ಮನವರಿಕೆ ಮಾಡಿ ಎಲ್ಲಿ ನಮ್ಮ ವ್ಯವಹಾರದ ಮೇಲೆ ಕಲ್ಲು ಹಾಕುತ್ತಾನೋ ಎಂಬುದನ್ನು ಅರಿತ ವೆಂಕಪ್ಪಯ್ಯ ಜೋಯಿಸರು ಹೂವಯ್ಯನಿಗೆ ಮೂರ್ಛೆರೋಗದಿಂದ ದುರ್ಬಲನಾಗಿದ್ದಾನೆ ಎಂಬುದನ್ನು ಮನವರಿಕೆ ಮಾಡಿ ಸೀತೆ ಮತ್ತು ಹೂವಯ್ಯ ಇವರಿಬ್ಬರಿಗೂ ಸರಿಯಾಗಿ ಹೊಂದಿಕೆಯಾಗುವುದಿಲ್ಲ, ಸೀತೆ ಮತ್ತು ರಾಮಯ್ಯರ ಜಾತಕ ಸರಿಯಾಗಿ ಹೊಂದಿಕೆಯಾಗುತ್ತದೆಂದು ತನ್ನ ಕುತಂತ್ರ ಬುದ್ಧಿಯನ್ನು ಪ್ರದರ್ಶಿಸುತ್ತಾನೆ. ತನ್ನದೇ ಆದ ಕನಸಿನ ವೈಭವದಲ್ಲಿ ತುಂಬಿ ತುಳುಕುತ್ತಿದ್ದಂತಹ ಸೀತೆ ತಕ್ಷಣ ರಾಮಯ್ಯನೊಡನೆ ಮದುವೆ ನಿಶ್ಚಯಿಸಿದ ಸಂದರ್ಭದಲ್ಲಿ ಅವಳ ಕನಸಿನ ಗೋಪುರವು ಚಂಡಮಾರುತಕ್ಕೆ ಸಿಕ್ಕಿ ನುಚ್ಚುನೂರಾಯಿತು. ಇಷ್ಟೆಲ್ಲ ಆದರೂ ಹೂವಯ್ಯ ವಿದ್ಯಾವಂತ, ಬುದ್ಧಿವಂತ ಮತ್ತು ಆಂತರಿಕವಾಗಿ ಬೆಳವಣಿಗೆಯನ್ನು ಹೊಂದಿರುವ ವ್ಯಕ್ತಿ. ಆಧುನಿಕತೆಯ ಪ್ರಭಾವದಿಂದ ತಮ್ಮ ಹಳ್ಳಿಯಲ್ಲಿ ನಡೆಯುತ್ತಿರುವ ಮೂಢನಂಬಿಕೆಗಳ ಬಗ್ಗೆ ಪ್ರತಿಭಟಿಸಿದ ಹೂವಯ್ಯ ತನ್ನ ಜೀವನದ ವಿಷಯದಲ್ಲಿ ಯಾಕೆ ಪ್ರತಿಭಟಿಸುವುದಿಲ್ಲ. ಸೀತೆಯ ಜೊತೆ ಪ್ರೇಮಾಂಕುವಾದದ್ದು ಗೊತ್ತಿದ್ದು ಮತ್ತು ರಾಮಯ್ಯನ ಜೊತೆ ಸೀತೆಯ ಮದುವೆ ನಿಶ್ಚಯಿಸಿರುವುದು ಗೊತ್ತಾದ ಮೇಲೂ ಸಹ ಹೂವಯ್ಯ ಪ್ರತಿಭಟಿಸುದೇ ಏಕೆ ಒಬ್ಬ ಆದರ್ಶವ್ಯಕ್ತಿಯಾಗಿದ್ದಾನೆ.. ಇದರಿಂದ ತನ್ನ ಮನಸ್ಸಿಗೆ ನೋವಾದರೂ ಸಹ ಪ್ರತಿಭಟಿಸದೆ ದುರ್ಬಲನಾಗುತ್ತಾನೆ. ಇದಕ್ಕೆ ಕಾರಣ ರಕ್ತಸಂಬಂಧದ ವಿರುದ್ಧ ಪ್ರತಿಭಟನೆ ಮಾಡುವುದು ಅನಾವಶ್ಯಕ ಜೊತೆಗೆ ಆಸ್ತಿ, ಹಣ, ಎಲ್ಲವನ್ನೂ ತೊರೆದು ಕಡೆಗೆ ಆಧ್ಯಾತ್ಮದ ಕಡೆ ಮರಳುವುದರಿಂದ ಇವನಿಗೆ ಯಾವುದರ ಆಸೆ ಇಲ್ಲದ ಕಾರಣ ಪ್ರತಿಭಟಿಸುವುದಿಲ್ಲ. ಮದುವೆಗೆ

ಸಂಬಂಧಿಸಿದಂತೆ ಲೋಹಿಯಾ ಈ ರೀತಿ ವ್ಯಾಖ್ಯಾನಿಸುತ್ತಾರೆ. 'ಮದುವೆಗೆ ಸಂಬಂಧಿಸಿದ ಮತ್ತು ಮದುವೆಯ ಆನಂತರದ ವಾತಾವರಣವು ಅತ್ಯಂತ ಪಾಪಮಯವಾದುದಾಗಿರುತ್ತದೆ. ವರದಕ್ಷಿಣೆ ಇಲ್ಲದ ವಧು ಇಂದು ಲೆಕ್ಕಕ್ಕೇ ಇಲ್ಲ. ಅವಳು ಗೊಡ್ಡು ಹಸುವಿನಂತೆ. ಭಾರತ ಇಂದು ವಿಕಾರವಶವಾಗಿದೆ. ಲೈಂಗಿಕ ಪರಿಶುದ್ಧಿಯ ಎಲ್ಲಾ ಮಾತುಗಳೂ ಮದುವೆ ಮತ್ತು ಲೈಂಗಿಕ ವಿಷಯಗಳಲ್ಲಿನ ಕೊಳಕುತನದಿಂದ ಕೊಳೆತು ಹೋಗಿವೆ'.[14] ಈ ಹಿನ್ನೆಲೆಯಲ್ಲಿ ಕಾದಂಬರಿಯನ್ನು ಗ್ರಹಿಸಿದಾಗ ಹೂವಯ್ಯ ಆಧುನಿಕ ವಿದ್ಯಾಭ್ಯಾಸ ಪ್ರಭಾವದಲ್ಲಿ ಹೊಸ ಆದರ್ಶಗಳನ್ನು ತಲೆಯಲ್ಲಿ ತುಂಬಿಕೊಂಡು ಕಾನೂರಿನ ಪರಂಪರಾಗತ ವ್ಯವಸ್ಥೆಗೆ ಮುಖಾಮುಖಿಯಾಗಿ ಅದನ್ನು ಬದಲಿಸುವ ಪ್ರಯತ್ನ ಮಾಡಿದ ಹೂವಯ್ಯ ತನ್ನ ಜೀವನದ ನೋವನ್ನು ಪ್ರತಿಭಟಿಸದೇ ಮೌನವಾಗಿ ಒಪ್ಪಿಕೊಳ್ಳುತ್ತಾನೆ. ಜೊತೆಗೆ ಸೀತೆ ಬಾಲ್ಯದಿಂದಲೂ ಹೂವಯ್ಯನನ್ನು ಪ್ರೀತಿಸಿ ಈ ಪ್ರೇಮ ನಿಷ್ಠೆಯಿಂದಲೇ ತನ್ನ ಜೀವನದ ಸುಖದುಃಖಗಳನ್ನು ಕಂಡುಕೊಳ್ಳದೇ ಇರುವ ಸಂಗತಿಯನ್ನು ಯಾರ ಮುಂದೆಯೂ ಪ್ರಸ್ತಾಪಗೊಳ್ಳದೆ ತನ್ನ ಅಂತರಂಗದಲ್ಲಿಯೇ ತನ್ನ ಪ್ರೀತಿಯನ್ನು ಬಲಿಗೊಡುತ್ತಾಳೆ. ಚಂದ್ರಯ್ಯಗೌಡರು ಆರ್ಥಿಕತೆಯಲ್ಲಿ ಎಷ್ಟು ಮುಂದಿದ್ದರೋ ಅಷ್ಟು ರೀತಿಯ ಅನುಮಾನಗಳು ಸುಬ್ಬಮ್ಮನ ಮೇಲೆಯೂ ಹೆಡೆಯೆತ್ತಿ ನಿಂತವು.

'ಚಂದ್ರಯ್ಯಗೌಡರು ಬಡಿಯುತ್ತಿದ್ದ ಹೆಂಡತಿಯನ್ನು ನೋಡಿ ಅಡಿಗೆಯ ಪಾತ್ರೆಯು ಆಳಂಗಿದೆಯಲ್ಲ ಎಂದು ಭಯಂಕರವಾಗಿ ಕೂಗಿದರು. ಈ ಒಂದು ಪ್ರಶ್ನೆಗೆ ಮುಂದಿನ ಕ್ರೌರ್ಯಕ್ಕೆ ನೆಪವಾಗಿತ್ತು. ಸುಬ್ಬಮ್ಮ ಇನ್ನೂ ಉತ್ತರ ಹೇಳಲು ಪ್ರಾರಂಭಿಸಲಿಲ್ಲ, ಚಂದ್ರಯ್ಯಗೌಡರು ಮೇಲೆದ್ದು ನಾಗಂದಿಗೆಯ ಸಂದಿಯಲ್ಲಿ ಬೆಕ್ಕನ್ನು ಹೆದರಿಸಿ ಓಡಿಸಲೆಂದು ಇಟ್ಟಿದ್ದ ಒಂದು ದಪ್ಪನೆಯ ನೆಕ್ಕಿಯ ಕೋಲನ್ನು ಎಂಜಲು ಕೈಯಿಂದಲೆ ಸೆಳೆದುಕೊಂಡು ಹೆಂಡತಿಗೆ ರಪರಪ್ಪನೆ ಏಟುಗಳು ಬೀಡತೊಡಗಿದವು. ಒಂದು ನಿಮಿಷದಲ್ಲಿ ಆ ನೆಕ್ಕಿಯ ಕೋಲೂ ಕೆಲವು ಕೈ ಬಳೆಗಳು ಪುಡಿಯಾದವು. ಎಡಗೈಯಿಂದ ಹೆಂಡತಿಯ ತುರುಬು ಹಿಡಿದುಕೊಂಡು ಬಲಗೈಯಿಂದ ಗುದ್ದತೊಡಗಿದರು'.[15]

ನಿಜವಾಗಿಯೂ ಸುಬ್ಬಮ್ಮ ಚಂದ್ರಯ್ಯಗೌಡರು ತಿಳಿದುಕೊಂಡಂತಹ ನೀಚ ಕೆಲಸಕ್ಕೆ ಕೈಹಾಕಿರಲಿಲ್ಲ. ಕಾನೂರು ಹೆಗ್ಗಡಿತಿ ಕಾದಂಬರಿಯಲ್ಲಿ ಸುಬ್ಬಮ್ಮನಂಥ ದುರಂತ ನಾಯಕಿ ಇನ್ನೊಬ್ಬಳು ಕಾಣುವುದಿಲ್ಲ. ಸುಬ್ಬಮ್ಮನು ಹಳ್ಳಿಗರಿಗೆ ಸಹಜವಾದ ಮುಗ್ಧತೆ ಮತ್ತು ಪರಿಶುದ್ಧಳು ಆಗಿದ್ದಳು, ಆದರೆ ಅವಳ ತಪ್ಪೇನೂ ಇಲ್ಲವಾದರೂ ಚಂದ್ರಯ್ಯಗೌಡರು ಸಂಶಯಪಟ್ಟುಕೊಂಡು

ಭಯಂಕರವಾಗಿ ಹಿಂಸಿಸುತ್ತಾರೆ. ವಾಸ್ತವವಾಗಿ ಸುಬ್ಬಮ್ಮ ಬಾಳಿನುದ್ದಕ್ಕೂ ಸಂಕಷ್ಟಗಳೇ ಎದುರಿಸಬೇಕಾಯಿತು. ನಿಜವಾದ ಸುಖವೆಂಬುದೇ ಅವಳಿಗೆ ದೊರೆಯಲಿಲ್ಲ. ತವರು ಮನೆಯಲ್ಲಿ ಇರುವಂತಹ ದಾರಿದ್ರ್ಯವೇ ಮೂಲ ಕಾರಣವಾಗುತ್ತಿದೆ. ಅವಳು ಹುಟ್ಟಿನಿಂದಲೂ ಸಾಯುವವರೆಗೂ ಕಣ್ಣೀರಿನ ಕಡಲಿನಲ್ಲೇ ಮುಳುಗುವ ಹಳ್ಳಿಯ ಸ್ತ್ರೀಯರ ಪ್ರತಿನಿಧಿಯಂತಿದ್ದಾಳೆ.

'ಗಂಗೆಯ ವಿಚಾರವಾಗಿ ಸುಬ್ಬಮ್ಮ ತಟಸ್ಥಭಾವದಿಂದಿದ್ದಳು. ಗಂಡನೊಡನೆ ಆಗಲಿ, ಇತರರೊಡನೆ ಆಗಲಿ, ಹಿಂದೆ ನಡೆದಿದ್ದ ಯಾವುದೇ ಪ್ರಸಂಗವನ್ನೂ ಎತ್ತಲಿಲ್ಲ. ಆದರೂ ಗೌಡರು ಒಂದು ವಿಚಿತ್ರ ಪರಿವರ್ತನೆ ತಲೆದೂರಿ ಪ್ರಬಲವಾಯಿತು. ಅವರು ಮೊದಮೊದಲು ಗಂಗೆಯ ವಿಚಾರವಾಗಿ ಉದಾಸೀನರಾಗುತ್ತಾ ಬಂದು ಕಡೆಕಡೆಗೆ ಅವಳನ್ನು ತಿರಸ್ಕರಿಸತೊಡಗಿದರು. ನೆವೆಗಳನ್ನು ತಂದೊಡ್ಡಿ ಆಕೆ ತಾವು ಮಲಗಿದ್ದ ಕೋಣೆಗೆ ಕಾಲಿಡಬಾರದೆಂದು ಕಟ್ಟಪ್ಪಣೆ ಮಾಡಿದರು'.[16] ಚಂದ್ರಯ್ಯಗೌಡ ಕಾನೂರಿನ ಭೂಮಾಲೀಕ ಮತ್ತು ಆರ್ಥಿಕತೆಯಲ್ಲಿ ಬಹಳ ಬಲಿಷ್ಠವಾದ ವ್ಯಕ್ತಿ ಆಗಿರುತ್ತಾನೆ. ಆದರೆ ಉನ್ನತ ವರ್ಗದವರ ಕೈಗೆ ಸಿಕ್ಕ ಕೆಳಜಾತಿಯ ಸ್ತ್ರೀಯರು ತಮ್ಮ ಪಾತಿವ್ರತೆ ಸ್ಥಾನಕ್ಕೆ ಧಕ್ಕೆಯುಂಟಾದ ಸಂದರ್ಭವು ಒದಗಿಬರುತ್ತದೆ. ಆದರೆ ಜಾತಿ, ಊಳಿಗಮಾನ್ಯ ಪದ್ಧತಿ ಒಂದು ಮುಖವಾದರೆ, ಲೈಂಗಿಕ ಶೋಷಣೆ ಅದರ ಇನ್ನೊಂದು ಮುಖವಾಗಿದೆ. ಹಣವಂತರು ಭೂಮಾಲೀಕರಲ್ಲಿ ಕೇವಲ ಹೊಟ್ಟೆ ಪಾಡಿಗಾಗಿ ಹೊಲಗದ್ದೆಗಳಲ್ಲಿ ದುಡಿಯುವ ದಲಿತ ಹೆಣ್ಣು ಮಕ್ಕಳನ್ನು ತಮ್ಮ ತೀಟೆ ತೀರಿಸಿಕೊಳ್ಳಲು ಪತ್ರಾವಳಿಯಂತೆ ಬಳಸಿಕೊಳ್ಳುತ್ತಾರೆ. ಚಂದ್ರಯ್ಯಗೌಡರು ಗಂಗೆಯ ಬಳಿಗೆ ಹೋಗಿ ಬರುವಾಗ ಬೇರೆ ಸಂದರ್ಭದಲ್ಲಿ ಕಾಡುವಂತಹ ಮಡಿ–ಮೈಲಿಗೆ ಅಸ್ಪೃಶ್ಯತೆಗಳು ಆಗ ಅವರನ್ನು ಕಾಡುವುದಿಲ್ಲ.

'ಭಾರತೀಯರು ಇದೇ ಜಗತ್ತಿನಲ್ಲೇ ಹತಾಶರೂ ಕೀಳು ತನದವರೂ ಆಗಿರುವ ಕಾರಣ ದಲಿತರು ಮತ್ತು ಸ್ತ್ರೀಯರನ್ನು ಕುರಿತ ಅವರ ದೃಷ್ಟಿಕೋನವಾಗಿದೆ ಎಂದು ಲೋಹಿಯಾ ಮತ್ತೆ ಮತ್ತೆ ಹೇಳುತ್ತಿದ್ದರು. ತಮಾಷೆಯೆನಿಸುವ ಸಂಗತಿಯೆಂದರೆ, ಮಲೆನಾಡಿನ ಲೋಕದ ಬಹಳ ಜನ ಗಂಡಸರು ವಿಧುರರು; ಸುಮಾರು ಮೂರರಿಂದ ನಾಲ್ಕರಷ್ಟು ಹೆಂಡತಿಯನ್ನು ಕಳೆದುಕೊಂಡವರು. ಪರೀಕ್ಷಿಸಿ ನೋಡಿದರು 'ಹೆಂಡತಿಯರು' ಹೆರಿಗೆಯ ಸಮಯದಲ್ಲಿ ಅಥವಾ ಗರ್ಭಿಣಿಯಾದಾಗ ಸತ್ತವರೆಂದು ತಿಳಿಯುತ್ತಾರೆ. ಉದಾಹರಣೆ: ಅಣ್ಣಯ್ಯಗೌಡರ 4ನೇ ಹೆಂಡತಿಯ ಸಾವು ಎದೆ ಕಲಕುವಂತಿದೆ. ಹೆಣ್ಣನ್ನು ಕೇವಲ ದುಡಿಮೆಯ ಉಪಕರಣವಾಗಿ ಅಥವಾ ಲೈಂಗಿಕ ವಸ್ತುವಾಗಿ ಸ್ವೀಕರಿಸಿದ ಸಾಮಾಜಿಕ ಮನೋಧರ್ಮವೂ ಈ ಅರೆಕಾಲಿಕ ಸಾವುಗಳಿಗೆ ಕಾರಣವಾಗಿರಬೇಕು'.[18]

ಒಟ್ಟಿನಲ್ಲಿ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಭೂಮಾಲೀಕರಲ್ಲಿ ಚಂದ್ರಯ್ಯಗೌಡರು ಆಗಿರಬಹುದು ಅಥವಾ ಅಣ್ಣಯ್ಯಗೌಡರು ಆಗಿರಬಹುದು ಇವರುಗಳು ಒಂದಕ್ಕಿಂತ ಹೆಚ್ಚಾಗಿ ಮದುವೆಯಾಗುವುದು ಅಂತಸ್ತಿನ ಸಂಕೇತವು ಮತ್ತು ಪ್ರತಿಷ್ಠೆಯ ಸಂಕೇತವಾಗಿತ್ತು. ಇವರ ಪ್ರಕಾರ ಮದುವೆಯಾದ ಹೆಣ್ಣನ್ನು ಮಕ್ಕಳನ್ನು ಹಡೆಯುವ ಯಂತ್ರವಾಗಿ ಮಾಡಿಕೊಂಡಿದ್ದಾರೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಮಲೆನಾಡಿನ ಲೋಕದ ಜನರು ಹೆಂಡತಿ ಗರ್ಭಿಣಿಯಾದ ತಕ್ಷಣದ ಅವಳು ಇನ್ನು ಮುಂದೆ ಬದುಕುವುದಿಲ್ಲವೆಂಬ ಆಶಯ ಇವರದ್ದಾಗಿರುತ್ತಿತ್ತು. ಮತ್ತು ಇವರಲ್ಲಿ ಸಾಮಾಜಿಕ ಮನೋಧರ್ಮಗಳು ಬೇರು ಬಿಟ್ಟಿರುವ ಕಾರಣ ಗರ್ಭಿಣಿಯರಾದ ಹೆಣ್ಣುಮಕ್ಕಳು ಅಕಾಲಿಕ ಸಾವುಗಳಿಗೆ ಕಾರಣವಾಗಬೇಕಾಗುತ್ತದೆ.

ಹೂವಯ್ಯನಿಗಿದ್ದ ಸಂದೇಹ ಸಂಕೋಚಗಳು ತೊಲಗಿ ಹೋಗಿ ಅವನ ಆಸೆಗೊಂದು ಊರುಗೋಲು ಸಿಕ್ಕಿದಂತಾಯಿತು. ಭಾವಗೋಚನಮಾಡಿ ಮತ್ತೆ ಎರಡು ತುತ್ತು ಉಂಡು, ಸೀತೆಯ ಕಡೆ ನೋಡಿದನು. ಹಣತೆಯ ಮಂದಕಾಂತಿಯಲ್ಲಿ ಅವಳು ಸ್ವಪ್ನಸುಂದರಿಯಂತೆ ನಿಂತಿದ್ದಳು. ಆ ಅಸ್ಪಷ್ಟತೆಯ ಅವಳ ಸೌಂದರ್ಯವನ್ನು ದ್ವಿಗುಣ ಮೋಹಕವಾಗಿ ಮಾಡಿತ್ತು. ವಸಂತ ಕಾಲದ ಸಂಧ್ಯಾನಿಶೆಯಲ್ಲಿ ಮರುದಿನ ಅರಳಲಿರುವ ಗುಲಾಬಿಯ ಮುದ್ದು ಮೊಗ್ಗಿನಂತೆ! ಅದರಲ್ಲಿಯೂ ಹಲ್ಲಿಯ ಕೃಪೆಯಿಂದ ಗೋಡೆಯ ಮೇಲೆ ಅವನೋದಿದ ಲಿಪಿ, ಹೃದಯದಲ್ಲಿ ಅದುವರೆಗೂ ಗುಪ್ತವಾಗಿ ಅಸ್ಪಷ್ಟವಾಗಿ ಸುಪ್ತಾವಸ್ಥೆಯಲ್ಲಿದ್ದ ಆಸೆಯೊಂದನ್ನು ವ್ಯಕ್ತ ಸ್ಪಷ್ಟವನ್ನಾಗಿ ಮಾಡಿದ್ದುದರಿಂದ ಹೂವಯ್ಯನ ಕಣ್ಣಿಗೆ ಸೀತೆ ಕಾಮನ ಬಿಲ್ಲಿನಂತೆ ಪ್ರೇಮ ಸೌಂದರ್ಯಗಳ ಸುಮಧುರ ಮೂರ್ತಿಯಾಗಿ ಕಾಣಿಸಿಕೊಂಡಳು". ಈ ಹಿನ್ನೆಲೆಯಲ್ಲಿ ಹೂವಯ್ಯಮತ್ತು ಸೀತೆಯ ಮೊದಲ ಭೇಟಿಯಲ್ಲಿ ಪ್ರೇಮಾಂಕುರವಾಗುತ್ತದೆ ಮತ್ತು ಪರಸ್ಪರ ಸಂಧಿಸುವುದು, ಪರಸ್ಪರ ಹೃದಯ ಭಾವನೆಗಳನ್ನು ಹಂಚಿಕೊಳ್ಳುವುದು ಹೂವಯ್ಯ ಮತ್ತು ಸೀತೆಯ ಯಾವಾಗಲೂ ಪರಸ್ಪರ ಪ್ರೀತಿಯ ವಿಷಯದಲ್ಲಿ ಮುಖಾಮುಖಿಯಾಗಿ ಮಾತನಾಡುವುದಿಲ್ಲ. ಇಬ್ಬರೂ ಪ್ರೀತಿಯನ್ನು ಬಹಿರಂಗಗೊಳಿಸುವುದಿಲ್ಲ. ಸೀತೆಯು ಕಟ್ಟಿದಂತಹ ಕನಸು ನಿಜ ಜೀವನದಲ್ಲಿ ಹೊಸ ಬದುಕನ್ನು ಪ್ರಾರಂಭಿಸುವುದಕ್ಕೆ ಆಗುವುದಿಲ್ಲ.

ಅಡಿ ಟಿಪ್ಪಣಿಗಳು

1. ಕನ್ನಡದ ಹಾಡುಪಾಡು; ಕೆ.ಸಿ.ಶಿವಾರೆಡ್ಡಿ, ಅಧ್ಯಯನ ಮಂಡಲ, ಬೆಂಗಳೂರು, ಪುಟ-241
2. ಕಾನೂರು ಹೆಗ್ಗಡಿತಿ; ಕುವೆಂಪು, ಉದಯರವಿ ಪ್ರಕಾಶನ, ವಾಣಿವಿಲಾಸಪುರಂ, ಮೈಸೂರು, 2007, ಪುಟ-284
3. ಕಾನೂರು ಹೆಗ್ಗಡಿತಿ; ಕುವೆಂಪು, ಉದಯರವಿ ಪ್ರಕಾಶನ, ವಾಣಿವಿಲಾಸಪುರಂ, ಮೈಸೂರು, 2007, ಪುಟ-67
4. ಕಾನೂರು ಹೆಗ್ಗಡಿತಿ; ಕುವೆಂಪು, ಉದಯರವಿ ಪ್ರಕಾಶನ, ವಾಣಿವಿಲಾಸಪುರಂ, ಮೈಸೂರು, 2007, ಪುಟ-67
5. ಕಾನೂರು ಹೆಗ್ಗಡಿತಿ; ಕುವೆಂಪು, ಉದಯರವಿ ಪ್ರಕಾಶನ, ವಾಣಿವಿಲಾಸಪುರಂ, ಮೈಸೂರು, 2007, ಪುಟ-104
6. ಕಾನೂರು ಹೆಗ್ಗಡಿತಿ; ಕುವೆಂಪು, ಉದಯರವಿ ಪ್ರಕಾಶನ, ವಾಣಿವಿಲಾಸಪುರಂ, ಮೈಸೂರು, 2007, ಪುಟ-194
7. ಜಾತಿವಿನಾಶ; ಅನುವಾದ; ಡಾ.ಮ.ನ.ಜವರಯ್ಯ, ಪ್ರಕಾಶಕರು, ಸಿದ್ಧಾರ್ಥ ಗ್ರಂಥಮಾಲೆ, ನಂ.ಇ.47, ಮೊದಲನೆ ಹಂತ, ಕುವೆಂಪುನಗರ, ಮೈಸೂರು, ಪುಟ-50
8. ಕಾನೂರು ಹೆಗ್ಗಡಿತಿ; ಕುವೆಂಪು, ಉದಯರವಿ ಪ್ರಕಾಶನ, ವಾಣಿವಿಲಾಸಪುರಂ, ಮೈಸೂರು, 2007, ಪುಟ-91
9. ಜಾತಿವಿನಾಶ; ಅನುವಾದ; ಡಾ.ಮ.ನ.ಜವರಯ್ಯ, ಪ್ರಕಾಶಕರು, ಸಿದ್ಧಾರ್ಥ ಗ್ರಂಥಮಾಲೆ, ನಂ.ಇ.47, ಮೊದಲನೆ ಹಂತ, ಕುವೆಂಪುನಗರ, ಮೈಸೂರು, ಪುಟ-12
10. ಕಾನೂರು ಹೆಗ್ಗಡಿತಿ; ಕುವೆಂಪು, ಉದಯರವಿ ಪ್ರಕಾಶನ, ವಾಣಿವಿಲಾಸಪುರಂ, ಮೈಸೂರು, 2007, ಪುಟ-89-90
11. ಲೋಹಿಯಾ; ಸಂಪಾದಕರು, ಎಂ.ಡಿ.ನಂಜುಂಡಸ್ವಾಮಿ ಮತ್ತು ಕೆ.ಪಿ.ಪೂರ್ಣಚಂದ್ರ ತೇಜಸ್ವಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2007, ಪುಟ-83
12. ಕಾನೂರು ಹೆಗ್ಗಡಿತಿ; ಕುವೆಂಪು, ಉದಯರವಿ ಪ್ರಕಾಶನ, ವಾಣಿವಿಲಾಸಪುರಂ, ಮೈಸೂರು, 2007, ಪುಟ-36
13. ಕಾನೂರು ಹೆಗ್ಗಡಿತಿ; ಕುವೆಂಪು, ಉದಯರವಿ ಪ್ರಕಾಶನ, ವಾಣಿವಿಲಾಸಪುರಂ, ಮೈಸೂರು, 2007, ಪುಟ-247
14. ಲೋಹಿಯಾ; ಸಂಪಾದಕರು, ಎಂ.ಡಿ.ನಂಜುಂಡಸ್ವಾಮಿ ಮತ್ತು ಕೆ.ಪಿ.ಪೂರ್ಣಚಂದ್ರ ತೇಜಸ್ವಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2007, ಪುಟ-6
15. ಕಾನೂರು ಹೆಗ್ಗಡಿತಿ; ಕುವೆಂಪು, ಉದಯರವಿ ಪ್ರಕಾಶನ, ವಾಣಿವಿಲಾಸಪುರಂ, ಮೈಸೂರು, 2007, ಪುಟ-84

16. ಕಾನೂರು ಹೆಗ್ಗಡಿತಿ: ಕುವೆಂಪು, ಉದಯರವಿ ಪ್ರಕಾಶನ, ವಾಣಿವಿಲಾಸಪುರಂ, ಮೈಸೂರು, 2007, ಪುಟ-539

17. ಪ್ರತಿಸಂಸ್ಕೃತಿ: ರಹಮತ್ ತರೀಕೆರೆ, ಅಭಿನವ 17/18-2, ಮೊದಲನೆ ಮುಖ್ಯರಸ್ತೆ, ಮಾರೇನಹಳ್ಳಿ, ವಿಜಯನಗರ, ಬೆಂಗಳೂರು, ಪುಟ-124.

ಅಧ್ಯಾಯ–2

ಊಳಿಗಮಾನ್ಯ ವ್ಯವಸ್ಥೆಯಲ್ಲಿ ಜಾತಿ, ವರ್ಗ ಮತ್ತು ಲಿಂಗರಾಜಕಾರಣದ ಕಲ್ಪನೆ

'ಊಳಿಗಮಾನ್ಯ ವ್ಯವಸ್ಥೆ' ಎಂದರೆ ಜಮೀನುದಾರ ಹಾಗೂ ಜೀತಗಾರರ ನಡುವಿನ ಸಂಬಂಧ, ವೈರುಧ್ಯ ಹಾಗೂ ಬಿಕ್ಕಟ್ಟುಗಳನ್ನು ಕುರಿತದ್ದಾಗಿದೆ. "ಭಾರತದ ಸಾಂಪ್ರದಾಯಕ ಗ್ರಾಮ ಜೀವನದ ಪ್ರಮುಖ ಲಕ್ಷಣವೇ ಊಳಿಗಮಾನ್ಯ ವ್ಯವಸ್ಥೆಯಾಗಿದೆ. ಈ ವ್ಯವಸ್ಥೆಯಲ್ಲಿ ಹಳ್ಳಿಯೇ ಎಲ್ಲಾ ಕಾರ್ಯಚಟುವಟಿಕೆಗಳಿಗೂ ಕೇಂದ್ರ ಬಿಂದುವಾಗಿದೆ. ಭಾರತದ ಭೂ ಸಂಪತ್ತಿನ ಹಾಗೂ ಗ್ರಾಮ ಸಂಬಂಧಗಳ ವ್ಯವಸ್ಥೆಯ ರಚನೆಯಲ್ಲಿ ಮೂರು ಮುಖ್ಯ ಅಂಶಗಳನ್ನು ಗುರುತಿಸಬಹುದು. ಅವುಗಳೆಂದರೆ : 1. ಗ್ರಾಮ 2. ಜಾತಿ 3. ಯಜಮಾನಿ ಪದ್ಧತಿ ಅಥವಾ ಯಜಮಾನಿಕೆ"[1]

ಈ ಯಜಮಾನಿಕೆ ಪದ್ಧತಿಯು ಜಾತಿಪದ್ಧತಿಯ ಪರಸ್ಪರಾವಲಂಬನೆಯ ತತ್ವದ ಮೇಲೆ ಆರ್ಥಿಕ–ಸಾಮಾಜಿಕ ಹಾಗೂ ಅಧಿಕಾರಯುತ ವ್ಯವಸ್ಥೆಯಾಗಿ ವಿಕಾಸಗೊಂಡಿದೆ. "ಇಲ್ಲಿ ಉನ್ನತ ಜಾತಿಗಳು ಭೂ ಒಡೆತನವುಳ್ಳದ್ದಾಗಿದ್ದು, ಗ್ರಾಮದ ವಿಭಿನ್ನ ಜಾತಿಗಳ ನಡುವಿನ ಸಾಮಾಜಿಕ, ಆರ್ಥಿಕ ಹಾಗೂ ಧಾರ್ಮಿಕ ಸ್ವರೂಪದ ಸಂಬಂಧವನ್ನು ಹಾಗೂ ನಿಯಂತ್ರಣವನ್ನು ಸಾಧಿಸಿದ್ದವು. ಈ ಜಮೀನುದಾರಿ ಅಥವಾ ಊಳಿಗಮಾನ್ಯ ಪದ್ಧತಿಯಲ್ಲಿ 'ಆಶ್ರಿತರು' ಮತ್ತು 'ಆಶ್ರಯದಾತರ' ನಡುವೆ ಸಂಬಂಧ ಮುಖ್ಯವಾಗಿರುತ್ತದೆ".[2] ಇಲ್ಲಿ ಜಾತಿ, ಅಂತಸ್ತು, ಅಧಿಕಾರ ನಿಯಮಗಳಿಗೆ ಬದ್ಧವಾಗಿ ಆಶ್ರಿತರು ಮತ್ತು ಆಶ್ರಯದಾತರ ನಡುವೆ ಕೊಡು–ಕೊಳ್ಳುವಿಕೆಯ ಪದ್ಧತಿ ಇತ್ತು. ಇಲ್ಲಿ ಜಾತಿ–ಲಿಂಗ–ಆಸ್ತಿ, ಸಂಪತ್ತುಗಳ ಅಧಿಕಾರ ನೆಲೆಗಳಿಂದ ಕೂಡಿದ್ದು, ಅದು ಅನುವಂಶೀಯ ಸ್ವರೂಪವಾಗಿತ್ತು. ಮುಖ್ಯವಾಗಿ ಈ ರೀತಿಯ ರಾಜಕಾರಣದಲ್ಲಿ ದರ್ಪ, ಅಹಂಕಾರ, ಪ್ರತಿಷ್ಠೆ, ಹಿಂಸೆ, ಕ್ರೌರ್ಯ, ಅಲ್ಲದೆ ಲೈಂಗಿಕತೆ, ಲಿಂಗರಾಜಕಾರಣ, ಶೋಷಣೆ, ಮೊದಲಾದವುಗಳು ಆಳುವ ಹಾಗೂ ಯಜಮಾನಿಕೆಯ ಮುಖ್ಯ ಲಕ್ಷಣಗಳಾಗಿದ್ದವು. ಹೀಗೆ ಭಾರತೀಯ ಊಳಿಗಮಾನ್ಯ ಸಮಾಜದಲ್ಲಿ ಆಳುವ ಮತ್ತು ಆಳಿಸಿಕೊಳ್ಳುವ, ಪ್ರಧಾನ ಮತ್ತು ಅಧೀನದ ನಡುವೆ ನೇರವಾದ ಸಂಬಂಧವಿದ್ದಿತ್ತು. ಸಮಾನತೆ ಎನ್ನುವುದು ಈ ಸಮಾಜದಲ್ಲಿ ಇರಲಿಲ್ಲ. ಇಲ್ಲಿ ಅಧೀನವು ಪ್ರಧಾನವಾದುದನ್ನು ಅನುಸರಿಸಬೇಕಾಗಿತ್ತು ಮತ್ತು ಒಪ್ಪಿಕೊಳ್ಳಬೇಕಾಗಿತ್ತು. ಇಪ್ಪತ್ತನೆಯ ಶತಮಾನದ ಕನ್ನಡದ ಬರಹಗಾರರು ತಮ್ಮ ಬರವಣಿಗೆಯಲ್ಲಿ ಊಳಿಗಮಾನ್ಯ ವ್ಯವಸ್ಥೆ, ಭೂಮಾಲೀಕ ಮತ್ತು ಗೇಣಿದಾರನ ಸಂಬಂಧ ಹಾಗೂ ಕೆಳವರ್ಗದವರ

ಜೀತಪದ್ಧತಿಯನ್ನು ಚಿತ್ರಿಸಿದ್ದಾರೆ. ಕುವೆಂಪುರವರ 'ಕಾನೂರು ಹೆಗ್ಗಡಿತಿ', ಶಿವರಾಮಕಾರಂತರ 'ಚೋಮನದುಡಿ' ಹಾಗೂ ದೇವನೂರು ಮಹಾದೇವರ ಕತೆಗಳಲ್ಲಿ ಊಳಿಗಮಾನ್ಯ ಪದ್ಧತಿ ಹಾಗೂ ಜೀತ ಕುರಿತಂತೆ ಹೊಸ ಧೋರಣೆ ಹಾಗೂ ನಿಯಂತ್ರಣಗಳನ್ನು ಕಾಣಬಹುದಾಗಿದೆ.

"ಜಾತಿಪದ್ಧತಿ ಸಾಮಾಜಿಕ ವ್ಯವಸ್ಥೆಯಾಗಿ ಊಳಿಗಮಾನ್ಯ ಸಮಾಜದಲ್ಲಿ ರೂಪುಗೊಂಡಿದೆ. ಊಳಿಗಮಾನ್ಯ ವ್ಯವಸ್ಥೆ ಮುಂದುವರೆದಂತೆ ಜಾತಿಪದ್ಧತಿ ಕೂಡ ಮುಂದುವರಿದಿದೆ. ಊಳಿಗಮಾನ್ಯತೆ ನಾಶವಾಗದೇ ಇರುವುದರಿಂದ ಅಸ್ಪೃಶ್ಯತೆ, ಬ್ರಾಹ್ಮಣವಾದ, ಶ್ರೇಣಿಕೃತ ಅಸಮಾನತೆ, ಮುಂತಾದ ಸಾಮಾಜಿಕ ಸಾಂಸ್ಥಿಕ ರೂಪಗಳು ಇನ್ನೂ ಕೂಡ ಮುಂದುವರಿದಿವೆ. ಭೂಮಾಲೀಕ ವರ್ಗ ಜಾತಿಪದ್ಧತಿ ನಾಶವಾಗದಂತೆ ಕಾಪಾಡಿಕೊಂಡು ಬಂದಿದೆ. ಈ ಎಲ್ಲ ತಾರತಮ್ಯಗಳನ್ನು ಉಳಿಸಿ ತಮ್ಮ ಅಗತ್ಯಕ್ಕೆ ಬಳಸಿಕೊಳ್ಳಬಯಸುವ ಸಾಮ್ರಾಜ್ಯಶಾಹಿಗಳು ಜಾತಿ–ತಾರತಮ್ಯಗಳನ್ನು ಕಾಪಾಡಿ ಬೆಳೆಸುತ್ತಿದ್ದಾರೆ. ಭೂಮಾಲೀಕ ವರ್ಗವನ್ನು ನಾಶಮಾಡದೆ ಊಳಿಗಮಾನ್ಯ ಸಮಾಜವನ್ನು ಬದಲಾಯಿಸದೆ, ಧರ್ಮವನ್ನು ಸುಧಾರಿಸುವ ಮೂಲಕ ಅಥವಾ ಮತಾಂತರಗೊಳ್ಳುವ ಮೂಲಕ ಜಾತಿಯನ್ನು ನಾಶಮಾಡಬಹುದೆಂಬುದು ಅರ್ಥವಿಲ್ಲದ ಮಾತು"[3] ಎಂಬುದು ಅಂಬೇಡ್ಕರ್‌ರವರ ಅಭಿಪ್ರಾಯವಾಗಿದೆ. ಈ ಹಿನ್ನೆಲೆಯಲ್ಲಿ ಅಂಬೇಡ್ಕರ್‌ರವರ ಈ ಮಾತುಗಳಲ್ಲಿ ಊಳಿಗಮಾನ್ಯ ವ್ಯವಸ್ಥೆಗೂ ಹಾಗೂ ಜೀತವ್ಯವಸ್ಥೆಗೂ ನೇರ ಸಂಬಂಧವಿರುವುದನ್ನು ಗುರುತಿಸಬಹುದಾಗಿದೆ. ಹಾಗೂ ಜಾತಿಪದ್ಧತಿ ನಾಶವಾಗದ ಹೊರತು ಊಳಿಗಮಾನ್ಯ ವ್ಯವಸ್ಥೆಯನ್ನು ದುರ್ಬಲಗೊಳಿಸಲು ಅಸಾಧ್ಯ ಎಂಬುದನ್ನು ಮೇಲಿನ ಮಾತುಗಳು ಸೂಚಿಸುತ್ತದೆ. ವಾಸ್ತವವಾಗಿ ಭಾರತದಲ್ಲಿ ಊಳಿಗಮಾನ್ಯ ವ್ಯವಸ್ಥೆ ದುರ್ಬಲಗೊಳ್ಳುತ್ತಿದ್ದ ಸಂದರ್ಭದಲ್ಲಿ ಅದನ್ನು ಪ್ರಶ್ನಿಸುವ, ಪರಿಶೀಲಿಸುವ ಕ್ರಿಯೆಯಾಗಿ ಕುವೆಂಪುರವರ 'ಮಲೆಗಳಲ್ಲಿ ಮದುಮಗಳು' ಮತ್ತು 'ಕಾನೂರು ಹೆಗ್ಗಡಿತಿ', ರಾವ್‌ಬಹದ್ದೂರ್‌ರವರ 'ಗ್ರಾಮಾಯಣ', ಶಿವರಾಮಕಾರಂತರ 'ಚೋಮನದುಡಿ' ದೇವನೂರು ಮಹಾದೇವರವರ 'ಒಡಲಾಳ' ಮುಂತಾದ ಕಾದಂಬರಿಗಳು ಹುಟ್ಟಿಕೊಂಡಂತೆ ತೋರುತ್ತದೆ. ಕುವೆಂಪುರವರ ಎರಡು ಕಾದಂಬರಿಗಳು ಸಹ ಊಳಿಗಮಾನ್ಯ ವ್ಯವಸ್ಥೆಯನ್ನು ವಿರೋಧಿಸುತ್ತಾ ಬಂದ ಪ್ರಮುಖ ಕಾದಂಬರಿಗಳಾಗಿವೆ. ಇವುಗಳ ಜೊತೆಗೆ ಶಿವರಾಮಕಾರಂತರ 'ಚೋಮನದುಡಿ' ಕಾದಂಬರಿಯು ಮುಖ್ಯವಾಗಿದೆ. ಭೂಮಿಯ ಪ್ರಶ್ನೆಯನ್ನು ಸಮರ್ಥವಾಗಿ ಮಂಡಿಸಿದ ಕಾದಂಬರಿಯೆಂದರೆ 'ಚೋಮನದುಡಿ' ಈ ಕಾದಂಬರಿಯ ನಾಯಕ ಚೋಮ ಭೂಮಿಯನ್ನು

ಹಕ್ಕಿನಂತೆ ಇಲ್ಲಿ ಪ್ರತಿಪಾದಿಸುತ್ತಾನೆ. ಇವನಿಗೆ ಆಸ್ತಿಯನ್ನು ನೀಡದಿರುವ ಸಂಕಪ್ಪಯ್ಯ ಮತ್ತು ಆತನ ತಾಯಿಯ ಧೋರಣೆಯ ಹಿಂದೆ ಧಾರ್ಮಿಕತೆಯ ಮೊಂಡುತನವಿದೆ.

'ಊಳಿಗಮಾನ್ಯ ಹಾಗೂ ಭೂಮಿ ಫ್ಯೂಡಲ್ ಮತ್ತು ಪುರೋಹಿತಶಾಹಿ, ಧರ್ಮ ಮತ್ತು ಜಾತಿ, ಪರಂಪರೆ ಮತ್ತು ಆಧುನಿಕತೆ, ಹಳ್ಳಿ ಮತ್ತು ನಗರ, ಗಂಡು ಮತ್ತು ಹೆಣ್ಣು ಇವುಗಳ ನಡುವಿನ ಸಂಬಂಧ, ವೈರುಧ್ಯ, ಬಿಕ್ಕಟ್ಟು ಹಾಗೂ ಪಲ್ಲಟಗಳನ್ನು ಪರಿಶೀಲಿಸುವ ಕನ್ನಡದ ಮುಖ್ಯ ಕೃತಿಯಾಗಿದೆ. ಕುವೆಂಪು ಅವರಿಗೆ ಭಾರತೀಯ ಪಾರಂಪರಿಕ ಸಮಾಜದಲ್ಲಿನ ಪ್ರತಿಷ್ಠಿತ ಜ್ಞಾನಾಧಿಕಾರ, ಪುರೋಹಿತಶಾಹಿ ಯಜಮಾನ್ಯ ಜಾತಿಪದ್ಧತಿ ಹಾಗೂ ಲಿಂಗರಾಜಕಾರಣದ ನೆಲೆಗಳನ್ನು ಪ್ರಶ್ನಿಸಿ, ಪಲ್ಲಟಗೊಳಿಸುವುದು ಮುಖ್ಯವಾಗಿತ್ತು. ಪುರೋಹಿತಶಾಹಿಯು ಧರ್ಮವಿಧಿ, ಕರ್ಮ, ಯಜ್ಞ ಮೊದಲಾದ ಮಡಿವಂತಿಕೆಯ ಮೌಲ್ಯಗಳನ್ನು ಕೆಳವರ್ಗದವರ ಮೇಲೆ ಹೇರಿ ಕೆಳಸಮುದಾಯವನ್ನು ಹತ್ತಿಕ್ಕಲು ಪ್ರಯತ್ನಿಸುತ್ತಿರುವುದನ್ನು 'ಕಾನೂರು ಹಗ್ಗಡಿತಿ' ಕಾದಂಬರಿಯಲ್ಲಿ ಕಾಣಬಹುದಾಗಿದೆ. ಹೂವಯ್ಯ ಮತ್ತು ರಾಮಯ್ಯ ಆಧುನಿಕ ಶಿಕ್ಷಣ ಪ್ರಭಾವ ಹೊಂದಿರುವ ವ್ಯಕ್ತಿಗಳು. ಸಮಸ್ಯೆಗಳ ಸುಧಾರಣಾವಾದಿಗಳು. ಬ್ರಿಟಿಷರ ಜೊತೆ ಬಂದ ಶಿಕ್ಷಣ ವೈಚಾರಿಕತೆಯ ಸ್ವಾಗತಕಾರರು. ಇಂಗ್ಲಿಷ್ ವಿದ್ಯಾಭ್ಯಾಸ, ಸ್ತ್ರೀ ಸುಧಾರಣಾವಾದ ಹಾಗೂ ಸಾಂಪ್ರದಾಯ ವಿರೋಧದಂತಹ ಮುಖ್ಯಸಂಗತಿಗಳು ಮತ್ತು ಸುಧಾರಣವಾದದ ನಿಲುವುಗಳನ್ನು ಎತ್ತಿ ಹಿಡಿಯುವ ಅಂಶಗಳನ್ನು ಕಾಣಬಹುದು. 'ಕಾನೂರು ಹೆಗ್ಗಡಿತಿ' ಕಾದಂಬರಿಯಲ್ಲಿ ಹೂವಯ್ಯ ಸುಧಾರಣಾವಾದದ ವ್ಯಕ್ತಿ. ಇಂಗ್ಲಿಷ್ ಶಿಕ್ಷಣದ ಪ್ರಭಾವದಿಂದ ಅತ್ಯಂತ ವಿವೇಕಿಯೂ, ವಿಚಾರವಂತನೂ, ಆಧುನಿಕತೆಯನ್ನು ಹೊಂದಿರುವವನು. ಸಾಮಾನ್ಯವಾಗಿ ಇವನ ಪ್ರಬಲ ಅಸ್ತ್ರ ವೈಚಾರಿಕತೆ. ಇಂಥ ವೈಚಾರಿಕತೆಯನ್ನೇ ಧರ್ಮವಿರೋಧಿ ನಿಲುವನ್ನಾಗಿ ಪರಿಗಣಿಸಿರುವುದನ್ನು ಕಾಣಬಹುದು. ವೆಂಕಪ್ಪಯ್ಯ ಜೋಯಿಸರು ಇಂಥ ಸುಧಾರಣಾ ನಿಲುವನ್ನೇ ಗುಮಾನಿಯಿಂದ ನೋಡುತ್ತಾರೆ. ಕುವೆಂಪು ತಮ್ಮ ವೈಚಾರಿಕತೆಯ ಮೂಲಕ ಜಗತ್ತಿಗೆ ಸಾರಿದ ನಿರಂಕುಶಮತಿ ಸಂದೇಶವನ್ನು ಸಾಧಿಸಿದ್ದು ಕಾದಂಬರಿಗಳು, ನಾಟಕಗಳು, ಕಥನ ಪರಂಪರೆಗಳು ಇಂತವುಗಳ ಮುಖಾಂತರ. ಹೂವಯ್ಯ, ರಾಮಯ್ಯ ಮತ್ತು ಮುಕುಂದಯ್ಯ ಹೀಗೆ ನಿರಂಕುಶಮತಿಗಳಾಗುವ ಜೊತೆಗೆ ಶೂದ್ರ ಚಳುವಳಿಯನ್ನು ರೂಪಿಸಿದ ಪಾತ್ರಗಳು ಜೊತೆಗೆ ದುರಂತದ ಬದುಕನ್ನು ಕಾಣುವ ರಾಮಯ್ಯನ ಪಾತ್ರ ಊಳಿಗಮಾನ್ಯವನ್ನು ಪ್ರತಿನಿಧಿಸಿದರೆ ಹೂವಯ್ಯ ಊಳಿಗಮಾನ್ಯ ವ್ಯವಸ್ಥೆಯನ್ನು ವಿರೋಧಿಸುತ್ತಾನೆ. ವಸಾಹತುಶಾಹಿಯ ಪರಿಣಾಮದಿಂದ ಈ ಫಲವನ್ನು ಪ್ರತಿನಿಧಿಸುತ್ತಾನೆ. ಚಂದ್ರಯ್ಯಗೌಡರು ಆಸ್ತಿಯ ಪಾಲು ಮಾಡುವಂತಹ ಸಂದರ್ಭದಲ್ಲಿ

ಹೂವಯ್ಯನ ತಾಯಿ ನಾಗಮ್ಮ ನಮ್ಮ ಭಾಗದ ಆಸ್ತಿಯು ಸಮಾನವಾಗಿ ಬರಬೇಕೆಂಬುದು ಅವಳ ಆಕಾಂಕ್ಷೆಯಾಗಿರುತ್ತದೆ. ಆದರೆ ಹೂವಯ್ಯ ಆಸ್ತಿಯ ಬಗ್ಗೆ ಯಾವುದೇ ರೀತಿಯಲ್ಲಿ ಪ್ರತಿಭಟಿಸುವುದಿಲ್ಲ. ಈ ವ್ಯವಸ್ಥೆಯ ವಿರುದ್ಧ ಪ್ರತಿಭಟಿಸಿದರೆ ವ್ಯವಸ್ಥೆಗೆ ಸಿಲುಕಿ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳಬೇಕಾಗುತ್ತದೆ. ಹೂವಯ್ಯ ಆಧುನಿಕ ಶಿಕ್ಷಣ ಪ್ರಭಾವ ಜೊತೆಗೆ ಗಾಂಧಿ ಮತ್ತು ವಿವೇಕಾನಂದರ ಪ್ರಭಾವಗಳು ಸಹ ಹೂವಯ್ಯನ ಮನಸ್ಸಿನ ಮೇಲೆ ಗಾಢವಾದ ಪ್ರಭಾವ ಬೀರಿದೆ. ಹೂವಯ್ಯ ಆಧ್ಯಾತ್ಮವನ್ನು ಅನುಸರಿಸಿ ತನ್ನ ಅಸ್ತಿತ್ವವನ್ನು ಬಲಪಡಿಸಿಕೊಂಡನು. ಕುವೆಂಪುರವರು ತೀವ್ರ ವಿಚಾರವಾದಿಯಾಗಿದ್ದರೂ ಆಧ್ಯಾತ್ಮ ಜೀವಿಯಾಗಿದ್ದರು. ಹೆಚ್ಚು ಭಾವಜೀವಿಯಾಗಿದ್ದರು. ಆದರೆ ಸಮಾಜದಲ್ಲಿನ ಘಟನೆಯನ್ನು ತುಂಬಾ ಭಾವುಕತೆಯಿಂದ ನೋಡಿದವರಲ್ಲ. ಜಾತಿಪದ್ಧತಿ, ಊಳಿಗಮಾನ್ಯ ಪದ್ಧತಿ ವಿರುದ್ಧ ಕುವೆಂಪುರವರ ಕಾದಂಬರಿಗಳಲ್ಲಿ ಪ್ರತಿಭಟಸಿರುವಷ್ಟು ಬೇರೆ ಯಾವ ಕಾದಂಬರಿಗಳಲ್ಲಿಯೂ ಸಹ ಇಷ್ಟು ಪ್ರತಿಭಟನೆಯನ್ನು ಕಾಣಲಾಗುವುದಿಲ್ಲ. ಇಲ್ಲಿ ಒಟ್ಟಾರೆಯಾಗಿ ಕುವೆಂಪುರವರ ಸ್ವವಿಮರ್ಶೆ ನೆಲೆ ಅಭಿವ್ಯಕ್ತಗೊಂಡಿದೆ. "ಒಂದು ಸಮುದಾಯ ದೈಹಿಕವಾಗಿಯೂ ಮಾನಸಿಕವಾಗಿಯೂ ಅಸಮರ್ಥವೆಂದು ಇತರರಿಂದ ತುಳಿಯಲ್ಪಟ್ಟಾಗ ಅವರನ್ನು ಸಮಾನತೆಯ ಮಟ್ಟಕ್ಕೆ ಇಡುವುದು ಒಂದೇ ಒಂದು ಮಾರ್ಗ : ಅವರಿಗಾಗಿ ವಿಶೇಷ ಸವಲತ್ತುಗಳನ್ನು ನಿರ್ಮಾಣ ಮಾಡಿಕೊಡಬೇಕು".[4] ಎನ್ನುವ ಲೋಹಿಯಾರವರ ಮಾತು ಯಾವುದೇ ಸಮುದಾಯ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ತುಳಿಯಲ್ಪಟ್ಟಿದೆಯೋ ಆ ಸಮುದಾಯಕ್ಕೆ ಸೌಲಭ್ಯಗಳನ್ನು ಕೊಟ್ಟು ಒಂದು ಸಮನಾಂತರ ಹಂತಕ್ಕೆ ತರುವುದಕ್ಕೆ ಪ್ರಯತ್ನಿಸುವುದು ಜೊತೆಗೆ ಬ್ರಿಟಿಷರು ಸ್ಥಾಪಿಸಿದ ಇಂಗ್ಲಿಷ್ ಶಾಲೆ ಮತ್ತು ಉದಾರವಾದಿ ಶಿಕ್ಷಣ ಕೆಳಜಾತಿ / ಕೆಳವರ್ಗಗಳ ಭವಿಷ್ಯತ್ತಿನ ಪಾಲಿಗೆ ಭರವಸೆಯ ನೆಲೆಗಳಾದವು. ಅಂಬೇಡ್ಕರ್ ಯೂರೋಪಿನ ಆದುನಿಕತೆಯ ಫಲವಾಗಿ ಆ ಜನಾಂಗದ ಧ್ವನಿಯಾಗಿದ್ದು ಮತ್ತು ಕುವೆಂಪು ಶತಮಾನದ ಸಾಂಸ್ಕೃತಿಕ ವ್ಯಕ್ತಿಯಾಗಿದ್ದು ವಸಾಹತುಶಾಹಿಯ ಮೂಲ ಬೇರಿನಿಂದಲೇ ಆಧುನಿಕ ಶಿಕ್ಷಣವನ್ನು ಪಡೆದು ಎಲ್ಲ ಉನ್ನತ ಹುದ್ದೆಗಳನ್ನು ಪಡೆದವರು ಸಾಂಪ್ರದಾಯಿಕವಾಗಿ ಬ್ರಾಹ್ಮಣರೇ ಮೊದಲಿಗರಾಗಿದ್ದು ಸರ್ಕಾರದ ಸೇವೆಯಲ್ಲಿ ಅವರೇ ಪ್ರಾಬಲ್ಯ ಹೊಂದಿದ್ದರು. ಆದರೆ ಆಧುನಿಕ ಶಿಕ್ಷಣದ ಸೌಲಭ್ಯದಿಂದ ಕೆಳಜಾತಿ / ಕೆಳವರ್ಗಗಳ ಸಾರ್ವಜನಿಕ ಸೇವೆಯಲ್ಲಿನ ತಮ್ಮ ಹಕ್ಕಿಗಾಗಿ ಹೋರಾಟ ಆಂಭಿಸಿದವು. ಈ ಎಲ್ಲ ಹೋರಾಟಗಳಿಗೆ ಕ್ರೈಸ್ತ ಧರ್ಮದ ಪ್ರಚಾರ ಮಂಡಳಿ ಮತ್ತು ಬ್ರಹ್ಮ ಸಮಾಜಗಳು ಬೆಂಬಲಿಸಿದವು. ಮುಖ್ಯವಾಗಿ 'ಕಾನೂರು ಹೆಗ್ಗಡಿತಿ' ಕಾದಂಬರಿಯನ್ನು ಗ್ರಹಿಸಿದಂತಹ ಸಂದರ್ಭದಲ್ಲಿ ಇಲ್ಲಿ ಒಕ್ಕಲಿಗರೇ ಭೂಮಾಲೀಕರು ಮತ್ತು ಪಾಳೇಗಾರಿಕೆ ಹೊಂದಿದ್ದಂತವರು.

ಮಧ್ಯಯುಗದ ಯುರೋಪಿನಲ್ಲಿ ಚರ್ಚು ಭೂಮಿಯ ಒಡೆತನ ಹೊಂದಿದ್ದ ಮುಖ್ಯ ಸಂಸ್ಥೆಗಳಲ್ಲಿ ಒಂದಾಗಿತ್ತು. ಹಾಗೆಯೇ ಮಲೆನಾಡಿನಲ್ಲಿ ಭೂಮಾಲೀಕರು ಮತ್ತು ಪಾಳೇಗಾರರದ್ದು ಭೂಮಿಯ ಒಡೆತನದ ಒಂದು ಸಂಸ್ಥೆ ಆಗಿತ್ತು. ಇದರ ಪ್ರಭಾವ ಎಲ್ಲ ಗೇಣಿದಾರರ ಮಾತ್ರವಲ್ಲದೆ ರಾಜಕೀಯ ವ್ಯವಸ್ಥೆಯ ಮೇಲೂ ವಿಸ್ತರಿಸಿತ್ತು. ಇಲ್ಲಿನ ಜಮೀನುದಾರರು ಅನುಮತಿ ಇಲ್ಲದೆ ಸ್ವತಂತ್ರವಾಗಿ ಭೂಮಿಯನ್ನು ಉಳುಮೆ ಮಾಡುವಂತಿರಲಿಲ್ಲ. ಯಾಕೆಂದರೆ ಹಳೆಪೈಕದವರು ಭೂಮಾಲೀಕರನ್ನು ಯಾವುದೇ ರೀತಿಯಲ್ಲಿಯೂ ಸಹ ಸರಿಸಮಾನವಾಗುವಂತೆ ಅನುಸರಿಸಬಾರದೆಂದು ನಿಯಮವನ್ನು ಸೂಚಿಸುತ್ತಾರೆ. ಅಂದರೆ, ಕೆಳಜಾತಿ, ಕೆಳವರ್ಗದವರ ಪರವಾದ ಭೂಮಿಯ ಹಕ್ಕಿನ ಪ್ರಶ್ನೆಯನ್ನು ಈ ಕಾದಂಬರಿ ಎತ್ತುವುದಿಲ್ಲ. ಅಲ್ಲದೆ ಶೂದ್ರ ಸಮುದಾಯದ ಭೂಮಾಲೀಕ ಅಣ್ಣಯ್ಯಗೌಡ ಹಾಗೂ ಆತನ ಮಗ ಓಬಯ್ಯ ಕೂಡ ಭೂಮಿಯನ್ನು ಕಳೆದುಕೊಂಡು ಅತ್ಯಂತ ವಿಷಾದಕರ ಬದುಕನ್ನು ಅನುಭವಿಸುವುದನ್ನು ಇಲ್ಲಿ ಕಾಣುತ್ತೇವೆ. ಆದರೆ, ಹೂವಯ್ಯನಂಥ ವಿಚಾರವಾದಿಗಳು ಇಲ್ಲಿ ತಮ್ಮ ಕುಟುಂಬವನ್ನು ಮೀರಿ ಶೂದ್ರವರ್ಗದ ಸುಧಾರಣೆಗೆ ಹಂಬಲಿಸುತ್ತಾರೆ.

ಕುವೆಂಪು ತಮ್ಮ ಕಾದಂಬರಿಗಳಲ್ಲಿ ಚಿತ್ರಿಸಿರುವ ಮಲೆನಾಡಿನ ಊಳಿಗಮಾನ್ಯ ವ್ಯವಸ್ಥೆ ಧಾರ್ಮಿಕ ನಂಬಿಕೆಯ ಭಾಗವಾಗಿ ಮೂಡಿಬಂದಿದೆ. ಧರ್ಮ, ಜಾತಿ, ಪುರೋಹಿತ ಹಾಗೂ ಜಮೀನ್ದಾರಿ ಸಂಘರ್ಷದಲ್ಲಿ ಸಮಾಜ ಕಂಡ ಅನೇಕ ಬಗೆಯ ವೈರುಧ್ಯ ಹಾಗೂ ವಿರೋಧಭಾಸಗಳನ್ನು ಇಲ್ಲಿ ಗ್ರಹಿಸಬಹುದಾಗಿದೆ. ಚೆನ್ನಯ್ಯ ಇಲ್ಲಿ ಪುರೋಹಿತರಾಗಿ ರಾಜಕಾರಣವನ್ನು ಹೀಗೆ ಪ್ರಶ್ನಿಸುತ್ತಾನೆ : "ಚೆನ್ನಯ್ಯ ಈ ಹಾರುವರ ದೆಸೆಯಿಂದ ನಮಗೆ ಉಳಿಗಾಲವಿಲ್ಲ! ನಮಗೆ ವಿದ್ಯೆ, ಬುದ್ಧಿ, ಚೆನ್ನಾಗಿ ಕೊಡಲಿಲ್ಲವಲ್ಲ, ಹೋಗಲಿ! ಒಳ್ಳೊಳ್ಳೆ ಹೆಸರುಗಳನ್ನಾದರೂ ಇಟ್ಟುಕೊಡಬಾರದೆ! ಅದಕ್ಕೂ ಹೊಟ್ಟೆ ಕಿಚ್ಚು ಅಂತ ಕಾಣ್ತದೆ. ಕರಿಯ, ಸಿಂಡ, ತಿಮ್ಮ, ಕಾಳ, ಬೋಳ ಇವೇ ತಮ್ಮ ಪಾಲಿಗೆ!"[5] ಎಂದು ಹೂವಯ್ಯನಿಗೆ ಒಂದು ಒಳ್ಳೆಯ ಹೆಸರು ಇಡುವಂತೆ ಹೇಳುತ್ತಾನೆ. ಈ ರೀತಿಯಲ್ಲಿ ಬ್ರಾಹ್ಮಣಶಾಹಿ ವರ್ಗ ಶೂದ್ರ ಸಮುದಾಯಕ್ಕೆ ಒಂದು ಒಳ್ಳೆಯ ಹೆಸರುಗಳನ್ನು ಇಡುವುದರಲ್ಲಿಯೂ ಆ ವರ್ಗದ ರಾಜಕಾರಣದ ಹಾಗೂ ಶೂದ್ರ ಸಮಾಜಕ್ಕೆ ಬ್ರಾಹ್ಮಣಶಾಹಿಯು ಮಾಡುವಂತಹ ಮೋಸಗಳನ್ನು ಕಂಡುಕೊಳ್ಳುವುದಕ್ಕೆ ಅವರಿಗಿರುವ ಅಸಾಮರ್ಥ್ಯವನ್ನು ಇಲ್ಲಿ ಗ್ರಹಿಸಬಹುದಾಗಿದೆ. ಈ ಅಸಾಮರ್ಥ್ಯ ಬೆಳೆಯಲು ಮುಖ್ಯವಾದ ಕಾರಣವೆಂದರೆ ವೆಂಕಪಯ್ಯ ಜೋಯಿಸರು. ಶೂದ್ರರ ಈ ಮೌಢ್ಯವನ್ನೇ ತಮ್ಮ

ಹೊಟ್ಟೆ ಪಾಡನ್ನಾಗಿಸಿಕೊಂಡಿದ್ದಾರೆ. ಶೂದ್ರರಿಗೆ ಜ್ಞಾನವನ್ನು ನೀಡುವ ಆಧುನಿಕ ವಿದ್ಯಾಭ್ಯಾಸವನ್ನು ಕುರಿತು ವೆಂಕಪ್ಪಯ್ಯನವರಿಗೆ ಅಸಹನೆ ಇದೆ. ಮತ್ತು ಈ ಕಾಳ, ಬೋಳ ಎಂಬ ಹೆಸರುಗಳನ್ನು ಸೂಚಿಸಿ ತಮಗೆ ವಂಚನೆ ಮಾಡುತ್ತಿದ್ದಾರೆ ಎಂಬುದು ಚೆನ್ನಯ್ಯನ ವಾದವಾಗಿದೆ. ಆಧುನಿಕ ವಿದ್ಯಾಭ್ಯಾಸದ ಪ್ರಭಾವದಿಂದ ಹೂವಯ್ಯ ಮತ್ತು ಸೀತೆಯು ಸೇರಿ ಚೆನ್ನಯ್ಯನ ಮಗುವಿಗೆ 'ರಮೇಶ' ಎಂಬ ಹೆಸರನ್ನು ನಾಮಕರಣ ಮಾಡುತ್ತಾರೆ. ವೆಂಕಪ್ಪಯ್ಯನವರಿಗೆ ಹೂವಯ್ಯನನ್ನು ಕಂಡರೆ ಅಸಮಧಾನ. ಏಕೆಂದರೆ ಆತ ತನ್ನ ಶೂದ್ರ ಪಾತ್ರವನ್ನು ನಿರ್ವಹಿಸದೇ ಸಂಸ್ಕೃತವನ್ನು ಕಲಿತು ಬ್ರಾಹ್ಮಣರ ಸಂಸ್ಕೃತಿಯ ಉದಾತ್ತ ಅಂಶಗಳನ್ನು ತಿಳಿದುಕೊಂಡಿದ್ದಾನೆ. ಇಲ್ಲಿ ಮುಖ್ಯವಾಗಿ ವೆಂಕಪ್ಪಯ್ಯ ಜೋಯಿಸರು ಶೂದ್ರರನ್ನು ಅಜ್ಞಾನದಲ್ಲೆ ಇಡಬೇಕೆಂಬುದು ಇವರ ಆಶಯವಾಗಿತ್ತು.

"ಕುವೆಂಪುರವರ ಪ್ರತಿಭಟನೆಯು ಇಬ್ಭಾಗವಾಗಿದ್ದು, ಸಾಮಾಜಿಕ ಮೇಲು-ಕೀಳು, ಮತೀಯ ಮೌಢ್ಯಗಳ ವಿರುದ್ಧವಿದೆ. ಹಾಗೂ ಖಾಸಗೀ ಅನ್ವಯ ಬಲದಿಂದ ನಡೆಯುವ ಪಾಳೇಗಾರಿಕೆ ಮತ್ತು ದಬ್ಬಾಳಿಕೆಗಳ ವಿರುದ್ಧವಾಗಿದೆ. ಮೊದಲನೆಯ ಶತೃವಿನ ವಿರುದ್ಧ ಹೋರಾಡಲು ವೈಚಾರಿಕ ಎಚ್ಚರವನ್ನು ನೀಡುವ ಕುವೆಂಪು, ಎರಡನೆಯದರ ವಿರುದ್ಧ ಸಂಘಟನೆಯ ಎಚ್ಚರವನ್ನು ಯಾಕೆ ಕಂಡುಕೊಳ್ಳಲಿಲ್ಲವೆಂಬ ಪ್ರಶ್ನೆಯನ್ನು ಮೊದಲಿಗೇ ನೋಡಬೇಕಾಗುತ್ತದೆ. ಹೂವಯ್ಯ ಒಬ್ಬ ವೈಚಾರಿಕನಾದ ನಾಯಕ ಅವನು ಪುರೋಹಿತಶಾಹಿಗಳ ವಿರುದ್ಧ ನಿಷ್ಠುರ ಹೋರಾಟವನ್ನು ಮಾಡುತ್ತಾನೆ. ಆದರೆ ಆರ್ಥಿಕ ಜೀತಪದ್ಧತಿಯನ್ನು ಕದಲಿಸುವ ಯತ್ನ ಮಾಡುವುದಿಲ್ಲ. ಹೂವಯ್ಯನು ಕೆಲಸಗಾರರ ಸ್ಥಿತಿಗತಿಗಳನ್ನು ಮಾನವೀಯ ಸಹಾನುಭೂತಿಯಿಂದ ಸುಧಾರಿಸಿದರೂ ಕಡೆಗೆ ಭೂಮಾಲೀಕ ವ್ಯವಸ್ಥೆ ಆಬಾಧಿತವಾಗಿ ಉಳಿಯುತ್ತದೆ. ನಿಜವಾದ ಸಮಾನತೆಗೆ ಗುರಿಯಿಟ್ಟ ಬದಲಾವಣೆಯಲ್ಲಿ ಉತ್ಪಾದನೆ ಮತ್ತು ಅವರ ವಿತರಣೆಯ ಸಾಂಪ್ರದಾಯಿಕ ವ್ಯವಸ್ಥೆ ಅಳಿಯಬೇಕು".[6] ಈ ಹಿನ್ನೆಲೆಯಲ್ಲಿ ಜಾತೀಯತೆಯಲ್ಲಿ ನಡೆಯುವಂತಹ ದೌರ್ಜನ್ಯ ಮತ್ತು ಮೂಢನಂಬಿಕೆಗಳಲ್ಲಿ ಉಂಟಾಗಿರುವಂತಹ ಸ್ಥಿತಿಯನ್ನು ಕುರಿತು ನಡೆಯುವ ವಾಗ್ದಾಳಿ ಮತ್ತು ಪುರೋಹಿತಶಾಹಿಯ ವಿರುದ್ಧ ಆಗುವಂತಹ ತಿರುಗೇಟು ಮುಂತಾದವುಗಳನ್ನು ಕಾದಂಬರಿಯಲ್ಲಿ ಕಾಣಬಹುದಾಗಿದೆ. ಇವುಗಳೆಲ್ಲವನ್ನು ಖಂಡಿಸುವ ಮತ್ತು ವಿರೋಧಿಸುವಂತಹ ಹೂವಯ್ಯ ಜೀತಪದ್ಧತಿಯನ್ನು ಏಕೆ ವಿರೋಧಿಸಲಿಲ್ಲ. ಬಹುಶಃ ತಮ್ಮ ಹೊಲಗದ್ದೆಗಳಲ್ಲಿ ದುಡಿಯುವ ವರ್ಗಕ್ಕೆ ಒಂದು ರೀತಿಯ ಸ್ವಾತಂತ್ರ್ಯವನ್ನು ಕಲ್ಪಿಸಿಕೊಟ್ಟರಾಯಿತು ಎಂಬ ನಿಲುವು ಕಾದಂಬರಿ ಮೂಕವಾಗಿ ಅಭಿವ್ಯಕ್ತಿಸುತ್ತದೆ.

"ಸೀತೆ, ನಾವು ಬರಿಯ ದೇಹಗಳಲ್ಲ. ನಮ್ಮಲ್ಲಿ ಆತ್ಮವಿದೆ. ಅದು ನಾವು ಅಂಗಿ ಹಾಕಿಕೊಳ್ಳುವಂತೆ ಈ ದೇಹವನ್ನು ಹಾಕಿಕೊಂಡಿದೆ. ನೀನು ಸೀರೆ ಉಟ್ಟುಕೊಂಡಿರುವಂತೆ ಈ ದೇಹವನ್ನು ಉಟ್ಟುಕೊಂಡಿದ್ದೀಯ. ನೀನು ಐಶ್ವರ್ಯವಂತರ ಮಗಳು. ಆದ್ದರಿಂದ ಸೊಗಸಾದ ಸೀರೆಯನ್ನು ಉಟ್ಟುಕೊಂಡು ಚೆನ್ನಾಗಿ ಕಾಣುತ್ತಿದ್ದೀಯ. ಬಡವರು ಬಡಸೀರೆ ಉಟ್ಟುಕೊಂಡಿರುತ್ತಾರೆ. ಅವರವರ ಉಡುಗೆ ತೊಡುಗೆಗಳನ್ನು ನೋಡಿದರೆ ಸಾಧಾರಣವಾಗಿ ಅವರವರ ಅಂತಸ್ತು ತಕ್ಕಮಟ್ಟಿಗೆ ಗೊತ್ತಾಗುತ್ತದೆ. ಹಾಗೆಯೇ ಆತ್ಮದ ಯೋಗ್ಯತೆಗೆ ತಕ್ಕಹಾಗಿರುತ್ತವೆ.. ಆದರೆ ಆ ಸೀರೆ ಎಷ್ಟು ದಿವಸ ಬಾಳುತ್ತದೆ? ಹಾಗೆಯೇ ನಮ್ಮ ಆತ್ಮ ಈ ದೇಹ ಅಯೋಗ್ಯವಾದ ಕೂಡಲೇ ಅದನ್ನು ಬಿಸಾಡುತ್ತದೆ. ಅದನ್ನೇ 'ಸಾವು' ಎಂದು ಕರೆಯುತ್ತಾರೆ".[7] ಈ ಹಿನ್ನೆಲೆಯಲ್ಲಿ ಗಮನಿಸಿದಾಗ ಆಧುನಿಕ ಶಿಕ್ಷಣದ ಫಲವಾಗಿ ಹೂವಯ್ಯ ಬಡವ ಮತ್ತು ಶ್ರೀಮಂತರ, ಹೆಣ್ಣು ಮತ್ತು ಗಂಡಿನ ನಡುವಿನ ಮೇಲು ಮತ್ತು ಕೀಳಿನ ಅಸಮಾನತೆಯನ್ನು ಸೀಳುವುದಕ್ಕೆ ಪ್ರಯತ್ನಪಟ್ಟಿದ್ದಾನೆ. ಮತ್ತು ಹೂವಯ್ಯ ಚಿಂತಕನಾಗಿ ಸೀತೆಗೆ ಜೀವನ ಎನ್ನುವುದು ಬದುಕು ಮತ್ತು ಸಾವಿನ ನಡುವಿನ ಸಂಬಂಧ ಎಂಬುದನ್ನು ಸೀರೆಯ ಮೂಲಕ ಮನವರಿಕೆ ಮಾಡಿಕೊಡುತ್ತಿದ್ದಾನೆ. ಶ್ರೀಮಂತರು ಎಷ್ಟೇ ಬೆಲೆಯುಳ್ಳ ಸೀರೆಯನ್ನು ಉಟ್ಟುಕೊಂಡರೆ ಏನು ಪ್ರಯೋಜನ? ಮನುಷ್ಯನಲ್ಲಿರುವ ಮಾನವೀಯತೆ ಬಹಳ ಮುಖ್ಯ. ಶ್ರೀಮಂತರು ಹೆಚ್ಚಿನ ಸೀರೆಯನ್ನು ಉಟ್ಟುಕೊಂಡರೆ, ಬಡವರು ಕಡಿಮೆ ಹಣದ ಸೀರೆಯನ್ನು ಉಟ್ಟುಕೊಂಡರೆ ಸಾವಿನಲ್ಲಿ ಯಾವುದೇ ತಾರತಮ್ಯ ಇಲ್ಲ.

ಕುವೆಂಪು ಕಾದಂಬರಿಗಳಲ್ಲಿ ವ್ಯಕ್ತಗೊಳ್ಳುವ ಭೂ ಸಂಬಂಧಿ ಚಟುವಟಿಕೆಗಳಿಗೂ ಮತ್ತು ವರ್ಗ ಸಂಘರ್ಷಗಳಲ್ಲಿ ಸಂಬಂಧವಿದೆ. "ಕಾನೂರು ಚಂದ್ರಯ್ಯಗೌಡರ ಕುಟುಂಬದಲ್ಲಿ ಒಕ್ಕಲಾಗಿ ದುಡಿಯುತ್ತಿದ್ದ ಬೇಲರ ಬೈರನಿಗೆ ಎದುರಾದ ಸಮಸ್ಯೆ ಚೋಮ ಮತ್ತು ಸಾಕವ್ವ ಎದುರಿಸುವ ಸಮಸ್ಯೆಗಿಂತ ಭಿನ್ನವೂ ಕ್ರೂರವೂ ಆಗಿದೆ. ಈ ಕ್ರೂರ ಸಮಸ್ಯೆಗೆ ಹೂವಯ್ಯ ಮತ್ತು ರಾಮಯ್ಯರೇ ಕಾರಣವಾದರೂ ಅದರ ಪರಿಣಾಮ ಶೂದ್ರರ ಮೇಲಾಗುವ ಸನ್ನಿವೇಶದಿಂದ ಫ್ಯೂಡಲ್ ಸಂಸ್ಕೃತಿಯ ಕ್ರೂರತನವನ್ನು ಗ್ರಹಿಸಬಹುದು. ಚಂದ್ರಯ್ಯಗೌಡರ ಹೊಲ ಉಳುತ್ತಿರುವ ಬೈರನನ್ನು ಓಡಿಸಿ ಹೂವಯ್ಯ ರಾಮಯ್ಯರು ಉಳಲು ಪ್ರಾರಂಭಿಸಿದಾಗ ಇವರಿಗೆ ಅಭ್ಯಾಸವಿಲ್ಲದ ಎತ್ತುಗಳು ರಭಸವಾಗಿ ಧಾವಿಸಿದ್ದರಿಂದ ಹೂವಯ್ಯನ ಕಬ್ಬಿಣದ ನೇಗಿಲಿನ ಹರಿತವಾದ ಕುಳದಬಾಯಿ ಒಂದು ಎತ್ತಿನ ಕೊರಳಿನ ಮೇಲ್ಭಾಗಕ್ಕೆ ತಗುಲಿ ಕತ್ತಿಯಿಂದ ಕಡಿದಂತೆ ಗಾಯವಾಗಿ ನೆತ್ತರು ಹಾರಿತು. ಭೀತರಾದ ಬೈರ, ಸಿದ್ಧರು ಈ ವಿಷಯವನ್ನು ಚಂದ್ರಯ್ಯಗೌಡರಿಗೆ ತಿಳಿಸಿದ ತಕ್ಷಣದ

ಇವರ ಪಾಲಿಗೆ ಬರಬೇಕಾದ ಕೂಲಿಯನ್ನು ವಜಾ ಮಾಡಲು ತಮ್ಮ ಸೇರೆಗಾರರಿಗೆ ತಿಳಿಸಿದರು. ಕೂಲಿ ಕೊಡದ ಸುದ್ಧಿಯನ್ನು ತಿಳಿದ ಹೂವಯ್ಯ ಉಗ್ರಗೊಂಡು ಸ್ವತಃ ತಾನೇ ಬೈರಸಿದ್ಧರೆಂಬ ಅಸ್ಪಶ್ಯರಿಗೆ ಭತ್ತದ ರೂಪದಲ್ಲಿ ಕೂಲಿಯನ್ನು ಸಂದಾಯ ಮಾಡುತ್ತಾನೆ. ವಿಷಯ ತಿಳಿದ ಗೌಡರು ಹೂವಯ್ಯನ ಮೇಲೆ ಕೆಂಡವಾಗಿ ರೋಷ ಹೊಗೆಯಾಡುತ್ತಲೇ ಆಸ್ತಿಯ ಪಾಲಿನಲ್ಲಿ ಮುಕ್ತಾಯವಾಗುತ್ತದೆ. ಉದಾರವಾದಿಯಾದ ಹೂವಯ್ಯ ತನ್ನ ಆಸ್ತಿ ಮಾತ್ರವಲ್ಲ ಒಟ್ಟು ಖಾಸಗಿ ಆಸ್ತಿಯ ವಿರುದ್ಧವೇ ಬಂಡೇಳುತ್ತಾನೆ. ಹೀಗೆ ಕುವೆಂಪು ಅವರ ಕಾದಂಬರಿಗಳಲ್ಲಿ ತೀವ್ರವಾಗಿ ತೋರುವ ಖಾಸಗಿ ಆಸ್ತಿಯ ವಿರುದ್ಧದ ಪ್ರತಿಭಟನೆ ಕಾರಂತರ ಕಾದಂಬರಿಗಳಲ್ಲಿ ವ್ಯಕ್ತವಾಗುವುದಿಲ್ಲ. ಆಶ್ಚರ್ಯದ ಸಂಗತಿಯೆಂದರೆ ಇಂಥ ಖಾಸಗಿ ಆಸ್ತಿಯ ವಿರುದ್ಧ ಕೆಳಗಿನ ಶ್ರೇಣಿಯವರಾದ ಅಸ್ಪೃಶ್ಯರು, ಶೋಷಿತರು ತೋರುವ ಪ್ರತಿಭಟನೆಯೇ ಒಂದು ಪರಂಪರೆಯಾಗಿ ಬಂದಿರುವಾಗ ಚೋಮ, ಸಾಕವ್ವರಿಗಿಂತ ಭಿನ್ನವಾಗಿ ಹೂವಯ್ಯ ಮಾತ್ರ ಖಾಸಗಿ ಆಸ್ತಿಯನ್ನು ವಿರೋಧಿಸುವ ಏಕೈಕ ವ್ಯಕ್ತಿಯಾಗುತ್ತಾನೆ. ಇದು ಊಳಿಗಮಾನ್ಯ ಕುಟುಂಬದ ಒಳಗೆ ಎದ್ದಿರುವ ಬಂಡಾಯವನ್ನು ಹೂವಯ್ಯ ಪ್ರತಿನಿಧಿಸುತ್ತಾನೆ".[8] ಹಳೆಯ ತಲೆಮಾರಿನವರಾದಂತಹ ಚಂದ್ರಯ್ಯಗೌಡರು ಜಾತಿಯ ಬಗ್ಗೆ ತುಂಬಾ ಸಾಂಪ್ರದಾಯಸ್ಥರಾಗಿದ್ದು ನಂಬಿಕೆಗಳನ್ನು ಉಳ್ಳವರಾಗಿದ್ದು ಇವರ ವಿರುದ್ಧ ಎರಡನೆಯ ತಲೆಮಾರಿನವರಾದ ಹೂವಯ್ಯ ಮತ್ತು ರಾಮಯ್ಯ ಇವರಿಬ್ಬರು ತಮ್ಮ ಹೊಸ ಆಲೋಚನೆಗಳನ್ನು ಮೈಗೂಡಿಸಿಕೊಂಡು ಹಿರಿಯ ತಲೆಮಾರಿಗೆ ಸವಾಲು ಹಾಕುವಂತೆ ಮಾತನಾಡುತ್ತಾರೆ. ಜೊತೆಗೆ ಆಸ್ತಿಯ ವಿರುದ್ಧ ಹಾಗೂ ಪರವಾಗಿ ಹೋರಾಡುವ ಹೂವಯ್ಯನ ನಿಲುವೇ ವಸಾಹತುಶಾಹಿಯ ಫಲವನ್ನು ಸೂಚಿಸುತ್ತದೆ. ಜೊತೆಗೆ ಬದಲಾವಣೆಯ ಹರಿಕಾರನಾಗಿ ಹೂವಯ್ಯ ಕಾಣಿಸಿಕೊಳ್ಳುತ್ತಾನೆ.

ಕುವೆಂಪುರವರು ಮಂಡಿಸಿರುವ ಊಳಿಗಮಾನ್ಯ ವ್ಯವಸ್ಥೆಯ ದೈನಂದಿನ ರಾಜಕಾರಣದಲ್ಲಿ ಈ ಪ್ರತಿಷ್ಠಿತ ವರ್ಗದ ಶೋಷಣೆ, ದಬ್ಬಾಳಿಕೆ, ಸಾಮಾಜಿಕ ನಿಯಂತ್ರಣಗಳು ಗೋಚರವಾಗುತ್ತವೆ. ಅದರ ಜೊತೆಗೆ ಅಧಿಕಾರದ ಪಲ್ಲಟ, ಲಿಂಗರಾಜಕಾರಣ, ಲೈಂಗಿಕ ರಾಜಕಾರಣ, ಕಾಮ, ವಿದ್ರೋಹ, ಅನೈತಿಕತೆ ಇವೇ ಮೊದಲಾದ ವಸ್ತುಗಳನ್ನು 'ಕಾನೂರು ಹೆಗ್ಗಡಿತಿ' ಕಾದಂಬರಿ ಪರಿಶೀಲಿಸುತ್ತದೆ. ಹೆಣ್ಣಿನ ಶೀಲಕ್ಕೆ ಸಂಬಂಧಿಸಿದಂತೆ ಹೆಂಡತಿ ಗಂಡನಿಗೆ ಅಧೀನ ಹಾಗೂ ನಿಷ್ಠಳಾಗಿರಬೇಕು ಎಂಬ ನಿಯಮ ಮಾತ್ರ, ಅದೇ ರೀತಿ ಗಂಡ ಹೆಂಡತಿಗೆ ನಿಷ್ಠನಾಗಿರಬೇಕು ಎನ್ನುವ ನಿಯಮ ಇಲ್ಲದೇ ಇರುವ ಅಂಶವನ್ನು ಕುವೆಂಪು ಇಲ್ಲಿ ಪ್ರಶ್ನಿಸಿದಂತೆ ಕಾಣುತ್ತದೆ. 'ಬೇಲರೂ ಘಟ್ಟದವರು ಥರಥರ ನಡುಗುತ್ತಾರಂತೆ ಸುಬ್ಬಮ್ಮನ ಬಾಯಿ ಕೇಳಿದರೆ! ಆ ಸೇರೆಗಾರ

ರಂಗಪ್ಪಸೆಟ್ಟರಂತೂ ಕಾಲು ಸಂಧಿಯಲ್ಲಿ ಬಾಲ ಮುದುರಿಕೊಂಡು ನಾಯಿಮರಿ ಆಗಿಬಿಟ್ಟಿದ್ದಾರಂತೆ ರಾಮಯ್ಯಗೌಡರು ಮನೆ ವೈವಾಟ್ಟಿನ ಗೋಜಿಗೆ ಹೋಗುವುದಿಲ್ಲವಂತೆ. ಎಲ್ಲ ತಮ್ಮ ಚಿಕ್ಕಮ್ಮನ ಕೈಲಿ ಬಿಟ್ಟು ಬಿಟ್ಟಿದ್ದಾರಂತೆ ಏನು ಧೈರ್ಯ ಅಂದರೆ ಅವರಿಗೆ ಹೆಂಗಸರಾದರೂ ಒಬ್ಬ ದಿಂಡೆದಾಂಡಿಗ ಬೇಲರಾಳಿಗೆ ಹುಣಸೆಬರಲು ತಗೊಂಡು ಮೈಯಲ್ಲಿ ಬರೆ ಬೀಳುವಂತೆ ಹೊಡೆದುಬಿಟ್ಟರಂತೆ! ಚಂದ್ರಯ್ಯಗೌಡರ ಹೆಂಡತಿ ಚಂದ್ರಯ್ಯಗೌಡರೇ ಆಗಿಬಿಟ್ಟಿದ್ದಾರಂತೆ ಎಂದು ಮೊದಲಾಗಿ ಜನರಿಗೆ ಮಾತು ಹಬ್ಬಿತ್ತು.' ಕಾನೂರು ಹೆಗ್ಗಡತಿ ಕಾದಂಬರಿಯಲ್ಲಿ ಸುಬ್ಬಮ್ಮನಂಥ ದುರಂತ ನಾಯಕಿ ಇನ್ನೊಬ್ಬಳಿರಲಿಲ್ಲ. ಅವಳ ಬಾಳಿನುದ್ದಕ್ಕೂ ಯಾವಾಗಲೂ ಸಂಕಷ್ಟಗಳನ್ನೇ ಎದುರಿಸಬೇಕಾಯಿತು. ನೆಲ್ಲಹಳ್ಳಿಯ ಜನರಿಂದ ಸುಬ್ಬಿಯೆಂದು ಕರೆಸಿಕೊಂಡು ತುಂಬ ಬಡತನದಿಂದ ಬಾಳುತ್ತಿದ್ದವಳು ಚಂದ್ರೇಗೌಡರ ಮೂರನೆಯ ಹೆಂಡತಿಯ ಮರಣದ ನಂತರ ಕಾನೂರಿನ ಹೆಗ್ಗಡಿತಿಯಾಗಿ ಮೆರೆಯುತ್ತಾಳೆ. ಇಷ್ಟು ದಿನ ಅವಕಾಶ ವಂಚಿತಳಾಗಿದದ ಸುಬ್ಬಮ್ಮ ಅವಕಾಶ ಸಿಕ್ಕಿದ ತಕ್ಷಣ ಅವಳಲ್ಲಿ ಸುಪ್ತವಾಗಿದ್ದ ಅಹಂಕಾರ, ಛಲ, ದರ್ಪ, ಸ್ವಾರ್ಥಪರತೆ, ದುರಭಿಮಾನ ಮುಂತಾದವುಗಳು ಅವಳಲ್ಲಿ ಭಯಂಕರವಾಗಿ ಹೆಡೆಯೆತ್ತಿ ನಿಂತವು. ಸುಬ್ಬಮ್ಮನಲ್ಲಿ ಅಧಿಕಾರದ ಮದ ವಿಜೃಂಭಿಸುತ್ತದೆ. ಅಧಿಕಾರದಿಂದ ವಂಚಿತಳಾಗಿದ್ದ ಸುಬ್ಬಮ್ಮ ತನ್ನ ಕೈಗೆ ಅಧಿಕಾರ ಸಿಕ್ಕಿದ್ದುದರಿಂದ ದಲಿತರು, ಕೆಳವರ್ಗದವರ, ದುಡಿಮೆಗಾರರ ಮೇಲೆ ತನ್ನ ಅಧಿಕಾರವನ್ನು ಚಲಾಯಿಸುತ್ತಾಳೆ ಮತ್ತು ಚಂದ್ರಯ್ಯಗೌಡರ ಹೆಂಡತಿ ಚಂದ್ರಯ್ಯಗೌಡರೇ ಆಗುವಲ್ಲಿ ನೆಲ್ಲಹಳ್ಳಿ ಸುಬ್ಬಿ ಕಾನೂರು ಹೆಗ್ಗಡಿತಿಯಾಗುವಲ್ಲಿ ಸುಬ್ಬಮ್ಮನದು ಯಶಸ್ವಿಯ ಕಥೆಯೇ ಆಗುತ್ತದೆ.

"ಚಂದ್ರಯ್ಯಗೌಡರು ಬಡದನಿಯಿಂದ ಯಾರದು? ಎಂದರು. ಆ ದನಿಯನ್ನು ಕೇಳಿದೊಡನೆ ಸುಬ್ಬಮ್ಮಗೆ ಆಶ್ಚರ್ಯವಾಯಿತು; ಧೈರ್ಯವಾಯಿತು. ಒಂದು ತೆರನಾದ ಕನಿಕರವೂ ಉಂಟಾಯಿತು. ಅಷ್ಟು ದೀನತೆ, ಅಷ್ಟು ನೋವು ಅಷ್ಟು ಪ್ರಾರ್ಥನೆ, ಅಷ್ಟೊಂದು ಪಶ್ಚಾತ್ತಾಪವಿತ್ತು. ಆ ದನಿಯಲ್ಲಿ ಸುಪರಿಚಿತವಾಗಿದ್ದ ದರ್ಪವಾಗಲಿ ಕ್ರೌರ್ಯವಾಗಲಿ ಒಂದಿನಿತೂ ಇರಲಿಲ್ಲ".[9] ಈ ಹಿನ್ನೆಲೆಯಲ್ಲಿ ಚಂದ್ರಯ್ಯಗೌಡರಲ್ಲಿ ಮನೆಮಾಡಿಕೊಂಡಿದ್ದಂತಹ ದರ್ಪ, ದೌರ್ಜನ್ಯ, ಒರಟುತನವಿತ್ತು. ಶೋಷಣೆಯನ್ನು ಮಾಡುವಂತಹ ಪ್ರಜ್ಞೆಯಿತ್ತು ಮತ್ತು ದೊಡ್ಡ ಮನೆತನದವನು ಎನ್ನುವುದರ ಜೊತೆಗೆ ಶ್ರೀಮಂತಿಕೆಯ ಮದವೂ ತಾಂಡವವಾಡುತ್ತಿರುವ ಸಂದರ್ಭದಲ್ಲಿ ಹೇಗೆ ಕಾಲನಂತರದಲ್ಲಿ ಅನಾವರಣಗೊಳ್ಳುತ್ತಾ ಹೋಗುತ್ತವೆ ಎಂಬುದನ್ನು ಈ ಮೇಲಿನ ಅಂಶದಲ್ಲಿ ತಿಳಿಯಬಹುದು. ಪುರುಷ ಪ್ರಧಾನ ಕುಟುಂಬದಲ್ಲಿ ಹೆಣ್ಣು ಯಾವಾಗಲೂ

ಅಧೀನವಾಗಿರಬೇಕೆಂಬುದನ್ನು ಹಂತಹಂತವಾಗಿ ವಿವರಿಸುತ್ತಾ ಬಂದಿದೆ. ಚಂದ್ರಯ್ಯಗೌಡರು ಎಷ್ಟು ಕ್ರೂರವಾಗಿದ್ದರೂ ಕಾಲವೆಂಬುದು ಬದಲಾವಣೆಯನ್ನು ಮಾಡುತ್ತದೆ. ಸಿರಿವಂತಿಕೆಯ ಮದದಿಂದ ಕೂಡಿದ್ದಂತಹ ಚಂದ್ರಯ್ಯಗೌಡರು ಬಂಧುಮಿತ್ರರೆಲ್ಲ ಬೇಡವೆಂದರೂ ಕೇಳದೆ ಇಳಿವಯಸ್ಸಿನಲ್ಲಿ ಎಳೆವಯಸಿನ ಹೆಣ್ಣನ್ನು ಮದುವೆಯಾದರೂ ಅವರು ಕುಸಂಸ್ಕೃತ ಹೆಣ್ಣನ್ನು ಮದುವೆಯಾದವನೆಂದು ಒಳಗೊಳಗೇ ಕಳವಳ ವ್ಯಕ್ತಪಡಿಸುತ್ತಿದ್ದರು ಅವರು ಎಷ್ಟೇ ಒರಟು ಸ್ವಭಾವದವರಾದರೂ ಸೌಜನ್ಯಪ್ರಿಯತೆಯಿದೆ. ತಮಗಿಂತ ಶ್ರೇಷ್ಠರಾದವರನ್ನು ಕಂಡಾಗ ಭಯ ಮತ್ತು ಗೌರವಗಳು ಅವರಲ್ಲಿ ಮೂಡುತ್ತದೆ. ಅವರು ಈ ಕೆಟ್ಟ ಹಠಕ್ಕೆ ಕಟ್ಟುಬಿದ್ದು ಮಾಡಬಾರದನ್ನೆಲ್ಲ ಮಾಡುತ್ತಾರೆ. ಅವರಿಗೆ ಹೆಂಡತಿಯ ಬಗೆಗೆ ಸಂಶಯವೂ ಮೂಡಿ ಮುಂದೆ ಶಕ್ತಿ ಕುಗ್ಗಿ ಕೃಶವಾಗಿ ಹಾಸಿಗೆ ಹಿಡಿದ ಬಳಿಕ ಹೆಂಡತಿಯನ್ನು ಪುನಃ ಬರಮಾಡಿಕೊಂಡು ಅವಳ ಬಗೆಗೆ ಪ್ರೀತಿ ತೋರಿಸುತ್ತಾರೆ, ಅವಳ ಶುಶ್ರೂಷೆಗೆ ಮನಸೋತು ಆನಂದದಿಂದ ಕಣ್ಣೀರು ಮಿಡಿಯುತ್ತಾರೆ. ಅವಳೊಬ್ಬಳು ದೇವತೆಯೆಂದು ಭಾವಿಸಿ, ತಮ್ಮ ಹಿಂದಿನ ನಡತೆಯ ಬಗೆಗೆ ಪಶ್ಚಾತ್ತಾಪ ಪಡುತ್ತಾರೆ. ಎಷ್ಟು ಆರೋಗ್ಯ ಹದಗೆಟ್ಟಿದ್ದರೂ ಸಹ ಹೆಂಡ ಕುಡಿಯುವುದನ್ನು ಬಿಡುವುದಿಲ್ಲ ಮತ್ತು ಚಂದ್ರಯ್ಯಗೌಡರು ಹಾಸಿಗೆ ಹಿಡಿದಿರುವ ಸುದ್ಧಿಯನ್ನು ಕೇಳಿದ ಹೂವಯ್ಯ ಅವರ ಆರೋಗ್ಯದ ವಿಷಯದ ಬಗ್ಗೆ ಕೇಳಲು ಬಂದಾಗ ಮೂಕವಾಣಿಯಲ್ಲಿ ಕ್ಷಮೆ ಕೋರುತ್ತಾರೆ. ತನ್ನ ದಬ್ಬಾಳಿಕೆಯ ಶಕ್ತಿಯಿಂದ ಸುತ್ತಮುತ್ತಲಿನ ಸೀಮೆಯನ್ನೆಲ್ಲ ನಡುಗಿಸುತ್ತಿದ್ದ ಈ ಪ್ರಚಂಡ ವ್ಯಕ್ತಿ ಸದ್ದಿಲ್ಲದಂತೆ ಪ್ರಾಣ ಬಿಡುತ್ತಾನೆ. ಈ ವ್ಯಕ್ತಿಯ ವ್ಯಕ್ತಿತ್ವವನ್ನು ಕುವೆಂಪುರವರು ಹೀಗೆ ಚಿತ್ರಿಸುತ್ತಾರೆ. "ಸುಬ್ಬಮ್ಮ ಅವರ ಕಡೆಗೆ ನೋಡದೆ ಕೆಲಸ ಮಾಡುತ್ತಿದ್ದ ಆಳುಗಳ ಕಡೆಗೇ ನೋಡುತ್ತಾ ಆ ಹೆಣ್ಣಿನ ದೆಸೆಯಿಂದಲೇ ನಮ್ಮ ಮನೆಗೆ ಶನಿ ಹಿಡಿದು ಹೋಯ್ತು, ಮನೆ ಪಾಲಾಗಿ ಹಾಳಾಯ್ತು! ಎಂದು ಹನಿ ತುಂಬುತ್ತಿದ್ದ ಕಣ್ಣುಗಳನ್ನು ವಲ್ಲಿಯ ಸೆರಗಿನಿಂದ ಒರೆಸಿಕೊಳ್ಳುತ್ತಾ 'ಇನ್ನು ಏನೇನು ಆಗಬೇಕು ಇದೆಯಾ ಮನಸ್ಸಿನಲ್ಲಿ!' ಎಂದು ಸುಮ್ಮನಾದಳು".[10] ಕಾನೂರಿಗೆ ದೊಡ್ಡ ಕುಟುಂಬದ ಯಜಮಾನರಾಗಿದ್ದಂತಹ ಚಂದ್ರಯ್ಯಗೌಡರು ಸತ್ತ ನಂತರ ಎಲ್ಲೆಲ್ಲಿ ವ್ಯವಹಾರಗಳನ್ನು ಸುಬ್ಬಮ್ಮ ವಹಿಸಿಕೊಳ್ಳುತ್ತಾಳೆ. ಚಂದ್ರಯ್ಯಗೌಡರು ಬದುಕಿದಂತಹ ಸಂದರ್ಭದಲ್ಲಿ ಅವಳ ದರ್ಪ-ದೌರ್ಜನ್ಯ ಮತ್ತು ಅಧಿಕಾರವು ಅವಿತಿಟ್ಟುಕೊಂಡಿದ್ದು ಅವರು ಸತ್ತ ನಂತರ ಕಡೆಯವರೆಗೂ ಆವರಿಸುತ್ತಾ ಬರುತ್ತದೆ. ಈ ಕಾದಂಬರಿಯಲ್ಲಿ ಬರುವಂತಹ ಸ್ತ್ರೀಯರು ಅನ್ಯಾಯದ ವ್ಯವಸ್ಥೆಯನ್ನು ಎದುರಿಸುವುದು ಮತ್ತು ವಿರೋಧಿಸುವುದನ್ನು ಕಾಣಬಹುದು. ಅಂದರೆ ಒಟ್ಟಿನಲ್ಲಿ ಸುಬ್ಬಮ್ಮ ದ್ವೇಷಿಸುತ್ತಿರುವುದು ಸೀತೆಯನ್ನು ಈ ಎಲ್ಲಾ ದುರಂತಕ್ಕೆ ಮೂಲ ಕಾರಣ ವೆಂಕಪ್ಪಯ್ಯ ಜೋಯಿಸರು. ಇವರು ತಮ್ಮ ಸ್ವಾರ್ಥಕ್ಕಾಗಿ ಚಂದ್ರಯ್ಯ ಗೌಡರನ್ನು ತನ್ನವರನ್ನಾಗಿ

ಮಾಡಿಕೊಂಡು ಜೋಯಿಸರು ಎಲ್ಲರ ಮೇಲೂ ಬೌದ್ಧಿಕ ಅಧಿಕಾರವನ್ನು ಚಲಾಯಿಸುತ್ತಾರೆ. ಜೋಯಿಸರು ಮಾಡುವಂತಹ ಎಲ್ಲಾ ರೀತಿಯ ಅನಾಚಾರಗಳನ್ನು ಹೂವಯ್ಯ ಬಯಲಿಗೆಳೆಯುತ್ತಾನೆ. ಅವಕಾಶಗಳಿಗೆ ಹೊಂಚು ಹಾಕುತ್ತಿದ್ದಂತಹ ಜೋಯಿಸರು ಹೂವಯ್ಯನಿಗೂ ಮತ್ತು ಸೀತೆಗೂ ಸರಿಯಾಗಿ ಇದ್ದಂತಹ ಜಾತಕವನ್ನು ಒಂದು ಅತಂತ್ರ ಸ್ಥಿತಿಗೆ ತಂದು ಅದರ ಮೂಲಕ ಹೂವಯ್ಯನ ಮೇಲಿನ ಸೇಡನ್ನು ತೀರಿಸಿಕೊಳ್ಳುತ್ತಾನೆ. ಇದಕ್ಕೆಲ್ಲ ಮೊದಲೇ ಸೀತೆ ಮತ್ತು ಹೂವಯ್ಯ ಪರಸ್ಪರ ಪ್ರೀತಿ ಮಾಡುತ್ತಿದ್ದರು. ಸೀತೆ ಹೆಚ್ಚು ಓದಿದವಳಲ್ಲ, ಆದರೂ ತಾನು ಒಲಿದವನನ್ನಲ್ಲದೆ ಬೇರೆ ಯಾರನ್ನು ಮದುವೆಗೆ ಒಪ್ಪುವುದಿಲ್ಲ. ಅವಳು ಎಷ್ಟು ಯಾತನೆಗಳು ಬಂದರೂ ಸಹಿಸಿಕೊಳ್ಳುವುದರಲ್ಲಿ ಸೀತೆ ಆದರ್ಶ ಯುವತಿಯಾಗಿ ಈ ಕಾದಂಬರಿಯಲ್ಲಿ ಕಾಣಿಸಿಕೊಳ್ಳುತ್ತಾಳೆ. ಸೀತೆಯೂ ಹೂವಯ್ಯನ ಪ್ರಭಾವದಿಂದ ಆಕೆಯಲ್ಲಿದ್ದ ಉತ್ತಮ ಆಲೋಚನೆಗಳು ಆಕೆಯ ಮನೋರಂಗದಲ್ಲಿ ಮೊಳೆತು ನಳನಳಿಸಲು ಪ್ರಾರಂಭವಾಗಿದ್ದವು. ಹೂವಯ್ಯ ಎಷ್ಟು ಹೊಸ ವಿಷಯಗಳನ್ನು ತಿಳಿದುಕೊಂಡಿದ್ದನೋ ಅಷ್ಟೇ ವಿಷಯಗಳನ್ನು ಸೀತೆಯೂ ತಿಳಿದುಕೊಂಡಿದ್ದಳು. ಇಲ್ಲಿ ಮುಖ್ಯವಾಗಿ ಸೀತೆಯಿಂದ ಯಾವುದೇ ಕಾರಣಕ್ಕೂ ಮನೆಪಾಲಾಗುವುದಕ್ಕೆ ಕಾರಣವಾಗುವುದಿಲ್ಲ. ಇಲ್ಲಿ ಚಂದ್ರೇಗೌಡರ ಮನಸ್ಸಿನಲ್ಲಿರುವ ನೀಚ ಬುದ್ಧಿಯಿಂದ ಮನೆಯು ಇಬ್ಭಾಗವಾಗುವುದನ್ನು ಕಾಣಬಹುದು. "ಅಂತೂ ಅವರಿಬ್ಬರಿಗೂ ಆಗಾಡಿ ಮತ್ತು ಎತ್ತುಗಳನ್ನು ನೋಡಿ, ಮನೆಯವರನ್ನೇ ಕಂಡಂತಾಗಿ, ಸಂತೋಷಗೊಂಡರು. ಅವುಗಳನ್ನು ನೋಡಿದ ಅವರ ಮನಸ್ಸಿನಿಂದ ಮೈಸೂರಿನ ಚಾಮುಂಡಿಬೆಟ್ಟ, ಅರಮನೆ, ಕುಕ್ಕನಹಳ್ಳಿ ಕೆರೆ, ಅಠಾರಕಛೇರಿ, ಹೈಸ್ಕೂಲು, ಕಾಲೇಜು, ಜನಸಂದಣಿ, ಎಲ್ಲವೂ ಮಾಯವಾಗಿ ಅದಕ್ಕೆ ಬದಲಾಗಿ ತಮ್ಮ ಮನೆ, ಕಾಡು, ಕೊಟ್ಟಿಗೆ, ಗದ್ದೆ, ದನಕರು, ತೋಟ, ಕೂಲಿಯಾಳುಗಳು ಮೊದಲಾದವು ಅಲ್ಲದೆ ತಮ್ಮನ್ನು ಮನೆಗೊಯ್ಯುವ ಪ್ರಾಣಿಗಳ ವಿಚಾರದಲ್ಲಿ ಅವರಿಗೆ ಪ್ರೀತಿಯಿಲ್ಲದೆ ಬೇರೆ ಯಾವ ಭಾವಕ್ಕೂ ಸ್ಥಳವಿರಲಿಲ್ಲ".[11] "ಹೂವಯ್ಯ ಮತ್ತು ರಾಮಯ್ಯ ಇಬ್ಬರು ವಿದ್ಯಾಭ್ಯಾಸವನ್ನು ಪಡೆಯಲು ನಗರಕ್ಕೆ ಹೋಗಿದ್ದು ರಜಾದಿನಗಳನ್ನು ಕಳೆಯಲು ತಮ್ಮ ಹಳ್ಳಿಗೆ ಹಿಂದಿರುಗುತ್ತಾರೆ. ಹೂವಯ್ಯನ ಮನೋಭಾವಕ್ಕೆ ಪ್ರಾತಿನಿಧಿಕ ಮಹತ್ವವಿದೆ. ಹಳ್ಳಿಯಿಂದ ಪಟ್ಟಣಕ್ಕೆ ಓದಿಗಾಗಿ ಬಂದು, ಪಟ್ಟಣದಲ್ಲಿ ಕೆಲವು ವರ್ಷಗಳಿದ್ದು, ಹಳ್ಳಿಯ ಜೀವನದ ಬಗ್ಗೆ ಕೆಲವು ನಿರ್ದಿಷ್ಟ ಅಭಿಪ್ರಾಯಗಳನ್ನು ಬೆಳೆಸಿಕೊಂಡಿದ್ದ ಹೂವಯ್ಯ ತನ್ನ ಹಳ್ಳಿಯಲ್ಲಿ ಅನೇಕ ಬದಲಾವಣೆಗಳನ್ನು ತರುವುದರಲ್ಲಿ ಯಶಸ್ವಿಯಾಗುತ್ತಾನೆ. ತಮ್ಮ ಹಳ್ಳಿಯಲ್ಲಿ ನಡೆಯುತ್ತಿದ್ದಂತಹ ಮೌಢ್ಯದ ಆಚರಣೆಗಳ ವಿರುದ್ಧ ಮೊದಲು ದಂಗೆ ಎದ್ದು ನಂತರ ಜಾತಿ ವ್ಯವಸ್ಥೆಯನ್ನು ಕೇಂದ್ರವಾಗಿಟ್ಟುಕೊಂಡು ಬ್ರಾಹ್ಮಣಶಾಹಿ ವರ್ಗವು ಶೂದ್ರರನ್ನು ಮತ್ತು ಕೆಳಜಾತಿಗಳನ್ನು ಹೇಗೆ

ಶೋಷಣೆ ಮಾಡುತ್ತಿದ್ದರು ಎಂಬುದನ್ನು ಬಯಲಿಗೆಳೆಯುತ್ತಾನೆ. ಜೊತೆಗೆ ಸ್ತ್ರೀಯರ ಮೇಲೆ ನಡೆಯುತ್ತಿದ್ದಂತಹ ದೌರ್ಜನ್ಯದ ಬಗ್ಗೆ ವಿಮರ್ಶಿಸುತ್ತಾನೆ. ಹೂವಯ್ಯನ ಪ್ರಭಾವದಿಂದ ಅನಕ್ಷರಸ್ಥಳಾಗಿದ್ದಂತಹ ಸೀತೆಯು ಅಕ್ಷರ ಜ್ಞಾನವನ್ನು ಪಡೆದುಕೊಳ್ಳುತ್ತಾಳೆ. ಚಂದ್ರಯ್ಯಗೌಡರು ಹೂವಯ್ಯನಿಗೆ ಪಾಲು ಕೊಡುವುದರಲ್ಲಿ ವೈಮನಸ್ಯಗಳು ಉಂಟಾಗುತ್ತವೆ. ಈ ವ್ಯಕ್ತಿತ್ವದಲ್ಲಿ ಭೂಮಿಯ ಆಸೆ, ಧರ್ಮದ ಆಸೆ, ಕುಟುಂಬದ ಆಸೆ ಯಾವುದು ಮುಖ್ಯವಾಗುವುದಿಲ್ಲ. ಇಲ್ಲಿ ಚಂದ್ರಯ್ಯಗೌಡರ ಉದ್ದೇಶ ನನ್ನ ಸ್ವಯಾರ್ಜಿತ ಆಸ್ತಿಯಲ್ಲಿ ಭಾಗ ಕೊಡುವುದಿಲ್ಲ ಪಿತ್ರಾರ್ಜಿತ ಆಸ್ತಿಯಲ್ಲಿ ಭಾಗ ಕೊಡುತ್ತೇನೆ ಎಂದಾಗ ಹೂವಯ್ಯ ಅದಕ್ಕೆ ತಿರುಗೇಟು ಹಾಕುತ್ತಾನೆ. ಇಲ್ಲಿ ಸ್ವಯಾರ್ಜಿತ ಮತ್ತು ಪಿತ್ರಾರ್ಜಿತ ಎಂದು ಆಸ್ತಿಯನ್ನು ಭಾಗಮಾಡುವುದು ನ್ಯಾಯವಲ್ಲ ಯಜಮಾನರು ಏನು ಸಂಪಾದನೆ ಮಾಡಿದರು ಅದು ಮನೆಯ ಸಂಪತ್ತಿಗೆ ಸೇರುತ್ತದೆ. ನೀವು ಯಜಮಾನಿಕೆ ನಡೆಸುವಂತಹ ಸಂದರ್ಭದಲ್ಲಿ ನಷ್ಟ ಅನುಭವಿಸಿದರೆ ಆ ನಷ್ಟವನ್ನು ಎಲ್ಲಾರ ಮೇಲೆಯೂ ಹಾಕುತ್ತೀರಿ ವಿನಹ ನೀವೊಬ್ಬರೇ ಇಟ್ಟುಕೊಳ್ಳುವುದಿಲ್ಲ. ಈ ರೀತಿಯಾಗಿ ಚಂದ್ರೇಗೌಡರಲ್ಲಿ ಸ್ವಾರ್ಥವು ಕಂಡು ಬಂದಾಗ ಅವರ ವಿರುದ್ಧ ಪ್ರತಿಭಟಿಸುತ್ತಾನೆ" ಕಾನೂರಿನಲ್ಲಿ ನಡೆಯುತ್ತಿದ್ದ 'ಕಷ್ಟ ಸಂಕಟಗಳಿಗೊ, ಅನಾಹುತಗಳಿಗೊ, ಜಗಳಗಳಿಗೊ, ರೋಗರುಜುನಗಳಿಗೊ ಎಲ್ಲಕ್ಕೂ ಆ ಹೋತವೇ ಮುಖ್ಯಕಾರಣವೆಂಬ ಭಾವವೂ ಸಾಮಾನ್ಯವಾಯಿತು. ಮನೆಪಾಲಾದುದು, ವಾಸು ಮೂರ್ಛೆ ಹೋದದು, ಚಂದ್ರಯ್ಯಗೌಡರಿಗೆ ಧಾತು ಹಾರಿದುದು, ಅವರು ಸುಬ್ಬಮ್ಮನಿಗೆ ಹೊಡೆಯುತ್ತಿದ್ದುದು, ಬಯ್ಯುತ್ತಿದ್ದುದು ಎಲ್ಲಕ್ಕೂ 'ಅನಿಷ್ಟಕ್ಕೆ ಶನಿಗುರು' ಎಂಬಂತೆ, ಹೋತವೇ ಗುರಿಯಾಯಿತು' ಈ ಹಿನ್ನೆಲೆಯಲ್ಲಿ ಮಲೆನಾಡಿನಲ್ಲಿ ಭಯಂಕರವಾಗಿ ಕಾಡುತ್ತಿರುವ ಮೂಢನಂಬಿಕೆಗಳಲ್ಲಿ ದೆವ್ವದ ನಂಬಿಕೆಯು ಒಂದು. ಅದು ದೆವ್ವದ ಸ್ಥಾನದಿಂದ ಭೂತರಾಯನ ಪಟ್ಟಕ್ಕೆ ಏರಿದೆ, ಈ ನಂಬಿಕೆಯನ್ನು ಬ್ರಾಹ್ಮಣರೂ, ಭೂ ಮಾಲೀಕರು ಅಚಲವಾಗಿ ನಂಬುದರ ಜೊತೆಗೆ ಅದನ್ನು ಒಂದು ಅಸ್ತ್ರವಾಗಿ ಬಳಸಿಕೊಂಡು ಕೊನೆಗೆ ಎಲ್ಲಾ ತಪ್ಪುಗಳನ್ನು ಮಾಡಿ ಭೂತರಾಯನಿಗೆ ಹರಕೆ ಕಟ್ಟುವುದು ಮಲೆನಾಡಿನಲ್ಲಿ ಮಾಮೂಲಾಗಿದೆ. ಪ್ರಕೃತಿಯ ಮಧ್ಯೆ ಮತ್ತು ವೈಚಾರಿಕತೆಯಾಚೆ ಬೆಳೆದ ಮಲೆನಾಡ ಮುಗ್ಧ ಜನರು ತಮ್ಮ ದಿನಚರಿಯಲ್ಲಿ ಯಾವ ಘಟನೆ ನಡೆದರೂ ಭೂತರಾಯನನ್ನು ಮರೆತು ಮಾಡುತ್ತಿರಲಿಲ್ಲ. ನಿಸರ್ಗದ ವೈಪರೀತ್ಯದಿಂದ ಯಾವುದೇ ರೀತಿಯಲ್ಲಿ ಅನಾರೋಗ್ಯಕ್ಕೆ ತುತ್ತಾದರೆ ಚಿಕಿತ್ಸೆ ಕೊಡಿಸುವ ಬದಲು ಮೂಢನಂಬಿಕೆಗಳ ಮೂಲಕ ಮದ್ದು ನೀಡುವ ಸಂದರ್ಭವನ್ನು ಈ ಪ್ರದೇಶಗಳಲ್ಲಿ ಕಾಣಬಹುದು. ಹಾಗೆಯೇ ಸೀತೆ ತನ್ನ ಪ್ರೀತಿಗೆ ಧಕ್ಕೆ ಉಂಟಾಗಿ ಮಾನಸಿಕವಾಗಿ ಅಸ್ವಸ್ಥಗೊಂಡರೆ ಅದಕ್ಕೆ ಹೂವಯ್ಯನೇ ಮಾಟ ಮಾಡಿಸಿ ಆಗಿರುವಂತಹದು ಎಂದು ಜನ ತೀರ್ಮಾನಕ್ಕೆ ಬಂದು

ಹೂವಯ್ಯನ ಸಾನ್ನಿಧ್ಯದಲ್ಲಿ ಗುಣಮುಖ ಹೊಂದಿದ್ದಂತಹ ಸೀತೆ ಹೂವಯ್ಯನ ಮಾಟಶಕ್ತಿಯಿಂದ ಗುಣವಾಗಿರುವಂತೆ ಅವರಿಗೆ ಕಾಣುತ್ತದೆ. ಮಲೆನಾಡಿನ ಪ್ರಕೃತಿ ಸೌಂದರ್ಯದ ಗರ್ಭದಲ್ಲಿ ತುಂಬಿಕೊಂಡಿರುವ ಅಜ್ಞಾನ ಆಳವಾಗಿ ಭೂತರಾಯನ ಮೂಲಕ ಬೆಳೆಯುತ್ತದೆ. ಭೂತರಾಯನ ಭಯ ಕೇವಲ ಮಲೆನಾಡಿಗರಷ್ಟೇ ಆವರಿಸಿಕೊಂಡಿರಲಿಲ್ಲ. ಅಲ್ಲೆ ಕೆಲಸ ಮಾಡುವಂತಹ ಸೇರೆಗಾರರು ಮತ್ತು ಕೆಲಸದಾಳುಗಳು ಅತ್ಯಂತ ಭಯ ಮತ್ತು ಭಕ್ತಿಯಿಂದ ಭೂತರಾಯನ ಮೇಲೆ ನಂಬಿಕೆ ಇಟ್ಟಿದ್ದರು. ದುಡಿಯುವ ವರ್ಗದಿಂದ ಭೂಮಾಲೀಕರು 'ಭೂತ'ದ ನೆಲದಿಂದ ಹೇಗೆ ದುಡಿಸಿಕೊಳ್ಳುತ್ತಿದ್ದರು ಎಂಬುದನ್ನು ಕಾನೂರು ಹೆಗ್ಗಡಿತಿ ಕಾದಂಬರಿಯಲ್ಲಿ ದಟ್ಟವಾಗಿ ಕಾಣಬಹುದು. ಅದೇ ವ್ಯವಸ್ಥೆಯಲ್ಲಿ ಶೂದ್ರರೂ ಮತ್ತು ಕೆಳಜಾತಿಗಳು ಈ ಮೂಢನಂಬಿಕೆಯಲ್ಲಿಯೇ ಮುಳುಗಿ ಏಳುತ್ತಾರೆ. ನಿಂಗ ಅವಿತಿಟ್ಟು ವಸ್ತುಗಳನ್ನು ಕದ್ದವರನ್ನು ಕಂಡು ಹಿಡಿಯಲು ತೆಂಗಿನ ಕಾಯನ್ನು ಮಂತ್ರಿಸಿ ಎಲ್ಲಾರ ಬಳಿ ಬಂದು ಮುಟ್ಟಿಸಲು ಬಂದಂತಹ ಸಂದರ್ಭದಲ್ಲಿ ಅದರ ಬಗ್ಗೆ ಅಗಾಧವಾದ ನಂಬಿಕೆ ಇಟ್ಟುಕೊಂಡಿದ್ದಂತಹ ಗಂಗ ಹೆದರಿ ಕಿರುಚಿಕೊಂಡು ತಾಯಿಯ ಕೈಮೇಲೆ ಪ್ರಜ್ಞೆ ತಪ್ಪುತ್ತಾನೆ. ಈ ಆಘಾತದಿಂದ ಚೇತರಿಸಿಕೊಳ್ಳಲ್ಲಾಗದೆ ಕೊನೆಗೆ ಪ್ರಾಣ ಬಿಡುತ್ತಾನೆ. ಹೂವಯ್ಯ ಹೊಸ ಜಗತ್ತಿನಿಂದ ಕಲಿತು ಬಂದು ಇವುಗಳೆಲ್ಲವನ್ನು ವಿರೋಧಿಸುತ್ತಾನೆ. ಮೂಢನಂಬಿಕೆ ಮತ್ತು ಹಲವು ಧಾರ್ಮಿಕ ಸಮಸ್ಯೆಗಳನ್ನು ಸುಧಾರಣೆಯ ಮೂಲಕ ಮೂಢನಂಬಿಕೆಯ ಕೇಂದ್ರ ಜಗತ್ತನ್ನು ಪಲ್ಲಟಗೊಳಿಸುವುದರಲ್ಲಿ ಹೂವಯ್ಯ ಯಶಸ್ವಿಯಾಗುತ್ತಾನೆ. ಜೊತಗೆ ಮಲೆನಾಡಿಗರ ಬದುಕಿನಲ್ಲಿ ಬಡತನ ಮತ್ತು ಮೌಢ್ಯವು ಭಯಂಕರವಾಗಿ ತಳವೂರಿತು ಹಾಗೆಯೇ ಕಾನೂರಿನ ಹರಕೆಯ ಪ್ರಸಂಗದಲ್ಲಿ ಬಲಿಯಾಗಬೇಕಾಗಿದ್ದ ಹೋತ ಹೂವಯ್ಯನ ದೆಸೆಯಿಂದ ಬಲಿಯಾಗದೆ ತಪ್ಪಿಸಿಕೊಂಡು ಬಲಿಂದ್ರನಾಗಿ ದೆಯ್ಯದ ಭಯ ಮಲೆನಾಡಿಗರಿಗೆ ಕಾಡುವ ಸಂಕೇತವಾಗಿದೆ ಮತ್ತು ಕೃಷ್ಣಪ್ಪನ ದೆವ್ವ ಸೀತೆಯ ಮೇಲೆ ಬರುವುದಕ್ಕೆ ಹೂವಯ್ಯನೆ ಕಾರಣನಾಗಿದ್ದಾನೆ. ಇವನಿಗೆ ಮಾತ್ರ ವಿದ್ಯೆ ಗೊತ್ತಿರುವುದರಿಂದ ಭೂತ ಹೋತದಲ್ಲಿ ಸೇರಿಕೊಂಡು ಅವನ ವಶವಾಗಿ ಕೆಲಸ ಮಾಡುತ್ತಿದೆ. ಜೋಯಿಸರು ಹೇಳಿದ ಮಾತಿಗೆ ಜನರ ಮನಸ್ಸಿನಲ್ಲಿ ಇನ್ನಷ್ಟು ದಟ್ಟವಾಗಿ ಭೂತದ ನಂಬಿಕೆ ದಟ್ಟವಾಗಿ ಬೆಳೆಯುತ್ತದೆ. ರಾಮಯ್ಯ ಸೇರಗಾರರ ಮುಖಾಂತರ ಹೋತವನ್ನು ಗುಂಡಿನಿಂದ ಕೊಂದು ಅದರ ರಕ್ತವನ್ನು ಸೀತೆಯ ಹಣೆಗೆ ಇಡುವುದರಿಂದ ಅವಳಲ್ಲಿರುವ ಶನಿಯೂ ಬಿಟ್ಟು ಹೋಗುತ್ತದೆಂಬ ನಂಬಿಕೆ ನಾಗಮ್ಮ ತನ್ನ ಕಾಯಿಲೆಗೆ ಮಗ ಮನೆಯಲ್ಲಿ ಬಲಿಕೊಡದೆ ಇಟ್ಟುಕೊಂಡಿರುವ ಹೋತವೇ ಕಾರಣ. ಒಟ್ಟಾರೆಯಾಗಿ ಸಮಾಜದಲ್ಲಿ ಮನೆಮಾಡಿಕೊಂಡಿರುವಂತಹ ಶೋಷಣೆ ಕಂದಚಾರ ಮತ್ತು ಮೌಢ್ಯದ ಆಳ್ವಿಕೆಯನ್ನು

ಕುವೆಂಪುರವರು ಕಟುವಾಗಿ ಅನಾವರಣಗೊಳಿಸುತ್ತಾರೆ. ಮಾತ್ರವಲ್ಲದೆ ಸಾಮಾನ್ಯ ಜನತೆಯಲ್ಲಿ ಮೌಢ್ಯವನ್ನೇ ಪೋಷಿಸಿ ದೇವರು ಧರ್ಮಗಳ ಹೆಸರಿನಲ್ಲಿ ಅವರನ್ನೇ ಶೋಷಿಸುವ ಪುರೋಹಿತ ಶಾಹಿಯ ಬಗೆಗೆ ಕುವೆಂಪುರವರಿಗೆ ಸಾತ್ವಿಕ ಕ್ರೋಧವಿದೆ. ಇದು ಯಾವುದೇ ಒಬ್ಬ ವ್ಯಕ್ತಿಯನ್ನು ಅಥವಾ ವರ್ಗವನ್ನು ಕುರಿತದ್ದಲ್ಲ ಒಂದು ದುಷ್ಟ ವ್ಯವಸ್ಥೆಯ ವಿರುದ್ಧ ತಾಳಿದ ನಿಲುವು. "ಕುವೆಂಪು ಅವರ ಎರಡೂ ಕಾದಂಬರಿಗಳಲ್ಲಿ ಭೀಕರವಾದ ಶಿಕ್ಷೆಯ ಸ್ವರೂಪ ವ್ಯಕ್ತಗೊಂಡಿದೆ. ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿನ 'ಹೊನ್ನಾಳಿ ಹೊಡ್ತದ' ಶಿಕ್ಷೆ ಅನಾಗರಿಕತೆಯ ಚಿತ್ರಣವನ್ನು ನೀಡಿದರೂ ಕುವೆಂಪು ಪ್ರತಿನಿಧಿಸುವ ಜನಾಂಗವೇ ಶಿಕ್ಷೆಗೆ ಒಳಗಾಗುತ್ತದೆ. ಕಾನೂರು ಹೆಗ್ಗಡಿತಿಯಲ್ಲಿ ಚಂದ್ರಯ್ಯಗೌಡರು ಸುಬ್ಬಮ್ಮ ಮತ್ತಿತರಿಗೆ ನೀಡುವ ಶಿಕ್ಷೆ ಕೂಡ ಹೀಗೆಯೇ ಇದೆ. ವರ್ಗ ಪ್ರತಿಪಾದನೆಗಾಗಿ ಈ ಶಿಕ್ಷೆಯ ಸ್ವರೂಪವನ್ನು ಚಿತ್ರಿಸಿದರೂ ಕಾದಂಬರಿಕಾರನ ಉದ್ದೇಶ ಇದೇ ಪ್ರಧಾನವಾದಲ್ಲ ಹಾಗೆ ನೋಡಿದರೆ ಕೃತಿಕಾರ ಎರಡೂ ಕಾದಂಬರಿಗಳಲ್ಲಿ ಎಕ್ಸ್‌ಪೋಸ್ ಮಾಡಿದ್ದು ತನ್ನ ಜನರನ್ನೆ 1935ರ ವೇಳೆಗೆ ತನ್ನ ಜನಾಂಗದ ಎಲ್ಲಾ ಕ್ರೂರತೆ, ಫ್ಯೂಡಲ್ ಗುಣ, ಸಣ್ಣತನ, ಹಾದರ, ವಂಚನೆಗಳನ್ನು ಕಾನೂರು ಹೆಗ್ಗಡಿತಿಯಲ್ಲಿ ಕುವೆಂಪು ಬೆತ್ತಲಾಗಿ ತೋರಿಸಿದಂತೆ ಮತ್ಯಾವ ಪ್ರಮುಖ ಲೇಖಕನೂ ತನ್ನ ಜನಾಂಗದ ಬಗ್ಗೆ ಮುಕ್ತವಾದ ವಿಮರ್ಶೆಯನ್ನಿಟ್ಟುಕೊಳ್ಳಲು ಸಾಧ್ಯವಾಗಿಲ್ಲ. ಸುಬ್ಬಮ್ಮನ ಹಾದರವನ್ನು ಚಿತ್ರಿಸುವಾಗಲಂತೂ ಈ ಅಂಶ ಸ್ಪಷ್ಟಗೊಳ್ಳುತ್ತದೆ. ಇಂಥ ಹಾದರ ಬೇರಾರೆಲ್ಲೆಲ್ಲಿ ಇದೇ ಎಂಬಂತಲ್ಲ ತನ್ನವರಲ್ಲೇ ಇದೆ ಎಂಬಂತೆ ಚಿತ್ರಿಸುವ ಧೈರ್ಯ ಅಧಿಕವಾಗಿದೆ. ಕುವೆಂಪು ಕಾನೂರು ಹೆಗ್ಗಡಿತಿಯ ಪ್ರಧಾನ ಪಾತ್ರವೊಂದನ್ನು ತಮಗೆ ಸಾಮ್ಯವೆನ್ನುವಷ್ಟು ರೀತಿಯಲ್ಲಿ ಚಿತ್ರಿಸುವುದರಿಂದ ಅಲ್ಲಿನ ಸಾಂಸಾರಿಕ ಚಿತ್ರವೂ ಅವರ ಕುಟುಂಬದ ಹಾಗೂ ಅದರ ಸುತ್ತಲೂ ಹೆಣೆದುಕೊಂಡ ಸಂಸಾರಗಳ ಚಿತ್ರಣವಾಗಿದೆ. ಕಾನೂರು ಹೆಗ್ಗಡಿತಿಗೂ ಹೂವಯ್ಯನಿಗೂ ಜನ ಸಂಬಂಧ ಕಲ್ಪಿಸಿದಾಗ ಹೂವಯ್ಯನ ಮನಸ್ಸು ಆ ಗಳಿಗೆಯಲ್ಲಿ ವರ್ತಿಸಿದ ರೀತಿ ಅನನ್ಯವಾದುದು. ಇಂಥ ಸಂದರ್ಭದಲ್ಲಿ ಕಾದಂಬರಿಕಾರ ತನ್ನ ಕುಟುಂಬಕ್ಕಿಂತ ಅನ್ಯ ಕುಟುಂಬಗಳನ್ನೇ ಹೆಚ್ಚು ಔದಾರ್ಯದಿಂದ ಕಂಡಿದ್ದಾರೆ".[12]

ಸುಬ್ಬಮ್ಮನದು ಕಾದ ಹೆಂಚಿನಂತಹ ಪಾತ್ರ ಸಮೃದ್ಧ ಜೀವ ಶಕ್ತಿಯಿಂದ ಕೂಡಿದ ವ್ಯಕ್ತಿತ್ವ ಬಡತನದ ಬದುಕಿನಿಂದ ಬಂದ ಸುಬ್ಬಮ್ಮನಿಗೆ ಜಮೀನ್ದಾರಿ ಶ್ರೀಮಂತಿಕೆ ಕೆಲಕಾಲ ಬೆರಗಿನಲ್ಲಿರಿಸಿದ್ದು ನಿಜ ಆದರೆ ಸುಬ್ಬಮ್ಮ ಇಡೀ ವ್ಯವಸ್ಥೆಯ ವಿರುದ್ಧ ತಿರುಗಿ ನಿಲ್ಲುತ್ತಾಳೆ. ಲೈಂಗಿಕತೆ ಎಂಬುದು ಸುಬ್ಬಮ್ಮನ ಪಾಲಿಗೆ ಸೃಜನಶೀಲವಾದರೂ ಹೊರಗಿಟ್ಟು ನೋಡುವಂತಹ

ಅಭಿರುಚಿಯಾಗಿರಲಿಲ್ಲ. ಸುಬ್ಬಮ್ಮನ ದುರಂತ ಕಾನೂರಿನ ಊಳಿಗಮಾನ್ಯ ವ್ಯವಸ್ಥೆಯ ದುರಂತವೇ ಹೊರತು ಸುಬ್ಬಮ್ಮ ಒಬ್ಬಳದಲ್ಲ.

ಒಟ್ಟಿನಲ್ಲಿ ಭೂಸುಧಾರಣೆಯ ಹಿನ್ನೆಲೆಯಲ್ಲಿ ಗಂಡು-ಹೆಣ್ಣಿನ ಸಂಬಂಧಗಳಲ್ಲಿ ಉಂಟಾದ ಹೊಸ ಪಲ್ಲಟಗಳು ಸ್ತ್ರೀ ಸಂವೇದನೆ, ಸ್ತ್ರೀಯರನ್ನು ಒಂದು ಶಕ್ತಿ ಸ್ವರೂಪಿಣಿಯಾಗಿ ಚಿತ್ರಿಸುವುದು, ಹೆಣ್ಣಿನ ಅಂತಃಕರಣ ವಿಕಾಸ ಹಾಗೂ ಬದುಕಿನ ವಿಕಾಸ-ಇವೇ ಮೊದಲಾದ ಲಿಂಗ ಸಂಬಂಧಿ ನೆಲೆಗಳನ್ನು ಈ ಕಾದಂಬರಿ ಚಿತ್ರಿಸುವುದನ್ನು ಗಮನಿಸಬಹುದಾಗಿದೆ. ಸ್ತ್ರೀಯರ ಅನನ್ಯತೆಯ ಪ್ರಶ್ನೆಯು ಸ್ತ್ರೀಗೆ ಸಂಬಂಧಿಸಿದಂತೆ ಲೈಂಗಿಕತೆ ಹಾಗೂ ಮದುವೆ ಎಂಬ ಸಾಂಸ್ಥಿಕ ರಚನೆಯ ಮೇಲೆ ಹೇರಲ್ಪಟ್ಟ ನಿಯಂತ್ರಣಗಳನ್ನು ಮೀರಿ ಹೊಸ ಅಸ್ತಿತ್ವವನ್ನು ರೂಪಿಸಿಕೊಳ್ಳುವುದರೊಂದಿಗೆ ಬೆರೆತುಹೋಗುತ್ತದೆ.

ಅಡಿ ಟಿಪ್ಪಣಿಗಳು

1. ಕನ್ನಡ ನಾಟಕ : ಯಜಮಾನ್ಯ ಸಂಕಥನ, ಡಾ.ಟಿ.ವೆಂಕಟೇಶ ಮೂರ್ತಿ, ಅಧ್ಯಯನ ಮಂಡಲ, ಬೆಂಗಳೂರು, 2008, ಪುಟ-190
2. ಅದೇ ಪುಟ-191-195 (ಸಂಗ್ರಹರೂಪ)
3. ಜಾತಿವಿನಾಶ ವೇದಿಕೆ; ಪ್ರಕಟಣೆ, ಸಂಘಟನಾ ಸಮಿತಿ, ಕರ್ನಾಟಕ ಪುಟ-36
4. ಲೋಹಿಯಾ ಮುನ್ನುಡಿ; ಸಂಪಾದಕರು, ಎಂ.ಡಿ.ನಂಜುಂಡಸ್ವಾಮಿ, ಕೆ.ಪಿ.ಪೂರ್ಣಚಂದ್ರ ತೇಜಸ್ವಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2007
5. ಕಾನೂರು ಹೆಗ್ಗಡಿತಿ; ಕುವೆಂಪು, ಉದಯರವಿ ಪ್ರಕಾಶನ, ವಾಣಿವಿಲಾಸಪುರಂ, ಮೈಸೂರು, 2007, ಪುಟ-576
6. ಪ್ರತಿಸಂಸ್ಕೃತಿ; ರಹಮತ್ ತರೀಕೆರೆ, ಅಭಿನವ, 17/18-2, ಮೊದಲನೆಯ ಮುಖ್ಯರಸ್ತೆ, ಮಾರೇನಹಳ್ಳಿ, ವಿಜಯನಗರ, ಬೆಂಗಳೂರು, ಪುಟ-112
7. ಕಾನೂರು ಹೆಗ್ಗಡಿತಿ; ಕುವೆಂಪು, ಪುಟ-161
8. ವಸಾಹತುಶಾಹಿ ಅನುಭವ ಮತ್ತು ಕನ್ನಡ ಕಾದಂಬರಿಗಳು; ಡಾ.ಐ.ಜೆ.ಮ್ಯಾಗೇರಿ, ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು, 2008, ಪುಟ-114
9. ಕಾನೂರು ಹೆಗ್ಗಡಿತಿ; ಕುವೆಂಪು, ಪುಟ-538
10. ಕಾನೂರು ಹೆಗ್ಗಡಿತಿ; ಕುವೆಂಪು, ಪುಟ-554
11. ಕಾನೂರು ಹೆಗ್ಗಡಿತಿ; ಕುವೆಂಪು, ಪುಟ-5
12. ವಸಾಹತುಶಾಹಿ ಅನುಭವ ಮತ್ತು ಕನ್ನಡ ಕಾದಂಬರಿಗಳು; ಡಾ.ಐ.ಜೆ.ಮ್ಯಾಗೇರಿ, ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು, 2008, ಪುಟ-117

ಅಧ್ಯಾಯ-3

ಪುರೋಹಿತಶಾಹಿ ಅನುಭವ : ವರ್ಣದಿಂದ ವರ್ಗದ ಕಡೆಗೆ

ಭಾರತದ ವಸಾಹತುಶಾಹಿ ಸಂದರ್ಭದಲ್ಲಿ, ಊಳಿಗಮಾನ್ಯ ವ್ಯವಸ್ಥೆ, ಪುರುಷಾಧಿಕಾರ, ಜಾತಿ, ಧರ್ಮ, ಜೀತಪದ್ಧತಿ ಮೊದಲಾದ ಸಮಸ್ಯೆಗಳು ದೇಶದಲ್ಲಿ ಸಾಮಾಜಿಕ ಅಸಮಾನತೆಗೆ ಎಡೆಮಾಡಿಕೊಟ್ಟಿದ್ದವು. ಭಾರತದ ಸ್ವಾತಂತ್ರ್ಯ ಚಳುವಳಿಯ ಚಟುಟಿಕೆಗಳು, ರಾಷ್ಟ್ರೀಯವಾದ ಹಾಗೂ ವಸಾಹತುಶಾಹಿ ಆಡಳಿತ ಧೋರಣೆಗಳು ದೇಶದ ರಾಜಕೀಯ, ಸಾಂಸ್ಕೃತಿಕ ಹಾಗೂ ಧಾರ್ಮಿಕ ಬದುಕಿನಲ್ಲಿ ಅಗಾಧ ಪಲ್ಲಟಗಳನ್ನುಂಟು ಮಾಡಿದವು. ಇಂಥ ಪಲ್ಲಟಗಳ ಪರಿಣಾಮ ದೇಶದ ಎಲ್ಲಾ ಭಾಗಗಳ ಮೇಲೂ ಕ್ರಮೇಣ ಉಂಟಾಯಿತು. ಪುರೋಹಿತಶಾಹಿ ವ್ಯವಸ್ಥೆಯಿಂದ ತಳಮಳಕ್ಕೆ ಒಳಗಾಗಿದ್ದ ಜನತೆ ಪಾಶ್ಚಾತ್ಯ ವಿಚಾರಧಾರೆಗೆ ಆಕರ್ಷಿತರಾದರು. ಪಾಶ್ಚಾತ್ಯರ ವಿಜ್ಞಾನ, ರಾಜಕೀಯ, ಧಾರ್ಮಿಕ ಹಾಗೂ ಇಲ್ಲಿನ ಜನತೆಯ ಮೇಲೆ ವಿಶೇಷ ಹಿಡಿತವನ್ನು ಸಾಧಿಸಿತು. ವಸಾಹತುಶಾಹಿಯು ತನ್ನ ಆಕ್ರಮಣಕಾರಿ ಸಂಸ್ಕೃತಿಯನ್ನು ನೆಲೆಗೊಳಿಸಲು ಕೈಗೊಂಡ ಕ್ರಮಗಳು ಇಲ್ಲಿನ ಒಟ್ಟು ಸಾಂಸ್ಕೃತಿಕ ಪರಿಸರದ ಮೇಲೆ ತಮ್ಮ ಪ್ರಭಾವವನ್ನು ಬೀರಿದವು. ಅಂತೆಯೇ ಬ್ರಿಟೀಷರ ರಾಜಕೀಯ ಯಂತ್ರ ತನ್ನ ಅಸ್ತಿತ್ವವನ್ನು ಗಟ್ಟಿಗೊಳಿಸಿಕೊಳ್ಳಲು ಅನೇಕ ಸುಧಾರಣಾವಾದಿ ಚಟುವಟಿಕೆಗಳಲ್ಲಿ ತೊಡಗಿತು. ಇದರ ಜೊತಗೆ ಇಂಗ್ಲೀಷ್ ವಿದ್ಯಾಭ್ಯಾಸ ಹಾಗೂ ಕ್ರೈಸ್ತಧರ್ಮ ಪ್ರಚಾರ ಮತ್ತು ಚಟುವಟಿಕೆಗಳು ಬಹುಮುಖ್ಯವಾದವು. ಇಂಗ್ಲೀಷ್ ವಿದ್ಯಾಭ್ಯಾಸದಿಂದ ಉನ್ನತವಾದ ಹೊಸ ವಿಚಾರಧಾರೆಯು ನಮ್ಮ ಸಾಂಸ್ಕೃತಿಕ ಸಂದರ್ಭದಲ್ಲಿ ತಲೆದೋರಿದ್ದ ಅನಿಷ್ಟಗಳನ್ನು ಪರಿಹರಿಸಿಕೊಳ್ಳಲು ಸಹಾಯಕವಾಯಿತು. ಜೊತೆಗೆ ಆಚಾರ ವಿಚಾರಗಳು, ಮೌಢ್ಯಗಳು ಇವುಗಳ ಕಟುವಿಮರ್ಶೆಗೆ ಹಾಗೂ ಟೀಕೆಗಳಿಗೆ ಒಳಗಾದವು.

ವಸಾಹತುಶಾಹಿ ಸಂಸ್ಕೃತಿಗೆ ಸಂಪೂರ್ಣವಾಗಿ ದೇಶವು ಅಧೀನವಾದ ಕಾಲಘಟ್ಟದಲ್ಲಿ ಬರವಣಿಗೆಗೆ ತೊಡಗಿದ ಕುವೆಂಪು ಅವರು ಆ ಸಂಸ್ಕೃತಿಯ ಆಕರ್ಷಣೆ ಹಾಗೂ ವಿಕರ್ಷಣೆಗಳಿಗೆ ಒಳಗಾದದ್ದು ಆ ಕಾಲಮಾನದ ಚಾರಿತ್ರಿಕ ಸಂಗತಿಗಳ ವಾಸ್ತವತೆಯನ್ನು ಸೂಚಿಸುತ್ತದೆ.

ಕುವೆಂಪುರವರು ಹೊರ ಮತ್ತು ಒಳ ವಸಹಾತುಶಾಹಿ ಶಕ್ತಿಗಳೆರಡನ್ನು ಅನುಮಾನ ಹಾಗೂ ಆತಂಕಗಳಿಂದ ನೋಡುತ್ತಾ ಬಂದವರು. ಗ್ರಾಮೀಣ ಜಗತ್ತಿನಲ್ಲಿ ಊಳಿಗಮಾನ್ಯ,

ಪುರೋಹಿತಶಾಹಿ, ಧರ್ಮ, ಜಾತಿ ಹಾಗೂ ಪುರುಷಾಧಿಕಾರಗಳ ಒಳ ವಸಾಹತು ಶಕ್ತಿಗಳಾಗಿ ಜನಸಮುದಾಯವನ್ನು ಶೋಷಿಸುತ್ತಾ ಹಾಗೂ ನಿಯಂತ್ರಿಸುತ್ತಾ ಬಂದವು. ಅದೇ ಸಂದರ್ಭದಲ್ಲಿ ಬ್ರಿಟೀಷ್ ವಸಾಹತುಶಾಹಿ ಎಂಬ ಹೊರಗಿನ ಶಕ್ತಿಯು ಸ್ಥಳೀಯ ಜಗತ್ತನ್ನು ಪ್ರಭಾವಿಸಿ, ಅಧೀನವಾಗಿರಿಸಿಕೊಳ್ಳುವ ಪ್ರಬಲ ಅಧಿಕಾರ ಶಕ್ತಿಗಳಾಗಿದ್ದಿತು. ಕೈಗಾರಿಕಾ ಕ್ರಾಂತಿ, ವಿಜ್ಞಾನ, ತಂತ್ರಜ್ಞಾನಗಳಿಂದ ಕೂಡಿದ ಆಧುನಿಕ ಜೀವನ ಕ್ರಮವೊಂದು ಹಳ್ಳಿಗೆ ಪ್ರವೇಶಿಸಿದಾಗ ಸಮುದಾಯ ಅದಕ್ಕೆ ಪ್ರತಿಕ್ರಿಯಿಸುವ ಸ್ವರೂಪವನ್ನು ಕುವೆಂಪುರವರು 'ಕಾನೂರು ಹೆಗ್ಗಡಿತಿ' ಕಾದಂಬರಿಯಲ್ಲಿ ನಿರೂಪಿಸುತ್ತಾರೆ. ಉದಾಹರಣೆಗೆ, ಹೂವಯ್ಯ-ಮುಕುಂದಯ್ಯ ನಗರದಿಂದ ಹಳ್ಳಿಗೆ ಪ್ರವೇಶಿಸಿದಾಗ ಗ್ರಾಮೀಣ ಜಗತ್ತು ಅಂದರೆ, ಸ್ಥಳೀಯರು ಪ್ರತಿಕ್ರಿಯಿಸಿದ ಬಗೆ ಒಂದು ಮಾದರಿಯದು. ಮತ್ತೊಂದು ಮಾದರಿ ಎಂದರೆ, ಕ್ರೈಸ್ತ ಪಾದ್ರಿ ಬೈಸಿಕಲ್ಲೊಂದನ್ನು ಹಳ್ಳಿಗೆ ತಂದಾಗ ಊರಿನವರು ಪ್ರತಿಕ್ರಿಯಿಸಿದ್ದು.

ಇದೇ ಹೊತ್ತಿನಲ್ಲಿ ವಸಾಹತುಶಾಹಿ ಪ್ರಭುತ್ವವು ಶೂದ್ರಾತಿಶೂದ್ರರಿಗೆ ಧಾರ್ಮಿಕ ಸ್ವಾತಂತ್ರ್ಯ ನೀಡುವ ವಿಧೇಯಕವನ್ನು ಜಾರಿಗೆ ತಂದಿತು. ಜೊತೆ ಜೊತೆಗೆ ಊಳಿಗಮಾನ್ಯ ವ್ಯವಸ್ಥೆಯನ್ನು ಬಲಪಡಿಸಿತು. ಊರಿನ ಪಟೇಲ, ಶ್ಯಾನುಭೋಗ, ಹೆಗ್ಗಡೆ, ಗೌಡ ಇತ್ಯಾದಿ ವರ್ಗಗಳು ಭೂಮಿಯ ಮೇಲೆ ಜಾತಿ, ಕೆಳವರ್ಗಗಳ ಮೇಲೆ ನಿಯಂತ್ರಿಸುವ ಅಧಿಕಾರವನ್ನು ಪಡೆಯಿತು. ಇಂಥ ಜಮೀನ್ದಾರಿ ವ್ಯವಸ್ಥೆಯೊಳಗೂ ಕುವೆಂಪು ತಾಳುವ ಸುಧಾರಣವಾದಿ ನಿಲುವು ಶೂದ್ರ ಸಮಾಜದ ಪರವಾಗಿದೆ.

ಪುರೋಹಿತಶಾಹಿಯ ನಿರ್ಮಿತಿಗಳಾದ ಮತಾಂಧತೆ, ಜಾತೀಯತೆ ಮತ್ತು ಧಾರ್ಮಿಕ ಮೌಢ್ಯಗಳಿಂದಾಗಿ ಭಾರತೀಯ ಸಮಾಜದಲ್ಲಿ ಸೃಷ್ಟಿಯಾಗಿದ್ದ ನಿಷ್ಕ್ರಿಯತೆಯನ್ನು ಹಾಗೂ ಅದಕ್ಕೆ ಕಾರಣಗಳನ್ನು ಶೋಧಿಸಲು ಕುವೆಂಪು ಅವರು ಸೃಷ್ಟಿಶೀಲತೆಯಲ್ಲಿ ತೊಡಗಿದರು. ಈ ಕಾಲದಲ್ಲಿ ಭಾರತದ ರಾಜಕೀಯ, ಸಾಮಾಜಿಕ, ಧಾರ್ಮಿಕ ನೆಲೆಗಳಲ್ಲಿ ಅನೇಕ ಗೊಂದಲಗಳು ಎದುರಾಗಿದ್ದವು. ಒಂದು ಕಡೆ ಪಾಶ್ಚಾತ್ಯ ಚಿಂತನಧಾರೆಯ ಆಕರ್ಷಣೆಯಾದರೆ ಮತ್ತೊಂದು ಕಡೆ ಪರಮಹಂಸ, ವಿವೇಕಾನಂದ, ಗಾಂಧೀಜಿಯವರ ಚಿಂತನೆಗಳು ಸ್ವಾತಂತ್ರ್ಯ ಹೋರಾಟ ಸಂದರ್ಭದಲ್ಲಿ ದೇಶವನ್ನು ಗಾಢವಾಗಿ ವ್ಯಾಪಿಸಿದ್ದವು. ಈ ಸಂದರ್ಭದಲ್ಲಿ ಸಾಮಾಜಿಕ ಹಾಗೂ ಧಾರ್ಮಿಕ ಜಡಾವಸ್ಥೆಗಳಿಗೆ ಅತ್ಯಂತ ತೀವ್ರವಾದ ಪ್ರತಿರೋಧದ ಸ್ವರೂಪವು ಕುವೆಂಪು ಅವರ ಕಾದಂಬರಿಯಲ್ಲಿ ದಟ್ಟವಾಗಿ ಕಾಣಲಾರಂಭಿಸಿತು. ಶೂದ್ರನೊಬ್ಬ ಗ್ರಂಥಾಧ್ಯಯನ, ಬರವಣಿಗೆಯಲ್ಲಿ

ತೊಡಗಿದ್ದು ಮಹಾಪರಾಧವಾಗಿದ್ದ ಸಂದರ್ಭದಲ್ಲಿ ಕುವೆಂಪು ಸಮರ್ಥವಾಗಿ ಸಂಸ್ಕೃತ ಕಲಿತು ಪುರೋಹಿತಶಾಹಿ ವ್ಯವಸ್ಥೆಗೆ ಮುಳುವಾಗತೊಡಗಿದರು. ಆ ಕಾಲಘಟ್ಟದಲ್ಲಿ ಕುವೆಂಪು ಒಡ್ಡಿದ ಪ್ರತಿರೋಧವನ್ನು ಕಾದಂಬರಿಯಲ್ಲಿ ಪ್ರಧಾನವಾಗಿ ಆಲೋಚಿಸಿಬಹುದು.

ಕುವೆಂಪು ಅವರ ಈ ಕಾದಂಬರಿಯಲ್ಲಿ ಜಾತಿಮತಗಳ ಕಟ್ಟುಪಾಡುಗಳನ್ನು ಮುರಿದು ಜಾತ್ಯಾತೀತ ಮನೋಭಾವನೆಯ ವೈಚಾರಿಕ ನಿಲುವುಗಳನ್ನು ಗುರುತಿಸಬಹುದಾಗಿದೆ. "ಗೌಡರು ಹಳೇ ಪೈಕದ ತಿಮ್ಮನನ್ನು ಇತರ ಒಕ್ಕಲುಗಳಂತಲ್ಲದೆ ಹೆಚ್ಚು ಆದರದಿಂದ ಕಾಣುತ್ತಿದ್ದರು. ಅವನಿಗೆ ಕೇಳಿದ ಹಾಗೆ ಸಾಲ; ಕೇಳಿದ ಗದ್ದೆ ಸಾಗುವಳಿ; ಕೇಳಿದ ಎತ್ತು ಉಳುಮೆಗೆ; ಕೆಲವು ಸಾರಿ ತಿಮ್ಮನ ಕೆಲಸಕ್ಕೆ ತಮ್ಮ ಮನೆಯ ಎತ್ತು ಆಳುಗಳನ್ನು ಕೊಡುತ್ತಿದ್ದರು. ಏಕೆಂದರೆ ಇತರರು ಮಾಡುವ ಕೆಲಸವನ್ನು ಮಾಡಲು ಅನೇಕರಿದ್ದರು; ಆದರೆ ತಿಮ್ಮನಂತೆ ಯಾರಿಗೂ ಬಗನಿ ಕಟ್ಟಿಕಳ್ಳು ಇಳಿಸಲು ತಿಳಿದಿರಲಿಲ್ಲ. ಅದು ಅವನ ಜಾತಿಯ ಗುಟ್ಟಾಗಿತ್ತು. ಬೇಲರು, ಕುಂಬಾರರು, ಮಾರಾಠಿಗರು, ಸೆಟ್ಟರು, ಒಕ್ಕಲಿಗರು.. ಇವರು ಯಾರಿಗೂ ಜಾತಿ ಪದ್ಧತಿಯಂತೆ ಬಗನಿ ಕಟ್ಟುವ ಹಕ್ಕಿಲ್ಲ. ಆ ಹಕ್ಕು ಹಳೆಪೈಕರದು. ಆದ್ದರಿಂದಲೇ ಕಾನೂರಿನಲ್ಲಿ ಹಳೆಪೈಕದ ತಿಮ್ಮನೊಬ್ಬನೇ ಬಗನಿ ಮರಗಳ ಆಡಳಿತಕ್ಕೆ ಸರ್ವಾಧಿಕಾರಿಯಾಗಿದ್ದನು. ಬೇರೆ ಯಾರಾದರೂ ಆ ಕೆಲಸಕ್ಕೆ ಕೈ ಹಾಕಿದರೆ ಕೂಡಲೆ ಜಾತಿಬಾಹಿರವಾಗಿ ಬಹಿಷ್ಕೃತರಾಗುತ್ತಿದ್ದರು".[1] ಅಂದರೆ ವೃತ್ತಿಯ ಆಧಾರದ ಮೇಲೆ ಜಾತಿಯನ್ನು ವಿಂಗಡಿಸುವ ಪ್ರೌವೃತ್ತಿಯನ್ನು ಈ ಕಾದಂಬರಿಯಲ್ಲಿ ಕಾಣಬಹುದಾಗಿದೆ. ಬಗನಿ ಕಳ್ಳು ಕಟ್ಟುವುದಕ್ಕೆ ಹಳೆ ಪೈಕದವರನ್ನು ಜಮೀನ್ದಾರರು ನೇಮಕ ಮಾಡಿಕೊಂಡಿದ್ದರು. ಆ ಕಳ್ಳು ಕಟ್ಟುವುದಕ್ಕೆ ಬಹಳ ಅನುಭವ ಹೊಂದಿರುವವನಾಗಿರಬೇಕು. ಈ ಅನುಭವ ಹೊಂದಿರುವ ಏಕೈಕ ವ್ಯಕ್ತಿಯೆಂದರೆ ತಿಮ್ಮ. ಇವನಿಗೆ ಚಂದ್ರಯ್ಯಗೌಡರು ಆರ್ಥಿಕವಾಗಿ ಎಲ್ಲಾ ರೀತಿಯ ಸಹಾಯವನ್ನು ಮಾಡುತ್ತಿದ್ದರು. ಏಕೆಂದರೆ ಚಂದ್ರಯ್ಯಗೌಡರಿಗೆ ಕಳ್ಳು ಕುಡಿಯುವ ಚಟವಿರುವುದರಿಂದ ತಿಮ್ಮನನ್ನು ಒಟ್ಟಾರೆ ಕಳ್ಳುಕಟ್ಟುವುದಕ್ಕೆ ಬೇರೆ ಯಾರಿಗೂ ಬರುವುದಿಲ್ಲ ಜೊತೆಗೆ ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಕೆಳಜಾತಿಗಳನ್ನು ಮತ್ತು ದಲಿತರನ್ನು ಊಳಿಗಮಾನ್ಯ ವ್ಯವಸ್ಥೆ ತಮ್ಮ ಸ್ವಾರ್ಥಕ್ಕಾಗಿ ಹೇಗೆ ಬಳಸಿಕೊಳ್ಳುತ್ತಿದ್ದರು ಎಂಬುದಕ್ಕೆ ಚಂದ್ರಯ್ಯಗೌಡರು ಸಾಕ್ಷಿಯಾಗಿ ನಿಲ್ಲುತ್ತಾರೆ ಮತ್ತು ಆರ್ಥಿಕವಾಗಿ ಬಹಳ ಬಲಿಷ್ಠವಾಗಿದ್ದ ಚಂದ್ರಯ್ಯಗೌಡರಿಗೆ ಸಾಯಂಕಾಲವಾದ ನಂತರ ಕಳ್ಳಿನ ಅವಶ್ಯಕತೆ ಬಹಳ ಮುಖ್ಯ. ಚಂದ್ರಯ್ಯಗೌಡರು ಅಮಲಿಗೋಸ್ಕರ ಕಳ್ಳನ್ನು ಕುಡಿದರೆ ಕೆಳವರ್ಗದವರು, ದಲಿತರು ಹೊಲಗದ್ದೆಗಳಲ್ಲಿ ದುಡಿದು ತಮ್ಮ ನೋವುಗಳನ್ನು ಮರೆಯುವುದಕ್ಕೆ ಕುಡಿಯುತ್ತಿದ್ದರು. ಮಲೆನಾಡಿನವರು ಕಳ್ಳು ಕುಡಿಯುವುದು ಅಭ್ಯಾಸವಾಗಿರುವುದರಿಂದ ಅದನ್ನು

ಬಿಟ್ಟು ಇರಲು ಸಾಧ್ಯವಾಗುವುದಿಲ್ಲ. ಕಳ್ಳು ಕುಡಿಯದಂತೆ ಹೂವಯ್ಯ ತಾಯಿಗೆ ನಿರ್ಬಂಧ ಹಾಕುತ್ತಾನೆ. ಮಗನ ಬಗ್ಗೆ ಅಪಾರ ಮಮತೆ ಅಭಿಮಾನಗಳನ್ನು ಇಟ್ಟುಕೊಂಡಿರುವ ನಾಗಮ್ಮ 'ಎಲ್ಲಿ ರಾಜಾರೋಷವಾಗಿ ಕಳ್ಳನ್ನು ಕುಡಿದರೆ ಮರ್ಯಾದಿ ಹಾಳಾಗುತ್ತದೆಂದು ತಿಳಿದು ಕದ್ದು ಕಳ್ಳನ್ನು ಕುಡಿಯಲು ಪ್ರಾರಂಭಿಸುತ್ತಾಳೆ. ಹೀಗಾಗಿ ಕುಡಿತ ಮಲೆನಾಡಿನವರಿಗೆ ಪರಂಪರಾನುಗತವಾಗಿ ಬಂದ ಅಭ್ಯಾಸ. ಈ ಅಭ್ಯಾಸವು ಅತಿರೇಕಕ್ಕೆ ಹೋದಾಗ ಅದೊಂದು ಸಮಸ್ಯೆಯಾಗುತ್ತದೆ. ಕುಡಿತದಿಂದ ಆಗುವ ಅನಾಹುತಗಳು ಅನೇಕ ಕುಡಿತ ಮತ್ತು ಹೊಡೆತ ಮಲೆನಾಡಿನ ಮನೆಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ದೊಡ್ಡ ಸಮಸ್ಯೆ. ಅದರಲ್ಲೂ ಕುಡಿದು ಬಂದು, ಗಂಡ ಹೆಂಡತಿಗೆ ಹೊಡೆಯುವುದು ಸಾಮಾನ್ಯ ಸಂಗತಿ. ಇದು ಮುಖ್ಯವಾಗಿ ಗೃಹಶಾಂತಿಗೆ .ಮಾರಕವಾಗುತ್ತದೆ. ಮಲೆನಾಡಿನವರಿಗೆ ಕಳ್ಳು ಎಂಬ ದ್ರವ್ಯ ಎಷ್ಟು ಮುಖ್ಯವಾಗಿತ್ತು ಎಂದರೆ ಚಂದ್ರಯ್ಯಗೌಡರು ಅನಾರೋಗ್ಯದ ಕಾರಣ ಹಾಸಿಗೆ ಹಿಡಿದಿದ್ದರೂ ಸಹ ಆ ಕಳ್ಳಿನ ರುಚಿ ನೋಡದೆ ಊಟ ಮಾಡುತ್ತಿರಲಿಲ್ಲ. ಸುಬ್ಬಮ್ಮ ತನ್ನ ಗಂಡನ ಆರೋಗ್ಯವನ್ನು ಸುಧಾರಿಸುವ ದೃಷ್ಟಿಯಿಂದ ಕಳ್ಳು ತರಬಾರದೆಂದು ತಿಮ್ಮನಿಗೆ ಆಜ್ಞೆ ಮಾಡುತ್ತಾಳೆ. ಈ ರೀತಿಯಲ್ಲಿ ಹೇಳಿದ ಸುಬ್ಬಮ್ಮನ ವಿರುದ್ಧ ಚಂದ್ರಯ್ಯಗೌಡರು ಸಿಟ್ಟನ್ನು ವ್ಯಕ್ತಪಡಿಸುತ್ತಾರೆ. ಹಾಗೆಯೇ ಇನ್ನೊಂದು ಕುಟುಂಬದಲ್ಲಿ ಉಂಟಾದ ಸಂಘರ್ಷ ಯಾವುದೆಂದರೆ ಬೈರನ ಕುಟುಂಬ ಸದಸ್ಯನೊಬ್ಬನಾದ ಬೈರನು ಕುಡಿದ ಅಮಲಿನಲ್ಲಿ ತನ್ನ ಹೆಂಡತಿಯಾದ ಸೇಸಿಯ ಜುಟ್ಟನ್ನು ಹಿಡಿದುಕೊಂಡು ಹೊಡೆಯುವುದಲ್ಲದೆ ಒನಕೆಯಿಂದ ಭತ್ತವನ್ನು ಕುಟ್ಟುವಂತೆ ಭಯಂಕರವಾಗಿ ಹೊಡೆಯುತ್ತಿದ್ದಾನೆ, ತನ್ನ ಮಗನಾದ ಗಂಗ ದೂರದಲ್ಲಿ ನಡುಗುತ್ತಾ ಅಳುತ್ತಿದ್ದಾನೆ. ಇಲ್ಲಿ ಮುಖ್ಯವಾಗಿ ಬೈರನ ಅಮಲಿನ ಅಸ್ಥಿರತೆಯ ಜೊತೆಗೆ ಅವನ ನೀಚ ಬುದ್ಧಿಯನ್ನು ಕಾಣಬಹುದು. ಇಂದಿಗೂ ಕುಡಿತದಿಂದ ಎಷ್ಟು ಮನೆಯ ಶಾಂತಿಯು ಹಾಳಾಗಿರುವುದಕ್ಕೆ ಮದ್ಯಪಾನವೇ ಕಾರಣ ಎನ್ನುವ ವಾಸ್ತವ ಸತ್ಯವನ್ನು ಮರೆಮಾಚಲಾಗದು.

ಭಾರತದ ಸಂದರ್ಭದಲ್ಲಿ ಪುರೋಹಿತಶಾಹಿ, ಧರ್ಮ, ವರ್ಣಾಶ್ರಮ ವ್ಯವಸ್ಥೆ, ಜಾತಿ ಮತ್ತು ಲಿಂಗರಾಜಕಾರಣಗಳ ನಡುವೆ ಒಂದಕ್ಕೊಂದು ಸಂಬಂಧವಿದೆ. ಇವುಗಳ ನಡುವಿನ ಅಂತರ್‌ಸಂಬಂಧವನ್ನು ಕುರಿತು ಅಂಬೇಡ್ಕರ್ ಅವರ ಗ್ರಹಿಕೆ ಹೀಗಿದೆ; "ಅಸ್ಪೃಶ್ಯತೆಯ ಬೇರು ಜಾತಿ ವ್ಯವಸ್ಥೆಯಲ್ಲಿದೆ, ಜಾತಿ ವ್ಯವಸ್ಥೆಯ ಬೇರು ಧರ್ಮಾವಲಂಬಿಯಾಧ ವರ್ಣಾಶ್ರಮದಲ್ಲಿದೆ. ವರ್ಣಾಶ್ರಮದ ಬೇರು ಬ್ರಾಹ್ಮಣ ಧರ್ಮದಲ್ಲಿದೆ ಮತ್ತು ಬ್ರಾಹ್ಮಣ ಧರ್ಮದ ಬೇರು ಅಧಿಕಾರ ಅಥವಾ ರಾಜಕೀಯ ಶಕ್ತಿಯಲ್ಲಿದೆ" (ಉಲ್ಲೇಖ : ಡಾ.ಜಿ.ವೆಂಕಟೇಶಮೂರ್ತಿ, ನಾಟಕ ಸಂಕಥನ-

ಮುಂಬರುವ ಪುಸ್ತಕದಿಂದ) ಅಂದರೆ, ರಾಜಪ್ರಭುತ್ವ ಹಾಗೂ ಭೂಮಾಲೀಕ ಪ್ರಭುತ್ವದ ಮಾನ್ಯತೆಗೆ, ನಿರ್ವಹಣೆಗೆ, ನಿರ್ದೇಶನಕ್ಕೆ ಬೇಕಾದ ಶಕ್ತಿ ಬ್ರಾಹ್ಮಣನಾಗಿದ್ದನು ಮತ್ತು ಶ್ರೇಣೀಕೃತ ಸಮಾಜ ವ್ಯವಸ್ಥೆಯಲ್ಲಿಯೂ ಶಕ್ತಿ ಪ್ರಭಾವಗಳ ಯಜಮಾನನಾಗಿದ್ದನು. ಊಳಿಗಮಾನ್ಯ ಪ್ರಭುತ್ವದಲ್ಲಿ ಪುರೋಹಿತಶಾಹಿ ಯಜಮಾನಿಕೆ ಎಷ್ಟರಮಟ್ಟಿಗೆ ಪ್ರಭಾವಶಾಲಿಯಾಗಿತ್ತು ಎಂಬುದು 'ಹೆಗ್ಗಡಿತಿ' ಕಾದಂಬರಿಯಲ್ಲಿ ಸೂಚಿತಗೊಂಡಿದೆ.

ಭೂತ, ದೆಯ್ಯ.. ಮುಂತಾದ ಕ್ಷುದ್ರ ದೇವತೆಗಳ ಆಚರಣೆಗಳು, ಕಳ್ಳು ಕುಡಿಯುವುದೇ ಮೊದಲಾದ ಅನರ್ಥಕಾರಿ ಹವ್ಯಾಸಗಳು ಮೊದಲಾದ ಶೂದ್ರ ಸಮುದಾಯದ ಈ ಮೌಢ್ಯಗಳನ್ನೇ ವೆಂಕಪ್ಪಯ್ಯ ಜೋಯಿಸ ತನ್ನ ಬದುಕಿನ ಉದ್ಯೋಗವನ್ನಾಗಿಸಿಕೊಂಡಿದ್ದಾನೆ. ಹೂವಯ್ಯ ಮತ್ತು ಚೆನ್ನಯ್ಯರಂಥ ಉಗ್ರ ವೈಚಾರಿಕತೆಯಿಂದ ಬೇಸತ್ತ ಚಂದ್ರಯ್ಯಗೌಡರು ವೆಂಕಪ್ಪಯ್ಯ ಜೋಯಿಸರಿಗೆ ಮತ್ತೊಂದು ತಾಯಿತ ಮಾಡಲು ಹೇಳುತ್ತಾರೆ. ಆಗ ಜೋಯಿಸನ ಪ್ರತಿಕ್ರಿಯೆ ಹೀಗಿದೆ; "ನಾನು ಹೇಳಿದ್ದೆ ನಿನಗೆ ಮೊದಲೇ, ಈಗಿನ ವಿದ್ಯಾಭ್ಯಾಸ ಹುಡುಗರನ್ನು ಹಾಳು ಮಾಡಿಬಿಡುತ್ತದೆ ಎಂದು! ದೇವರು ದಿಂಡರು ಭಕ್ತಿಶಕ್ತಿ ಎಲ್ಲ ನಿರ್ನಾಮ!" ಎಂದು ಹೇಳುವ ಮಾತುಗಳು ವ್ಯವಸ್ಥೆಯನ್ನು ಅದರ ಮೂಲ ಸ್ವರೂಪವನ್ನು ಉಳಿಸಿ ಬೆಳೆಸುವ ಪುರೋಹಿತಶಾಹಿಗಳ ಹುನ್ನಾರಕ್ಕೆ ಕಾದಂಬರಿಯ ಈ ಸನ್ನಿವೇಶ ಒಂದು ನಿದರ್ಶನವಾಗಿದೆ.

"ತೆಳ್ಳಗೆ ಉದ್ದವಾಗಿದ್ದ ಎಡಗಣ್ಣು ಹೂಕೂತು ಕುರುಡಾಗಿದ್ದ ವೆಂಕಪ್ಪಯ್ಯ ಜೋಯಿಸರು ಪಕ್ಕದಲ್ಲಿಟ್ಟಿದ್ದ ಅಗಲವಾದ ಒಂದು ಮಣೆಯ ಮೇಲೆ ಪದ್ಮಾಸನ ಹಾಕಿ ಕುಳಿತಿದ್ದರು. ಏಕೆಂದರೆ, ಶೂದ್ರರ ಮನೆಯ ಜಮಖಾನ ಮೊದಲಾದ ವಸ್ತ್ರಾದಿಗಳನ್ನು ಮುಟ್ಟುವುದು, ಸಂಪ್ರದಾಯ ಬ್ರಾಹ್ಮಣರಾಗಿದ್ದ ಅವರಿಗೆ ಮಡಿ-ಮೈಲಿಗೆ ಆಗಬಾರದು ಎಂಬುದು ಅವರ ಮಾತಾಗಿತ್ತು. ಅವರು ಅಂಗಿ ಮೊದಲಾದ ನವೀನ ವಸನಗಳನ್ನು ತೊಟ್ಟಿರಲಿಲ್ಲ. ಆಕರ್ಷಣೀಯವಾಗಿ ಬಂದಿದ್ದ ಮೈಚರ್ಮವೇ ಅವರಿಗೆ ವಸನವಾಗಿತ್ತು. ಆದರೆ ಗೌರವಾರ್ಥವಾಗಿ ಒಂದು ಬಿಳಿಯ ಬಟ್ಟೆಯನ್ನು ಹೊದೆದಿದ್ದರು; ಮೊಳಕಾಲಿನವರೆಗೆ ಕಚ್ಚೆ ಹಾಕಿದ್ದರು. ಅವರ ಉಡುಗೆಯೆಲ್ಲವೂ ಶುಭ್ರವಲ್ಲದಿದ್ದರೂ ಧೌತವಾಗಿತ್ತು. ಸ್ವಲ್ಪ ಚೆನ್ನಾಗಿ ನೋಡಿದ್ದರೆ ಸೊಂಟದಲ್ಲಿ ನಶ್ಯದ ಡಬ್ಬಿಯನ್ನು ಸಿಕ್ಕಿಸಿದ್ದಾರೆ ಎಂಬುದೂ ಗೊತ್ತಾಗುತ್ತಿತ್ತು. ಅವರ ಉದ್ಯೋಗಗಳಲ್ಲಿ ಮುಖ್ಯವಾದುವೆಂದರೆ ದೇವರಪೂಜೆ, ಭವಿಷ್ಯ ಹೇಳುವುದು, ಜಾತಕ ಬರೆಯುವುದು ಮತ್ತು ನೋಡುವುದು, ಲಗ್ನಕ್ಕೆ ಮುಹೂರ್ತ ಇಟ್ಟುಕೊಡುವುದು, ಶೂದ್ರರ ಭೂತಾದಿಗಳಿಗೆ ರಕ್ತದ ಬಲಿಕೊಡುವ ಮೊದಲು

ಹಣ್ಣು ಕಾಯಿ ಮಾಡುವುದು, ಮಂತ್ರದಿಂದ ದೆವ್ವಗಳನ್ನು ಓಡಿಸುವುದು ಮತ್ತು ಹಿಡಿಸುವುದು ಇತ್ಯಾದಿ ಆದಕಾರಣ ಹಳ್ಳಿಯವರಿಗೆಲ್ಲ ಅವರನ್ನು ಕಂಡರೆ ಭಯ, ಭಕ್ತಿ".[2] ಪುರೋಹಿತಶಾಹಿ ವರ್ಗದ ಮನಸ್ಸು ಎಷ್ಟು ಕೊಳಕಾಗಿದೆ ಎಂದರೆ ಶೂದ್ರರು ನೀಡುವಂತಹ ಸೌಲಭ್ಯಗಳು ಇವರಿಗೆ ಮೈಲಿಗೆ ಇಲ್ಲ, ಜೊತೆಗೆ ಹಿಂದಿನಿಂದ ಬಂದಂತಹ ಮೌಢ್ಯಗಳನ್ನು ತಮ್ಮ ಲಾಭದ ಕೆಲಸವಾಗಿ ಮಾಡಿಕೊಂಡಂತಹ ಈ ಪುರೋಹಿತಶಾಹಿ ವರ್ಗ ಇದರ ವಿರುದ್ಧ ವೈಚಾರಿಕವಾಗಿ ಚಿಂತಿಸಿ ತಿಳಿ ಹೇಳುವುದಕ್ಕೆ ಸಾಧ್ಯವಿಲ್ಲ ಏಕೆಂದರೆ ಈ ಶೂದ್ರ ಸಮುದಾಯ ಮತ್ತು ಕೆಳಜಾತಿಗಳ ಮನಸ್ಸನ್ನು ತಮ್ಮ ಕಡೆಗೆ ಎಳೆದುಕೊಳ್ಳುವುದರ ಮೂಲಕ ತಮ್ಮ ಲಾಭದ ಹಾದಿಗಳನ್ನು ಸುಗಮಗೊಳಿಸಿಕೊಂಡಿದ್ದಾರೆ. ಈ ಲಾಭಗಳನ್ನು ಬದುಕುವುದಕ್ಕೆಂದು ತಿಳಿದುಕೊಳ್ಳದೇ ಶೂದ್ರರ ಮತ್ತು ಕೆಳಜಾತಿಗಳ ಮೇಲೆ ದಬ್ಬಾಳಿಕೆ ಮಾಡುವುದರ ಮೂಲಕ ತಮ್ಮ ಸ್ವಾರ್ಥತೆಯನ್ನು ಸಾಧಿಸಿಕೊಳ್ಳುತ್ತಾರೆ. ಜೊತೆಗೆ ಆಗಿನ ಕಾಲದಲ್ಲಿ ಶೂದ್ರರು ಗ್ರಂಥಾಧ್ಯಾಯನ ಮತ್ತು ಬರವಣಿಗೆಯಲ್ಲಿ ತೊಡಗಿದರೆ ಅದನ್ನು ಈ ಪುರೋಹಿತಶಾಹಿ ವರ್ಗವು ವಿರೋಧ ವ್ಯಕ್ತಪಡಿಸುತ್ತಿತ್ತು. ಕಾರಣವೆಂದರೆ ಶಿಕ್ಷಣದಿಂದ ಎಲ್ಲಿ ಶೂದ್ರರು ಉನ್ನತಮಟ್ಟಕ್ಕೆ ಏರುತ್ತಾರೆಂಬ ನೀಚತನ. ಕುವೆಂಪುರವರಿಗೆ ಈ ವ್ಯವಸ್ಥೆಯ ವಿರುದ್ಧ ತುಂಬಾ ಆಕ್ರೋಶವಿತ್ತು. ಅದಕ್ಕೆ ಪುರೋಹಿತಶಾಹಿ ಬರೆದಂತಹ ಸತ್ಯಗಳನ್ನು ಕುವೆಂಪು ತಮ್ಮ ಬರವಣಿಗೆಯಲ್ಲಿ ಅಸತ್ಯಗಳೆಂದು ಪ್ರತಿಪಾದಿಸುವುದರ ಮೂಲಕ ಹೊಸ ವ್ಯಾಖ್ಯಾನವನ್ನು ನೀಡುತ್ತಾರೆ. ಕುವೆಂಪುರವರು ಪುರೋಹಿತಶಾಹಿ ವ್ಯವಸ್ಥೆಯು ನಡೆಸುವಂತಹ ಕೃತ್ಯಗಳನ್ನು ಕಂಡು ಬ್ರಾಹ್ಮಣರನ್ನು ವಿರೂಪಗೊಳಿಸುವ ಮತ್ತು ತಿರುಚುವ ಮಧ್ಯವರ್ತಿಗಳೆಂದು ಕರೆದಿದ್ದಾರೆ. ಇದರಿಂದ ಆಗುವ ಅನರ್ಥಗಳನ್ನು 'ಕಾನೂರು ಹೆಗ್ಗಡಿತಿ' ಕಾದಂಬರಿಯಲ್ಲಿ ಕಾಣಬಹುದು. ವಸಾಹತುಶಾಹಿಯ ಸಂದರ್ಭದಲ್ಲಿ ಬರುವಂತಹ ಒಂದು ಹೊಸ ಬಗೆಯ ಜ್ಞಾನಜ್ಯೋತಿಯನ್ನು ನಂದಿಸಿ ಲೋಕಕ್ಕೆ ಅಂಧಕಾರವನ್ನು ಮಾಡುವುದಕ್ಕೆ ಈ ಪುರೋಹಿತಶಾಹಿ ವ್ಯವಸ್ಥೆ ಗಮನಹರಿಸುತ್ತದೆ. ಅದಕ್ಕೆ ಕುವೆಂಪುರವರು ದೇವರು ಮತ್ತು ಭಕ್ತರ ನಡುವೆ ಇರುವಂತಹ ಈ ದಲ್ಲಾಳಿಗಳ ಸಹವಾಸ ಸಾಕು ಎಂದಿದ್ದಾರೆ. ಜೊತೆಗೆ ಚಂದ್ರಯ್ಯಗೌಡರ ಜ್ಞಾನದ ಜ್ಯೋತಿಯನ್ನು ಆರಿಸಿ ತಮ್ಮದಾದಂತಹ ಮೌಢ್ಯದ ಬೆಳಕನ್ನು ನೀಡಿದ ವ್ಯಕ್ತಿ ವೆಂಕಪ್ಪಜೋಯಿಸರು. ಹೂವಯ್ಯ ಮತ್ತು ಸೀತೆಯಂತಹ ಎರಡು ಹಸಿ ಹೃದಯಗಳ ಮೇಲೆ ತಮ್ಮ ಮೌಢ್ಯದ ಬೆಳಕನ್ನು ನೀಡಿ ಜೀವನವನ್ನೇ ಅಂಧಕಾರವನ್ನಾಗಿ ಮಾಡಿದವರು. ಪುರೋಹಿತಶಾಹಿ ವರ್ಗ ಇದರ ವಿರುದ್ಧ ವ್ಯಾಪಕವಾಗಿ ಹಾಗೂ ತೀವ್ರವಾಗಿ ಬರವಣಿಗೆಯ ಮೂಲಕ ಪ್ರತಿಭಟಿಸಿದ ಕುವೆಂಪುರವರನ್ನು 'ಬ್ರಾಹ್ಮಣ ವಿರೋಧಿ' ಎಂಬ ಆಪಾದನೆಯಿದೆ. ಆದರೆ ಇವರಿಗೆ ಬ್ರಾಹ್ಮಣರ ಮೇಲೆ ಯಾವ ದ್ವೇಷವೂ ಇಲ್ಲ.

ಅವರಿಗೆ ಮುಖ್ಯವಾಗಿ ಜನತೆಗೆ ಮೌಢ್ಯ, ಅಜ್ಞಾನ, ಸಂಪ್ರದಾಯಗಳನ್ನು ಮುಗ್ಧ ಜನರಿಗೆ ಪ್ರಚಾರ ಮಾಡುತ್ತಾ ಸಾಮಾಜಿಕ ಅನಾರೋಗ್ಯವನ್ನು ಹರಡುತ್ತಿರುವ ಪುರೋಹಿತಶಾಹಿಯ ವಿರುದ್ಧ ಕಿಡಿಕಾರಿದರು.

"ದೇಶದಲ್ಲಿ ಹಿಂದೂ ಧರ್ಮದ ಪುರೋಹಿತಶಾಹಿ ಎಲ್ಲೋ ಶೇ.5ರಷ್ಟು ಇದ್ದಾರೆ. ಅವರಿಗೆಲ್ಲಾ ಬೆಂಬಲ ಎಲ್ಲಿಂದ ಬರುತ್ತದೆಂದರೆ ಎಲ್ಲಾ ಜಾತಿಯ ಸಮುದಾಯಗಳಿಂದ ಜೊತೆಗೆ ಈ ಪುರೋಹಿತಶಾಹಿ ವರ್ಗವನ್ನು ಹೊರತುಪಡಿಸಿ ಇನ್ನುಳಿದವರ ಮನಸ್ಸನ್ನು ತಿದ್ದಿ ತಿರುಗಿಸಿದರೆ ಅದು ತನ್ನಷ್ಟಕ್ಕೆ ತಾನೆ ಒಣಗಿ ಹೋಗುತ್ತದೆ. ಈ ಶೂದ್ರ ಶಕ್ತಿಯ ಬೆಂಬಲ ತಪ್ಪಿದರೆ ಪುರೋಹಿತಶಾಹಿ ತಾನಾಗಿ ಒಣಗಿ ಹೋಗುತ್ತದೆ".[3] ಇಲ್ಲಿ ಪುರೋಹಿತಶಾಹಿಯ ಕೊಳಕು ಮನಸ್ಥಿತಿಯನ್ನು ಶುದ್ಧೀಕರಿಸುವ ಪ್ರಯತ್ನವಿದೆ. ಜೊತೆಗೆ ಈ ದೇಶದಲ್ಲಿ ಪುರೋಹಿತಶಾಹಿಗಳು ಶೇ.2ರಷ್ಟಿದ್ದು ಇವರಿಗೆ ಹೆಚ್ಚಿನ ಸಂಭಾವನೆಯ ಜೊತೆಗೆ ಆರ್ಥಿಕವಾಗಿಯೂ ಉನ್ನತ ಶ್ರೇಣಿಯಲ್ಲಿದ್ದರು. ಪುರೋಹಿತಶಾಹಿಯ ಸಮುದಾಯವನ್ನು ಹೊರತುಪಡಿಸಿ ಉಳಿದ ಸಮುದಾಯಗಳು ಧಾರ್ಮಿಕತೆಯಲ್ಲಿ ಮುಳುಗಿರುವಂತಹ ಮನಸ್ಸುಗಳನ್ನು ವೈಚಾರಿಕೆಯ ಕಡೆಗೆ ವಾಲಿಸಿದರೆ ಪುರೋಹಿತಶಾಹಿಯ ದರ್ಪವು ತನ್ನಷ್ಟಕ್ಕೆ ತಾನೇ ಕರಗುತ್ತದೆ. ಆದ್ದರಿಂದ 'ಕಾನೂರು ಹೆಗ್ಗಡಿತಿ' ಕಾದಂಬರಿಯಲ್ಲಿ ಚಂದ್ರಯ್ಯಗೌಡರಲ್ಲಿ ಮೌಢ್ಯವು ತುಂಬಿ ತುಳುಕುತ್ತಿದ್ದ ಈ ಸಂದರ್ಭದಲ್ಲಿ ತನ್ನ ಬಂಡವಾಳವನ್ನಾಗಿ ಮಾಡಿಕೊಂಡ ವೆಂಕಪ್ಪಯ್ಯ ಜೋಯಿಸರು ತಮ್ಮ ಆರ್ಥಿಕತೆಗೆ ಸುಗಮವಾದಂತಹ ದಾರಿಯನ್ನು ಮಾಡಿಕೊಂಡರು. ಇಂತಹ ಮನಸ್ಸುಗಳನ್ನು ತಿದ್ದಿದರೆ ಪುರೋಹಿತಶಾಹಿ ವರ್ಗವು ಬೆಳೆಯುವುದಕ್ಕೆ ಆಗುವುದಿಲ್ಲ. ಇದರ ಜೊತೆಗೆ ಹೂವಯ್ಯನಂತಹ ವಿದ್ಯಾವಂತನಿದ್ದರೆ ಪುರೋಹಿತಶಾಹಿಯ ವ್ಯವಸ್ಥೆಯನ್ನು ಮಟ್ಟಹಾಕಬಹುದು. ಒಟ್ಟಾರೆಯಾಗಿ ಕುವೆಂಪು ಬುದ್ಧಿ ತಿಳುವಳಿಕೆ ಬಂದಾಗಿಂದಲೂ ಅವರೆಂದೂ ದೇವಾಲಯಗಳಿಗೆ ಹೋಗಲಿಲ್ಲ, ಪುರೋಹಿತರನ್ನು ಬರಮಾಡಿದವರಲ್ಲ, ಅದ್ದೂರಿಯಾಗಿ ಪೂಜೆ ಮಾಡಿದವರಲ್ಲ, ಕುವೆಂಪುರವರು ಜನತೆಯಲ್ಲಿ ವೈಜ್ಞಾನಿಕತೆ ಮತ್ತು ವೈಚಾರಿಕತೆಯನ್ನು ಬೆಳೆಸಿಕೊಳ್ಳಬೇಕೆಂದು ಮನವಿ ಮಾಡಿಕೊಳ್ಳುತ್ತಾರೆ. ಜೊತೆಗೆ ಕುವೆಂಪುರವರು ಒಬ್ಬ ನಾಯಕನಾಗಿ ಉಳಿಯದೆ ತಂತಮ್ಮ ಸ್ವಾಭಾವಿಕ ಗುಣಗಳಿಂದ ಅವರುಗಳ ಸಮುದಾಯದ ಒಟ್ಟು ಬದುಕನ್ನೆ ತೆರೆದಿರಿಸಿದರು. ಈವರೆಗೆ ಓದುಗ ಕಂಡರಿಯದ ಮತ್ತು ಕೇಳರಿಯದ ಶೂದ್ರಾತಿಶೂದ್ರರ ಬದುಕಿನ ನೋವನ್ನು ಬಯಲು ಮಾಡಿದರು. ಜೊತೆಗೆ ಶ್ರೀಮಂತ ವರ್ಗದ, ಮೇಲು ಮಧ್ಯಮ ವರ್ಗದ ಬದುಕಿನಷ್ಟೆ ಅಲ್ಲದೆ

ಅವರ ಒಳವಿವರಗಳು, ನೋವು ನಲಿವುಗಳು ಸರಸ ವಿರಸಗಳು, ಹಾದರ-ಕುಡಿತಗಳು ಬದುಕಿನ ಬಗೆಗೆ ಸಾಮಾನ್ಯ ಓದುಗ ಕಲ್ಪಿಸಿಕೊಂಡಿರುವ ಭ್ರಮೆಯನ್ನು ಅನಾವರಣಗೊಳಿಸಿದರು.

'ಕಾನೂರು ಹೆಗ್ಗಡಿತಿ' ಕಾದಂಬರಿಯಲ್ಲಿ ಮತ್ತೊಂದು ವಿಶಿಷ್ಟ ಸನ್ನಿವೇಶದ ಚಿತ್ರಣವೆಂದರೆ ಅಸ್ಪೃಶ್ಯರಿಗೆ ಸಹಾಯಹಸ್ತ ನೀಡಲು ಹಳ್ಳಿಗೆ ಪ್ರವೇಶ ಪಡೆದ ಕ್ರೈಸ್ತ ಮಿಷನರಿಗಳು, ಚರ್ಚುಗಳು ಹಾಗೂ ಕ್ರೈಸ್ತ ಪುರೋಹಿತಶಾಹಿ ಪಾದ್ರಿಗಳು. ಊಳಿಗಮಾನ್ಯ ವ್ಯವಸ್ಥೆಯ ವಿವಿಧ ಬಗೆಯ ಹಿಂಸೆಗಳೇ ಇಲ್ಲಿ ಮುಖ್ಯ ಘಟನೆಗಳಾದ್ದರಿಂದ ಈ ಬಗೆಯ ಹಿಂಸೆಯಿಂದ ಶೋಷಿತರನ್ನು, ಕೆಳಜಾತಿಗಳನ್ನು ವಿಮೋಚಿಸುವ ಮಂದಿರಗಳಾಗಿ ಚರ್ಚುಗಳು, ದೇವತೆಗಳಾಗಿ ಪಾದ್ರಿಗಳು, ವೇದಗಳಾಗಿ ಬೈಬಲ್ಲುಗಳು ಹೊಸ ಆದಿಕೇಂದ್ರಗಳ ರಾಜಕಾರಣದೊಂದಿಗೆ ಕಾದಂಬರಿಯಲ್ಲಿ ಪ್ರವೇಶ ಮಾಡುತ್ತವೆ. ಜಾತಿಪದ್ಧತಿಯ ನಿಯಂತ್ರಣದಿಂದ ಬಿಡುಗಡೆ ಪಡೆಯಲು ಬ್ರಾಹ್ಮಣೇತರ ಜಾತಿಗಳು ಪ್ರಯತ್ನದ ಹಿನ್ನೆಲೆಯಲ್ಲಿ ಮತಾಂತರದ ಹೊಸ ಆಸೆಯೊಂದನ್ನು ಕ್ರೈಸ್ತ ಪುರೋಹಿತಶಾಹಿಗಳು ಸ್ಥಾಪಿಸುತ್ತಾರೆ. ಇಲ್ಲಿ ಅಸ್ಪೃಶ್ಯರಿಗೆ ಧಾರ್ಮಿಕ ಹಾಗೂ ಸಾಮಾಜಿಕ ಸ್ವಾತಂತ್ರ್ಯ ನೀಡುವ ವಿಧೇಯಕ ಶಕ್ತಿಯಾಗಿ ದೇಶದಲ್ಲಿ ವಸಾಹತುಶಾಹಿ ಪ್ರಭುತ್ವ ಸ್ಥಾಪಿಸಿದ ನಿದರ್ಶನವನ್ನು ಈ ಕಾದಂಬರಿ ಚಿತ್ರಿಸುತ್ತದೆ. ಹೀಗೆ ಕೆಳಜಾತಿ ಕೆಳವರ್ಗಗಳು ಹಾಗೂ ಶೂದ್ರರುಗಳನ್ನು ಜಾತಿ ವ್ಯವಸ್ಥೆಯಿಂದ ವರ್ಗವ್ಯವಸ್ಥೆಗೆ ಪಲ್ಲಟಗೊಂಡುದರ ಚಿತ್ರಣವನ್ನು ಈ ಕಾದಂಬರಿ ಕಟ್ಟಿಕೊಡುತ್ತದೆ.

ಕುವೆಂಪು ಚಿತ್ರಿಸಿರುವ ಮಹಿಳೆಯರು ತಮ್ಮ ಅಧಿಕಾರದ ನೆಲೆಗಳನ್ನು ಹುಡುಕುವ ಕಾರ್ಯದಲ್ಲಿ ಕ್ರಿಯಾಶೀಲರಾದ ಪಾತ್ರಗಳು. ರಾಷ್ಟ್ರೀಯ ಚಳುವಳಿಯ ಸಂದರ್ಭದಲ್ಲಿ ಸುಧಾರಣಾವಾದಿ ಚಿಂತನೆಗಳು ಹಾಗೂ ವಸಾಹತುಶಾಹಿ ಆಧುನಿಕ ಧೋರಣೆಗಳು ಪ್ರಭಾವಿಸಿದ ಪರಿಣಾಮವಾಗಿ ಚೆನ್ನಮ್ಮ, ಸೀತೆ, ಸುಬ್ಬಮ್ಮ ಮುಂತಾದವರು ರೂಪುಗೊಂಡಿದ್ದಾರೆ. ಇವರೆಲ್ಲರೂ ತಮ್ಮನ್ನೇ ಕುರಿತಾದ ಸಾಂಪ್ರದಾಯಿಕ ಮೌಲ್ಯಗಳನ್ನು ಪ್ರಶ್ನಿಸುವ ಪ್ರಯತ್ನ ಮಾಡಿದರು. ಕುವೆಂಪು ಅವರು, ಹೆಣ್ಣನ್ನು ಇಲ್ಲಿ ಹೆಚ್ಚು ಮಾನವೀಯವಾಗಿ ಕಾಣುತ್ತಾರೆ. ಹೆಣ್ಣು-ಗಂಡಿನ ಸಂಬಂಧವನ್ನು ಆಳವಾದ ವೈಚಾರಿಕ ನೆಲೆಯಲ್ಲಿ ನೋಡಿದ್ದಾರೆ.

"ಸುಬ್ಬಮ್ಮ ಎಷ್ಟು ಒರಟು ಹುಡುಗಿಯಾಗಿದ್ದಳೊ ಅಷ್ಟೇ ಅನಾಗರಿಕಳಾಗಿದ್ದಳು. ಅವಳು ಎಳೆಯ ಹೆಣ್ಣು ಎಂಬುದನ್ನು ಮರೆಯಬಾರದು. ಬಡತನದಲ್ಲಿಯೇ ಬೆಳೆದಿದ್ದ ಆಕೆಗೆ

ಶ್ರೀಮಂತರಾದ ಚಂದ್ರಯ್ಯಗೌಡರನ್ನು ಮದುವೆಯಾದುದು ಅತ್ಯಂತ ಹೆಮ್ಮೆಯಾಗಿತ್ತು ಎಂದೂ ಕಾಣದ ವಸನ ಭೂಷಣವನ್ನು ಕಂಡು ಕಣ್ಣು ಕೋರೈಸಿ ಹೋಗಿತ್ತು. ಚಂದ್ರಯ್ಯಗೌಡರೂ ಪ್ರಯತ್ನ ಪೂರ್ವಕವಾಗಿ ತಾವು ತರುಣರಾಗಿದ್ದಾಗ ಪ್ರಥಮ ವಿವಾಹದಲ್ಲಿ ಅನುಭವಿಸಿದ್ದ ಯೌವನದ ಕಾಲವನ್ನು ಮತ್ತೆ ಅನುಕರಿಸಿ, ಭಯಂಕರ ಧರ್ಮಾಧಿಕಾರಿಯಾಗಿರುವ ಕಾಲದೇವನನ್ನು ವಂಚಿಸಿದನೆಂದು ಊಹಿಸಿದರು".[4] ಈ ಹಿನ್ನೆಲೆಯಲ್ಲಿ ಸುಬ್ಬಮ್ಮ ಎಷ್ಟೇ ಅನಕ್ಷರಸ್ಥಳಾಗಿದ್ದರೂ ತುಂಬಾ ಕ್ರಿಯಾಶೀಲ ಚೇತನ ಅವಳದು. ಜೊತೆಗೆ ಸೌಂದರ್ಯಕ್ಕೇನು ಕಡಿಮೆ ಇರಲಿಲ್ಲ ಮತ್ತು ಎಳೆಯ ಹೆಣ್ಣು ಮಗಳು ಎಂಬುದನ್ನು ಮರೆಯಬಾರದು ಹಾಗೂ ಚಂದ್ರಯ್ಯಗೌಡರಿಗೂ ಮತ್ತು ಸುಬ್ಬಮ್ಮನಿಗೂ ವಯಸ್ಸಿನಲ್ಲಿ ತುಂಬಾ ಅಂತರವಿದೆ. ಆಗಿನ ಕಾಲದ ಮಲೆನಾಡಿಗರಿಗೆ ಎರಡು ಅಥವಾ ಮೂರು ಮದುವೆಗಳು ಆಗುವುದು ಒಂದು ಪೌರುಷದ ಸಂಕೇತವಾಗಿತ್ತು. ಚಂದ್ರಯ್ಯಗೌಡರಲ್ಲಿಯೂ ಬಹಿರಂಗದಲ್ಲಿ ದರ್ಪ, ದೌರ್ಜನ್ಯ, ಶೋಷಣೆ, ದಬ್ಬಾಳಿಕೆ ಮುಂತಾದವುಗಳು ಇದ್ದವು, ಆದರೆ ಅಂತರಂಗದಲ್ಲಿ ಎಲ್ಲವೂ ಟೊಳ್ಳುಗಳಾಗಿದ್ದವು. ಸುಬ್ಬಮ್ಮನ ಶರೀರದ ಚೆಲುವು ಮತ್ತು ದುಡಿಯುವ ಸಾಮರ್ಥ್ಯ, ದೈಹಿಕ ಗಟ್ಟಿತನ, ಚಟುವಟಿಕೆಯ ಸ್ವಭಾವ ಇವಕ್ಕೆಲ್ಲ ಏನು ಕಡಿಮೆ ಇಲ್ಲ. ಚಂದ್ರಯ್ಯಗೌಡರೂ ಇವುಗಳ ಯಾವುದರಿಂದಲೂ ಪ್ರಯೋಜನವಿಲ್ಲ, ಒಂದು ಮನೆಯನ್ನು ಕಟ್ಟಬೇಕಾದರೆ ಭೂಮಿಯ ಭದ್ರತೆ ಹಾಗೂ ತಳಪಾಯಗಳು ಬಹಳ ಮುಖ್ಯ. ಇಲ್ಲಿ ಮುಖ್ಯವಾಗಿ ಭೂಮಿಯು ಬಹಳ ಭದ್ರತೆಯಿಂದಲೂ ಮತ್ತು ಫಲವತ್ತತೆಯಿಂದಲೂ ಕೂಡಿದೆ. ಆದರೆ ಮನೆಯನ್ನು ನಿರ್ಮಾಣ ಮಾಡುವಂತಹ ವ್ಯಕ್ತಿಯು ಸರಿಯಾದ ಕೆಲಸವನ್ನು ನಿರ್ವಹಿಸದೆ ಶಕ್ತಿ ಹೀನನಾಗಿದ್ದಾನೆ. ಆದರೂ ಒಂದು ವೇಳೆ ಬಲವಂತವಾಗಿ ಮನೆಯನ್ನು ಕಟ್ಟಿಸಿದ್ದಂತಹ ಸಂದರ್ಭದಲ್ಲಿ ಮನೆಯು ಮುರಿದು ಬೀಳುವಂತಹ ಸಂದರ್ಭವು ಒದಗಿ ಬರುತ್ತದೆ. ಅಂದರೆ ಚಂದ್ರಯ್ಯಗೌಡರು ಇಳಿಯ ವಯಸ್ಸಿನಲ್ಲಿ ಸುಬ್ಬಮ್ಮನಂತಹ ರೂಪವಂತೆಯನ್ನು ಮದುವೆಯಾಗಿ ಕಾಲಕಾಲಕ್ಕೆ ಮನಸ್ಸಿನ ಇಚ್ಛೆಗಳನ್ನು ಈಡೇರಿಸದೆ ಇದ್ದ ಪಕ್ಷದಲ್ಲಿ ಸಂಸಾರವು ನಡೆಯದೇ ಮಧ್ಯದಲ್ಲಿಯೇ ಬಿರುಕು ಬೀಳುವುದನ್ನು ಈ ಕಾದಂಬರಿಯಲ್ಲಿ ಕಾಣಬಹುದು. ಕುವೆಂಪುರವರ ಕಾನೂರು ಹೆಗ್ಗಡಿತಿ ಕಾದಂಬರಿಯಲ್ಲಿ ಸ್ತ್ರೀಲೋಕದ ಶೋಷಣೆಯನ್ನು ಗಮನಿಸಿದಾಗ ಲಿಂಗಾದಾರಿತ ಶೋಷಣೆಯ ಸೂಕ್ಷ್ಮಾತಿಸೂಕ್ಷ್ಮ ಒಳದನಿಗಳೊಂದಿಗೆ ಬೃಹತ್ತಾಗಿ ಚಿತ್ರಿಸಿರುವುದನ್ನು ಕಾಣಬಹುದು. ಜೊತೆಗೆ ಪುರುಷ ಪ್ರಧಾನ ವ್ಯವಸ್ಥೆಗೆ ಹೆಣ್ಣು ಹೇಗೆ ಬದ್ಧಳಾಗಿದ್ದಾಳೆ, ಹಾಗೆಯೇ ಹೆಣ್ಣು ಅಧೀನತೆಯನ್ನು ಉಲ್ಲಂಘಿಸಿ ಅಧಿಕಾರದ ನೆಲೆಯತ್ತ ಸಾಗುವ ಸಾಂಸ್ಕೃತಿಕ ಪ್ರತಿಕ್ರಿಯೆಯನ್ನು ಈ ಕಾದಂಬರಿಯಲ್ಲಿ ಚಿತ್ರಿಸಲಾಗಿದೆ ಜೊತೆಗೆ ಸಂಸ್ಕೃತಿ ಸಂಘರ್ಷ, ಮೌಲ್ಯ ವಿಘಟನೆ ಮತ್ತು ಅವನತಿಗಳೆಲ್ಲ ತುಂಬಾ

ಸ್ಫುಟವಾಗಿ ಗಡಿರೇಖೆಗಳುಳ್ಳ ಆಕೃತಿಯಾಗಿ ಕಾಣಿಸಿಕೊಂಡಿರುವುದು ಬಹುಶಃ ಸುಬ್ಬಮ್ಮನ ಪಾತ್ರದಿಂದಲೇ ಪರಿಶೀಲಿಸಬಹುದಾಗಿದೆ. ಈ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣಿನ ಬಗ್ಗೆ ಅಸಮಾನತೆ, ತಾರತಮ್ಯಗಳು ಕಂಡು ಬಂದು ಇವುಗಳು ಊಳಿಗಮಾನ್ಯ ವ್ಯವಸ್ಥೆಯ ಸಂದರ್ಭದಲ್ಲಿಯೂ ತನ್ನ ನೆಲೆಗಳನ್ನು ಗಟ್ಟಿಗೊಳಿಸಿಕೊಂಡವು ಜೊತೆಗೆ ಈ ಪುರುಷ ಪ್ರಧಾನ ವ್ಯವಸ್ಥೆಯು ಹೆಣ್ಣನ್ನು ತನ್ನ ದಾಸಿಯನ್ನಾಗಿ ಮಾಡಿಕೊಂಡಿರುವುದನ್ನು ಈ ಕಾದಂಬರಿಯಲ್ಲಿ ಗಮನಿಸಬಹುದು. ಕುವೆಂಪುರವರು ಎಲ್ಲಾ ಕಾಲಕ್ಕೂ ಎಲ್ಲಾ ಬಗೆಯ ವ್ಯಕ್ತಿತ್ವಗಳನ್ನು ಗುರುತಿಸಿ ಗೌರವಿಸುತ್ತಾ ಬಂದವರು. ಊಳಿಗಮಾನ್ಯ ವ್ಯವಸ್ಥೆಯ ಸಂದರ್ಭದಲ್ಲಿ ಹೆಣ್ಣಿಗೆ ಸ್ವಾತಂತ್ರ್ಯವೆಂಬುದೆ ಇರಲಿಲ್ಲ. ಯಾವಾಗಲೂ ಸಾಮಾಜಿಕ ಉದಾಸೀನಕ್ಕೆ ತಿರಸ್ಕಾರಕ್ಕೆ ಶೋಷಣೆಯ ಗುರಿಯಾಗಿದ್ದು ಸರಿಸಮನಾದ ಅವಕಾಶಗಳು ಇರಲಿಲ್ಲ. ಗಂಡಿನ ಎದುರು ನಿಂತು ಮಾತನಾಡುವ ಧೈರ್ಯವು ಇರಲಿಲ್ಲ, ಈ ಪುರುಷ ಪ್ರಧಾನ ವ್ಯವಸ್ಥೆಯು ಹೆಣ್ಣನ್ನು ಹೆಸರಿಡಿದು ಕರೆಯದೆ ಪ್ರಾಣಿಗಳನ್ನು ಸಂಬೋಧಿಸುವಂತೆ ಅದು ಇದು ಎಂದು ಸಂಬೋಧಿಸಲಾಗುತ್ತಿತ್ತು. ಅನಕ್ಷರತೆ, ಅಜ್ಞಾನ, ಮೌಢ್ಯ, ಇವುಗಳು ಹೆಣ್ಣಿನ ಬದುಕನ್ನು ಅಂಧಕಾರಕ್ಕೆ ಇಳಿಸಿದವು. ಇದಿಷ್ಟೆ ಅಲ್ಲದೆ, ತುಂಬಿ ತುಳುಕುತ್ತಿದ್ದಂತಹ ಶೋಷಣೆ ಇದ್ದರೂ ಒಂದು ವರ್ಗ ತನಗಾಗಿ ಈ ವ್ಯವಸ್ಥೆಯ ವಿರುದ್ಧ ತನ್ನ ನಿಲುವುಗಳನ್ನು ಪ್ರತಿಪಾದಿಸುವುದಕ್ಕೆ ಆಗುವುದಿಲ್ಲ. ತುಂಬಾ ಕ್ರಿಯಾಶೀಲ ಚೇತನ ಅವಳದು ಬದುಕಿನಲ್ಲಿ ಕಿಂಚಿತ್ತು ಸುಖವನ್ನೂ ಕಾಣದ ಸ್ತ್ರೀ ಇವಳು ಮತ್ತು ಪರಿಸ್ಥಿತಿಯ ವಿರುದ್ಧ ಪ್ರತಿಭಟನೆ ಮಾಡದೆ ರಾಜಿ ಮಾಡಿಕೊಳ್ಳುತ್ತಾ ಅವಕಾಶ ಸಿಕ್ಕಿದಾಗ ಪ್ರಬಳಳೂ ಆಗುವ ಸ್ವಭಾವ ಸುಬ್ಬಮ್ಮನ ಮೇಲೆ ಅನುಮಾನಗಳು ಬಂದು ಚಂದ್ರಯ್ಯಗೌಡರು ಸುಬ್ಬಮ್ಮನನ್ನು ಕೊಲ್ಲಲು ಬಂದಾಗ ತಪ್ಪಿಸಿಕೊಂಡು ತವರಿಗೆ ಓಡುತ್ತಾಳೆ. ತವರಿಗೆ ಬಂದರೂ ಸುಬ್ಬಮ್ಮ ನೆಮ್ಮದಿಯಾಗಿ ಬಾಳಲು ಸಮಾಜವು ಬಿಡುವುದಿಲ್ಲ. ಹೆಣ್ಣು ಸಂಸಾರದಿಂದ ವಂಚಿತಳಾಗಿ ಸಮಾಜದಲ್ಲಿ ಬದುಕುವುದು ಸ್ವಲ್ಪ ಕಷ್ಟದ ಕೆಲಸ, ಏಕೆಂದರೆ ಆ ಹೆಣ್ಣು ಮಗಳನ್ನು ನೋಡುವಂತಹ ದೃಷ್ಟಿಕೋನವು ಬೇರೆಯಾಗಿರುತ್ತದೆ. ಜೊತೆಗೆ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಅಧಿಕಾರ ಇವರ ಕೈಯಲ್ಲಿರುವುದರಿಂದ ಹೆಣ್ಣಿಗೆ ಸ್ವಾತಂತ್ರ್ಯವೆಂಬುದೆ ಇಲ್ಲ. ಸುಬ್ಬಮ್ಮ ತನ್ನ ಗಂಡನ ಮನೆಯನ್ನು ತೊರೆದು ಬಂದು ತವರು ಸೇರಿದರೂ ಅಲ್ಲಿಯೂ ಅವಳಿಗೆ ಸುಖವೆಂಬುದು ಕಾಣಲಾಗುವುದಿಲ್ಲ. ಜೊತೆಗೆ ಬಡತನವು ಮದುವೆಗೆ ಮೊದಲು ಸಹ ತನ್ನ ತವರು ಮನೆಯಲ್ಲಿದ್ದು ಅದರಲ್ಲಿ ತನ್ನನ್ನೂ ತಾನು ತೊಡಗಿಸಿಕೊಳ್ಳುತ್ತಾಳೆ. ಈ ಎಲ್ಲಾ ಹೋರಾಟಗಳು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವ ನೆಲೆಗಳು ಈ ಕಾದಂಬರಿಯಲ್ಲಿ ಪ್ರಧಾನವಾಗಿ ಕಾಣುತ್ತೇವೆ. ವಸಾಹತುಶಾಹಿಯ ಸಂದರ್ಭದಲ್ಲಿ ಈ ಎಲ್ಲಾ ಮಾದರಿಗಳು ಪಲ್ಲಟಗೊಂಡವು. ಆಧುನಿಕ ವಿದ್ಯಾಭ್ಯಾಸ, ತಂತ್ರಜ್ಞಾನ,

ಕ್ರೈಸ್ತ ಮಿಷನರಿಗಳ ಕೊಡುಗೆಯಿಂದ ಹೇಗೆ ಒಂದು ವ್ಯವಸ್ಥೆಯಲ್ಲಿದ್ದಂತಹ ಸಿದ್ಧ ಮಾದರಿಗಳು ಜಡಗೊಂಡಿದ್ದವೊ ಅವುಗಳನ್ನು ವಸಾಹತುಶಾಹಿ ಛಿದ್ರಗೊಳಿಸಿತು.

"ಸುಬ್ಬಮ್ಮ ಮನಃಸ್ಥಿತಿಯ ಮಾವಿನಕಾಯಿಯೂ ಸೇರೆಗಾರರ ಒಲುಮೆ ಗಿಳಿಯ ಕೊಕ್ಕಿನ ಕುಟುಕಿಗೆ ಯೋಗ್ಯವಾಗುವಂತೆ ಹಣ್ಣಾಗುತ್ತಿತ್ತು. ಒಗರನ್ನೂ ಹುಳಿಯನ್ನೂ ಗಟ್ಟಿಯನ್ನು ಮೆಲ್ಲಮೆಲ್ಲನೆ ಬಿಡುತ್ತಾ ಸಿಹಿಯಾಗುತ್ತಿತ್ತು. ಕಾಯಾಗಿದ್ದಾಗ ಮರವನ್ನಾಗಲಿ ಕೊಂಬೆಯನ್ನಾಗಲಿ ಅಲುಗಾಡಿಸಿದರೆ ಕೆಳಗೆ ಬೀಳದಿದ್ದುದು, ಚೆನ್ನಾಗಿ ಹಣ್ಣಾದ ಮೇಲೆ ಬೀಳದಿರುತ್ತದೆಯೆ? ಕೈವಶವಾಗದಿರುತ್ತದೆಯೇ?"[5] ಈ ಹಿನ್ನೆಲೆಯನ್ನು ಗಮನಿಸಿದಾಗ ಸುಬ್ಬಮ್ಮ ಮತ್ತು ಸೇರೆಗಾರನ ನಡುವಿನ ಲೈಂಗಿಕ ಸಂಬಂಧವು ವಿಪರೀತವಾದಂತಹ ಸಂದರ್ಭದಲ್ಲಿ ಸೇರೆಗಾರನ ನೀಚ ಸಹವಾಸದಿಂದ ಸುಬ್ಬಮ್ಮನು ಗರ್ಭಿಣಿಯಾಗುತ್ತಾಳೆ. ಒಂದು ಕಡೆ ಅಸಮರ್ಥನಾದ ಗಂಡನಿಂದ ಪಡೆಯದೆ ಇದ್ದಂತಹ ಸುಖವನ್ನು ಸೇರೆಗಾರನಿಂದ ಪಡೆದುಕೊಳ್ಳುತ್ತಾಳೆ. ಅಂದರೆ ಫಲವತ್ತಾದ ಭೂಮಿಯನ್ನು ಹಸನು ಮಾಡಿ ಮುಂಗಾರಿನ ಸಂದರ್ಭದಲ್ಲಿ ಬೀಜವನ್ನು ಬಿತ್ತದೆ ಹೋದರೆ ಏನು ಪ್ರಯೋಜನ? ಮುಂಗಾರಿನ ಬೀಜವನ್ನು ಚಂದ್ರಯ್ಯಗೌಡರಿಂದ ಬಿತ್ತಲು ಆಗದ ಕಾರಣ ಅದನ್ನು ಸೇರೆಗಾರರು ಬಿತ್ತುತ್ತಾರೆ. ಸುಬ್ಬಮ್ಮ ಊಹಿಸದೆ ಇರುವಷ್ಟು ಒಂದು ಅತಂತ್ರ ಸ್ಥಿತಿಗೆ ಸಿಲುಕಿಕೊಳ್ಳುತ್ತಾಳೆ. ಮುಂಡೆಯಾದಂತಹ ಸುಬ್ಬಮ್ಮ ಗರ್ಭಿಣಿಯಾಧಂತಹ ಸಂದರ್ಭದಲ್ಲಿ ಸಹಿಸಲಾರದ ಅವಮಾನಗಳಾಗುತ್ತವೆ. ಭಾರತೀಯ ಸಮಾಜದಲ್ಲಿ ಶೂದ್ರ ಸಮುದಾಯವು ಪ್ರಬಲವಾಗಿರುವುದರಿಂದ ಜಾತಿಯಿಂದ ಹೊರ ಹಾಕುತ್ತಾರೆ. ಜೊತೆಗೆ ಮನೆತನದ ಹೆಸರಿಗೆ ಕಳಂಕ ಉಂಟಾಗುತ್ತದೆ. ಸಮಾಜವು ಒಂದು ರೀತಿಯ ಕೀಳರಿಮೆಯ ದೃಷ್ಟಿಯಿಂದ ಕಾಣುತ್ತದೆ. ಇವೆಲ್ಲವೂ ಸುಬ್ಬಮ್ಮನಿಗೆ ತಿಳಿದಿದ್ದರೂ ಸಹ ಕಾಮ ಎಂಬ ಮೋಜಿಗೆ ಸಿಲುಕಿ ಕಷ್ಟವನ್ನು ಅನುಭವಿಸುತ್ತಾಳೆ. ಸುಬ್ಬಮ್ಮ ಮದುವೆಯಾದರೂ ಸಹ ಬಂಜೆ ಎಂಬ ಪಟ್ಟವನ್ನು ಕಟ್ಟಿಕೊಂಡಿರುತ್ತಾಳೆ. ಏಕೆಂದರೆ ಚಂದ್ರಯ್ಯಗೌಡರು ಮುದಿವಯಸ್ಸಿನಲ್ಲಿ ಸುಬ್ಬಮ್ಮನ್ನು ಮದುವೆಯಾಗಿರುವುದರಿಂದ ಯಾವುದೇ ರೀತಿಯಲ್ಲಿ ಸುಖವನ್ನು ನೀಡಲು ಅಸಮರ್ಥನಾಗಿರುತ್ತಾನೆ. ಸುಬ್ಬಮ್ಮ ಎರಡು ರೀತಿಯ ಸಮಸ್ಯೆಗಳಿಗೆ ಸಿಲುಕಿಕೊಳ್ಳುತ್ತಾಳೆ. ಒಂದು ಕಡೆ ಸುಬ್ಬಮ್ಮ ಬಂಜೆ ಎಂಬ ಹೆಣ್ತನಕ್ಕೆ ಅಂಟಿದ ಕಳಂಕವನ್ನು ತೊಡೆಯಿತಲ್ಲಾ ಎಂದು ಸಂತೋಷಪಟ್ಟರೆ ಮತ್ತೊಂದು ಕಡೆ ಗಂಡ ಸತ್ತ ನಂತರ ಮಗುವನ್ನು ಹಡಿದವಳಲ್ಲ ಎಂಬ ಸಮಸ್ಯೆಯು ಎದುರಾಗುವ ಸಂದರ್ಭ ಒದಗಿ ಬಂದಿದೆ ಮತ್ತು ಕಾನೂರು ಹೆಗ್ಗಡಿತಿ ಕಾದಂಬರಿಯಲ್ಲಿ ಸ್ತ್ರೀ ಸಮುದಾಯವು ರೂಢಿಗತ ಅಧೀನ ನೆಲೆಯನ್ನು ಉಲ್ಲಂಘಿಸಿ

ಅಡಿಗನ್ನಡ ಗ್ರಂಥಾಲಯ.
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಅಧಿಕಾರಕ್ಕೇರಿದ ಹೆಣ್ಣಿನ ನೆಲೆಯ ಸೂಚಕವಾಗಿದೆ. ಹೆಣ್ಣು ಅಧೀನದಿಂದ ಸರಿದು ಅಧಿಕಾರದ ನೆಲೆಯತ್ತ ಸಾಗುವ ಸಂದರ್ಭದಲ್ಲಿ ಯಾವ ರೀತಿಯಲ್ಲಿ ಪಲ್ಲಟ ಉಂಟಾಯಿತು ಎಂಬುದನ್ನು ಈ ಕಾದಂಬರಿಯಲ್ಲಿ ಗ್ರಹಿಸಬಹುದು. ಸುಬ್ಬಮ್ಮ ಅನೇಕ ದ್ವಂದ್ವಗಳ ಮತ್ತು ಆಂತರಿಕ ಹೊಯ್ದಾಟಗಳಿಗೆ ತಾಣವಾದ ಅತ್ಯಂತ ಸಂಕೀರ್ಣವಾದ ವ್ಯಕ್ತಿತ್ವವುಳ್ಳವಳು. ಕುಸಂಸ್ಕೃತಿಗೆ ಸಮಗ್ರ ನೆಲೆಯನ್ನು ಪ್ರತಿನಿಧಿಸುವ ಹೂವಯ್ಯನಿಗೆ ಸರಿಸಮನಾಗಿ ನಿಲ್ಲುವಂತವಳು. ಸುಬ್ಬಮ್ಮನ ಬಲಿಷ್ಠ ಹೆಣ್ತನದ ಅರಿವು ಹೂವಯ್ಯನಲ್ಲಿಯೂ ಆರಂಭದಿಂದಲೂ ಕಾಣಬಹುದು. ಸುಬ್ಬಮ್ಮನ ಬದುಕು ಅನಾಗರಿಕತೆಯಿಂದ ಗರ್ಭಪಾತಕ್ಕೆ ಬಲಿಯಾಗುತ್ತಾಳೆ. ಸಾವಿನಲ್ಲಿಯೂ ಸಮಾಜದ ಕೆಟ್ಟ ದೃಷ್ಟಿಯಿಂದ ಪಾರಾಗಿಲ್ಲ. ಅವಳು ರಕ್ತದ ಮಡುವಿನಲ್ಲಿ ಸತ್ತು ಬಿದ್ದಿರುವ ಸ್ಥಿತಿಯನ್ನು ಕಂಡು ರಾಮಯ್ಯ ತನ್ನ ಮನೆತನಕ್ಕೆ ಮಸಿ ಬಳಿದವಳೆಂಬ ಅಸಹ್ಯದಿಂದ ಸಾವಿಗೆ ಶರಣಾಗುತ್ತಾನೆ. ಪುಟ್ಟಣ್ಣ ಅವಳ ಸಾವಿನ ಮೂಲವನ್ನೇ ಹುಡುಕಿ ಅನೈತಿಕ ಪಿಂಡವನ್ನು ಹೂವಯ್ಯನ ಕಣ್ಣಿಗೆ ಬೀಳದಿರಲೆಂದು ಗುಟ್ಟಾಗಿ ಶುಚಿಗೊಳಿಸುತ್ತಾನೆ. ಹೂವಯ್ಯ ಅಲ್ಲಿಗೆ ಬರುವ ವೇಳೆಗೆ ಸುಬ್ಬಮ್ಮ ತೊಳದಿಟ್ಟ ಪರಿಶುದ್ಧವಾದ ಶವವಾಗಿರುತ್ತಾಳೆ. ಅಂದರೆ ಒಂದು ಸಾಮಾನ್ಯ ಸಾವಿನ ತರಹ ಎಂಬುದನ್ನು ಗ್ರಹಿಸಬಹುದು. ಈ ಮರಣದ ಸ್ಥಿತಿ ಓದುಗರ ಮನದಲ್ಲಿ ಎಷ್ಟು ಗಾಢವಾಗಿ ಪರಿಣಾಮವನ್ನುಂಟು ಮಾಡುತ್ತದೆಂದರೆ ಆಕೆ ಒಮ್ಮೆ ಸ್ವತಃ ಹೆಗ್ಗಡಿತಿಯಾಗಿ ಮೆರೆದಿದ್ದ ವಿಜಯದ ವೀರನಾಯಕಿಯಾಗಿದ್ದಳು ಎಂಬುದು ಈ ಸಾವಿನೆದುರು ಮತ್ತಷ್ಟು ಅನುಕಂಪಕ್ಕೆ ಅರ್ಹವಾಗುತ್ತದೆ.

048599

"ಗೋಡೆಯ ಮೇಲೆ ಸೀತೆಯ ಪ್ರೇಮ ಶಾಸನವನ್ನು ಓದಿದಾಗ ಅಂತರಿಕ್ಷದಲ್ಲಿ ಸಂಚರಿಸುತ್ತಿದ್ದ ಅವನ ಮನಸ್ಸು ಮತ್ತೆ ಭೂಮಿಗಿಳಿದು ಮುತ್ತಳ್ಳಿಗೆ ಬಂದಿತು. ಬರೆಗಣ್ಣಿನಲ್ಲಿ ಸೀತೆಯ ಮೂರ್ತಿ ಮೂಡಿತು. ಆ ರಮಣಿ ಎನಿತು ಸುಂದರವಾಗಿದ್ದಾಳೆ! ಪ್ರೇಮ ಮಾಧುರ್ಯ ತುಂಬಿದಂತಿದೆ! ಅಲ್ಲಿ ತುಂಬಿದ ಪ್ರೇಮ ಮಾಧುರ್ಯ ಕೆಂದುಟಿಗಳಲ್ಲಿ ಹೊರಸೂಸುವಂತಿದೆ! ಹೂವಯ್ಯ ಮನಸ್ಸಿನಲ್ಲಿ ಆ ಮೂರ್ತಿಯನ್ನು ಆಲಂಗಿಸಿ ಚುಂಬಿಸಿದನು. ಕಿಟಕಿಯಲ್ಲಿ ಕಂಡ ನಕ್ಷತ್ರ ಅವನನ್ನು ದೂರದೂರಕ್ಕೆ ಎಳೆದೊಯ್ದು ಈ ಪ್ರಪಂಚವನ್ನು ಅದರ ವ್ಯಾಪಾರವನ್ನು ಕ್ಷುದ್ರವಾಗಿ ಕಾಣುವಂತೆ ಮಾಡಿಬಿಟ್ಟಿತು".[6] ಈ ಹಿನ್ನೆಲೆಯಲ್ಲಿ ಹಳ್ಳಿಯಿಂದ ನಗರಕ್ಕೆ ಆಧುನಿಕ ವಿದ್ಯಾಭ್ಯಾಸಕ್ಕೆಂದು ಹೂವಯ್ಯ ಮತ್ತು ರಾಮಯ್ಯ ಈ ಇಬ್ಬರು ರಜಾದಿನಗಳನ್ನು ತಮ್ಮ ಹಳ್ಳಿಯಲ್ಲಿ ಕಳೆಯುವುದಕ್ಕೆ ಹಿಂದಿರುಗುತ್ತಾರೆ. ಕಾದಂಬರಿಯ ಆರಂಭದಲ್ಲಿ ಗಾಡಿ ನಿಂಗನು ತನ್ನ ಅಲಕ್ಷ್ಯದ ಮೂಲಕ ಗಾಡಿ ಬಂಡಿ ಉರುಳಿ ಹೂವಯ್ಯನ ಬೆನ್ನಿಗೆ ಗಾಯವಾಗುತ್ತದೆ. ಹೂವಯ್ಯ ಮತ್ತು ರಾಮಯ್ಯ ಮುತ್ತಳ್ಳಿಯ ಶ್ಯಾಮಯ್ಯಗೌಡರ ಮನೆಯಲ್ಲಿ ಸ್ವಲ್ಪದಿನಗಳ ಕಾಲ ಇರಬೇಕಾದ

ಸಂದರ್ಭ ಒದಗಿಬಂದಾಗ ಹೂವಯ್ಯ ಸೀತೆಯ ಸನಿಹದಲ್ಲೇ ಕಾಲಕಳೆದನು. ಕೆಲವು ದಿನಗಳ ಬಳಿಕ ಹೂವಯ್ಯ ಮತ್ತು ಸೀತೆ ನಡುವೆ ಪರಸ್ಪರ ನೋಡುವುದು ಪರಸ್ಪರ ಹೃದಯಭಾವಗಳನ್ನರಿತುಕೊಳ್ಳುವುದು ಮತ್ತು ಕಾಲ ನಂತರದಲ್ಲಿ ಆಕೆಯನ್ನು ತೀವ್ರವಾಗಿ ಪ್ರೀತಿಸತೊಡಗುವುದು ಮುಂತಾದ ಅನೇಕ ಸನ್ನಿವೇಶಗಳು ಕಾದಂಬರಿಯ ಉದ್ದಕ್ಕೂ ಕಾಣಿಸಿಕೊಳ್ಳುತ್ತವೆ. ಸೀತೆ ಅನಕ್ಷರಸ್ಥೆಯಾಗಿದ್ದರೂ ಹೂವಯ್ಯನ ಪ್ರಭಾವದಿಂದ ಚಿಂತಿಸುವುದರಲ್ಲಿ ಸ್ವಲ್ಪ ಸಾಮರ್ಥ್ಯವನ್ನು ಹೊಂದಿದ್ದಳು ಸೀತೆ ಮತ್ತು ಹೂವಯ್ಯ ಇಬ್ಬರ ಪ್ರೀತಿ ಆದರ್ಶವಾದದ್ದು. ಸೀತೆಯ ಆದರ್ಶ ವ್ಯಕ್ತಿತ್ವದ ಬಗ್ಗೆ ಹಲವು ಕನಸುಗಳನ್ನು ಕಟ್ಟಿದ್ದಳು. ತಾನು ಸಾವಿತ್ರಿಯಂತೆ, ಚಂದ್ರಮತಿಯಂತೆ ಎಂಬ ಕನಸುಗಳು ನುಚ್ಚುನೂರಾದವು. ಹೂವಯ್ಯ ಮತ್ತು ಸೀತೆಯ ಬದುಕನ್ನು ವಿವರಿಸುವುದು ಒಂದು ಆದರ್ಶ ನೆಲೆಯನ್ನು ಸಂಕೇತಿಸುತ್ತದೆ. ಈ ಎರಡು ಜೋಡಿಗಳನ್ನು ವ್ಯವಸ್ಥೆಯು ಸರಿಸಮನಾಗಿ ಬದುಕಲು ಅವಕಾಶ ಮಾಡಿಕೊಡುವುದಿಲ್ಲ. ಹೂವಯ್ಯ ಮತ್ತು ಸೀತೆಯು ಮನಸಾರೆ ಪ್ರೀತಿಸುತ್ತಿರುತ್ತಾರೆ. ಆದರೆ ಯಾವ ಸಂದರ್ಭದಲ್ಲಿಯೂ ಒಬ್ಬರಿಗೊಬ್ಬರು ಪ್ರಸ್ತಾಪ ಮಾಡುವುದಿಲ್ಲ. ಸೀತೆಯು ತನ್ನ ಅಂತರಂಗದಲ್ಲಿ ಪ್ರಿಯತಮನಿಗಾಗಿ ಆರಾಧಿಸುತ್ತಾಳೆ. ಸೀತೆಯ ಪ್ರೀತಿ ಎಂಥ ಪ್ರಾಮಾಣಿಕವಾದುದೆಂದರೆ ಒಂದು ಒಣಗಿ ಹೋಗುವಂತಿರುವ ಬಳ್ಳಿ ಕುಡಿವೊಡೆಯುವಂತೆ ಹೂವಯ್ಯನಲ್ಲಿಗೆ ಸೀತೆ ಹರಿದುಕೊಂಡು ಬಂದು ಹೆಣೆದುಕೊಂಡಳು. ಕಾದಂಬರಿಯಲ್ಲಿ ಒಬ್ಬ ಪ್ರೀತಿಯ ತಪಸ್ವಿನಿಯ ಹೆಣ್ಣಾಗಿ ಕಂಡು ಬರುತ್ತಾಳೆ ಮತ್ತು ಸೀತೆಯ ಪ್ರೀತಿ ಎಷ್ಟು ಗಟ್ಟಿಯಾಗಿ ಪರಿಣಾಮಕಾರಿಯುಂಟು ಮಾಡಿತು ಎಂಬುದನ್ನು ಈ ಕಾದಂಬರಿಯಲ್ಲಿ ಗ್ರಹಿಸಬಹುದು. ಜೊತೆಗೆ ವ್ಯವಸ್ಥೆಯು ಹೇರುವ ಅನ್ಯಾಯದ ಅಂಶಗಳನ್ನು ಹಲವಾರು ಸ್ತ್ರೀಯರು ತಮ್ಮದೇ ಆದಂತಹ ರೀತಿಯಲ್ಲಿ ವಿರೋಧಿಸುತ್ತಾರೆ. ಅಂದರೆ ಸೀತೆ ಮತ್ತು ಹೂವಯ್ಯರ ನಡುವೆ ಪ್ರೇಮದ ಬೆಸುಗೆ ಆಗಿದ್ದರೂ ಸಹ ವೆಂಕಪಯ್ಯಜೋಯಿಸರ ಕುತಂತ್ರದಿಂದ ಈ ಮದುವೆಗೆ ವಿರೋಧ ವ್ಯಕ್ತವಾಗುತ್ತದೆ. ಸೀತೆ ಪ್ರೀತಿಯಿಂದ ವಂಚಿತಳಾಗಿ ಕೊನೆಗೆ ಒಲ್ಲದ ಮನಸ್ಸಿನಿಂದ ಜೊತೆಗೆ ಚಂದ್ರಯ್ಯಗೌಡರ ದಬ್ಬಾಳಿಕೆ, ಕ್ರೌರ್ಯದಿಂದ ರಾಮಯ್ಯನೊಂದಿಗೆ ಮದುವೆಯಾಗುತ್ತಾಳೆ. ಆದರೂ ಸೀತೆ ರಾಮಯ್ಯನ ಜೊತೆ ಸಂಸಾರವನ್ನು ಮಾಡದೆ ಪ್ರತಿಭಟಿಸುತ್ತಾಳೆ. ರಾಮಾಯಣದಲ್ಲಿ ಬರುವಂತಹ ಸೀತೆಯನ್ನು ತೆಗೆದುಕೊಂಡಾಗ ರಾಮನು ಮಾಡುವಂತಹ ನೀಚ ಕೆಲಸದಿಂದ ಕಾಡಿಗೆ ಹೋಗುವುದರ ಮೂಲಕ ಮೌನ ಪ್ರತಿಭಟನೆಯನ್ನು ಮಾಡುತ್ತಾಳೆ. ರಾಮನಿಗೆ ಸೀತೆಯ ಪ್ರೀತಿ, ಮಮತೆ ಇವುಗಳು ಮುಖ್ಯವಾಗುವುದಿಲ್ಲ ಇವನಿಗೆ ರಾಜ್ಯವನ್ನು ಆಳುವುದಕ್ಕೆ ವಂಶೋದ್ಧಾರಕರು ಬೇಕೆ ವಿನಹ ಸೀತೆ ಬೇಕಾಗುವುದಿಲ್ಲ. ನಿನ್ನ ಮಕ್ಕಳನ್ನು ಕರೆದುಕೊಂಡು ಹೋಗು ಎನ್ನುತ್ತಾಳೆ.. ಸೀತೆಯ ಮನಸ್ಸಿನಲ್ಲಿ ರಾಮನನ್ನು ಕಂಡರೆ

ಉಗ್ರ ಪ್ರತಿಭಟನೆ ಮತ್ತು ಮೌನದ ಪ್ರತಿಭಟನೆ ಎರಡೂ ವ್ಯಕ್ತವಾಗುತ್ತದೆ. ಕಾನೂರು ಹೆಗ್ಗಡಿತಿ ಕಾದಂಬರಿಯಲ್ಲಿ ಸೀತೆಗೆ ತನ್ನ ಆಯ್ಕೆಯ ಸ್ವಾತಂತ್ರ್ಯದ ಅಪೇಕ್ಷೆಯನ್ನು ಪ್ರಕಟಿಸುವ ಧೈರ್ಯ ಸಾಲದೆ ಬದುಕಿನಲ್ಲಿ ಯಾತನೆ, ನೋವುಗಳನ್ನು ಅನುಭವಿಸುತ್ತಾಳೆ. ಪುರುಷ ಪ್ರಧಾನ ಕುಟುಂಬದಲ್ಲಿ ಹೆಣ್ಣಿನ ಸ್ವಾತಂತ್ರ್ಯದ ಬಗ್ಗೆ ಕೆಲವರು ವಿರೋಧಿಸುತ್ತಾರೆ ಮತ್ತೆ ಕೆಲವರು ಸ್ತ್ರೀಯರಿಗೆ ಸಮಾನತೆಯನ್ನು ಕೊಡಿ ಅಂದರೆ ಸ್ತ್ರೀ ಸಮುದಾಯವು ವ್ಯವಸ್ಥೆಯೊಂದರಲ್ಲಿ ಅದನ್ನೊಪ್ಪಿ ಪಾಲಿಸಿ ಮುಂದುವರಿಸುವವರು ಇರುವಂತೆಯೇ ಅದನ್ನು ತಮ್ಮದೇ ರೀತಿಗಳಿಂದ ಪ್ರತಿಭಟಿಸುವವರೂ ಇರುತ್ತಾರೆ. ಬಹಳಷ್ಟು ಸಂದರ್ಭಗಳಲ್ಲಿ ಈ ಪ್ರತಿಭಟನೆ ಅಥವ ವಿರೋಧ ಎಂಬುಧು ಪ್ರಜ್ಞಾಪೂರ್ವಕವಾದ ಬಂಡಾಯದ ಆಯ್ಕೆ ಆಗುವುದಿಲ್ಲ. ಈ ವಿರೋಧದ ಪ್ರತಿಕ್ರಿಯೆಯು ಉಳಿವು-ಅಳಿವಿನ ಪ್ರಶ್ನೆ ಎದುರಾದಾಗ ಜೀವವು ತನ್ನನ್ನು ಉಳಿಸಿಕೊಳ್ಳಲು ನಡೆಸುವ ಹೋರಾಟವಾಗಿರುವುದೇ ಹೆಚ್ಚು ಅಥವಾ ಒಪ್ಪಿತ ವ್ಯವಸ್ಥೆಯ ನೈತಿಕ ಮೌಲ್ಯಗಳು ಸುಪ್ತವಾಗಿ ಪ್ರಜ್ಞೆಯಲ್ಲಿದ್ದು ತದ್ವಿರುದ್ಧ ಸಂದರ್ಭದಲ್ಲಿ ತೋರುವ ಪ್ರತಿಭಟನೆ ಕೂಡ ಅದಾಗಿರಬಹುದು. ಕಾದಂಬರಿಯಲ್ಲಿ ಸೀತೆ ಮತ್ತು ಹೂವಯ್ಯನ ಜೊತೆಗಿನ ಮದುವೆಗೆ ತೋರುವ ರೋಗ, ಹುಚ್ಚು, ಪ್ರಜ್ಞಾಪೂರ್ವಕ ನಂಬಿಕೆಗಳಿಗಿಂತ ಹೆಚ್ಚಾಗಿ ಸುಪ್ತ ಪ್ರಜ್ಞೆ ಹೂಡುವ ಮನೋ-ದೈಹಿಕ ಪ್ರತಿಕ್ರಿಯೆಯಾಗಿ ತೋರುತ್ತದೆ. ಆದರೆ ಮದುವೆ ನಡೆದು ಹೋಗಿ ರಾಮಯ್ಯನೊಂದಿಗೇ ದಾಂಪತ್ಯ ನಡೆಸುವುದು ಅನಿವಾರ್ಯವಾಗಿ ಹೇರಲ್ಪಟ್ಟಾಗ ಚಂದ್ರಯ್ಯಗೌಡರ ಕ್ರೂರ ದಬ್ಬಾಳಿಕೆಗೆ ಅಂಜಿ ಆಕೆ ಮನೆಯಿಂದ ಪಲಾಯನ ಮಾಡುವುದು ಒಂದು ರೀತಿಯ ಕ್ರಿಯಾ ರೂಪದ ಪ್ರತಿಭಟನೆ ಆಗುತ್ತದೆ. ಹಾಗೆಯೇ ಸುಬ್ಬಮ್ಮನಿಗೆ- ನೀನು ಸೇರೆಗಾರರ ಜೊತೆ ಅನೈತಿಕ ಸಂಬಂಧ ಇಟ್ಟುಕೊಂಡಿದ್ದೀಯ ಎಂಬ ಆಪಾದನೆಯನ್ನು ಹೊರಿಸಿ ಚಂದ್ರಯ್ಯಗೌಡರು ಸುಬ್ಬಮ್ಮನನ್ನು ಕೊಲ್ಲುವುದಕ್ಕೆ ಪ್ರಯತ್ನಿಸಿದ ಸಂದರ್ಭದಲ್ಲಿ ಇದರಿಂದ ತಪ್ಪಿಸಿಕೊಂಡು ತನ್ನ ತವರು ಮನೆಗೆ ಪಲಾಯನ ಮಾಡುತ್ತಾಳೆ.

"ಒಂದು ಸಾರಿ ಊಟ ಮಾಡುತ್ತಿದ್ದಾಗ ಗೌಡರ ತಲೆಯಲ್ಲಿ ಹೆಂಡತಿ ತನ್ನನ್ನು ಕೊಲ್ಲಲೆಂದು ಪಲ್ಯಕ್ಕೆ ವಿಷ ಹಾಕಿದ್ದಾಳೆ ಎಂಬ ಭಾವ ಸ್ಫುರಿಸಿ 'ಪಲ್ಯಕ್ಕೆ ಏನು ಹಾಕಿದ್ದೀಯಾ? ಒಳ್ಳೆ ಮಾತಿನಲ್ಲಿ ಹೇಳ್ತೀಯೋ ಇಲ್ಲವೋ?' ಎಂದು ಜಡೆ ಹಿಡಿದು ಅಲುಗಿಸಿದರು. 'ಉಪ್ಪು ಕಾರ ಹುಳಿ ಹಾಕಿದ್ದೀನಿ! ಮತ್ತೇನು ಹಾಕ್ತೀನಿ?' ಎಂದು ಸುಬ್ಬಮ್ಮ ಮುನಿದು ಹೇಳಿದಳು. ಗೌಡರು 'ಸುಳ್ಳು ಹೇಳ್ತೀಯಾ ಹಡಬೇ ರಂಡೆ! ಮಿಂಡಗಾರರ ಮಾತು ಕಟ್ಟಿಕೊಂಡು ಪಲ್ಯಕ್ಕೆ ವಿಷ ಹಾಕಿಲ್ಲಾ? ಹೇಳು ಎಂದು ಗುದ್ದಿದರು".[7] ಊಳಿಗಮಾನ್ಯ ಸಮಾಜದ ಸಾಂಪ್ರದಾಯಿಕ

ಕುಟುಂಬದ ಮೌಲ್ಯಗಳ ಹೊರೆಯಲ್ಲಿ ಪುರುಷಾಧಿಕಾರದ ದರ್ಪದಡಿಯಲ್ಲಿ ಇಲ್ಲಿನ ಸ್ತ್ರೀಯರು ಹಿಂಸೆಗೆ ಒಳಗಾಗಿ ನಲುಗುವುದನ್ನು ಇಲ್ಲಿ ಗಮನಿಸಬಹುದಾಗಿದೆ. ಚಂದ್ರಯ್ಯಗೌಡರು ಅನೈತಿಕ ಸಂಬಂಧವನ್ನು ಸುಬ್ಬಮ್ಮನ ಮೇಲೆ ಹೇರುವುದರ ಜೊತೆಗೆ ಮಾನಸಿಕವಾಗಿ ಹಿಂಸೆಯನ್ನು ಹೇರುತ್ತಾರೆ. ಜೊತೆಗೆ ಈ ಸಂದರ್ಭಕ್ಕನುಗುಣವಾಗಿ ಗಂಗೆಯನ್ನು ತೆಗೆದುಕೊಂಡಾಗ ಮದುವೆಯಿಂದಾಗಿ ಬದುಕಿಡೀ ಹದಗೆಟ್ಟು ಸಾಂಸಾರಿಕವಾದ ಪ್ರೀತಿ ಮತ್ತು ಭಾವನಾತ್ಮಕ ಭದ್ರತೆಯ ಕೊರತೆಯನ್ನು ಹೊಂದಿರುವ ಗಂಗೆ ಚಂದ್ರಯ್ಯಗೌಡರನ್ನು ಒಲಿಸಿಕೊಂಡು ಸುಬ್ಬಮ್ಮನ ಸಂಸಾರಕ್ಕೆ ಮುಳ್ಳಾಗುತ್ತಾಳೆ. ಜೊತೆಗೆ ಗಂಗೆಯ ಸ್ವಾರ್ಥ ಮತ್ತು ಸೇರೆಗಾರರ ಲಂಪಟತನದಿಂದ ಗಂಗೆಯು ಸುಬ್ಬಮ್ಮನನ್ನು ಒಂದು ಸಾಧನವಾಗಿ ಮಾರ್ಪಾಡು ಮಾಡಿಕೊಳ್ಳುತ್ತಾಳೆ. ಸುಬ್ಬಮ್ಮ ಮತ್ತು ಸೇರೆಗಾರರ ನಡುವಿನ ಅನೈತಿಕ ಸಂಬಂಧದ ಮೂಲಕ ಜಾತಿ ವ್ಯವಸ್ಥೆಯನ್ನು ಮೀರುವುದನ್ನು ಕಾದಂಬರಿಯಲ್ಲಿ ಕಾಣಬಹುದಾಗಿದೆ. ಹಾಗೆಯೇ ಅಧಿಕಾರದ ಪ್ರೇರಕ ಶಕ್ತಿಯಾಗಿ ಹೇಗೆ ಕಾದಂಬರಿಯಲ್ಲಿ ಸ್ತ್ರೀಯು ಕಾಣಿಸಿಕೊಳ್ಳುತ್ತಾಳೆ ಎಂಬುದಕ್ಕೆ ಸುಬ್ಬಮ್ಮನನ್ನು ಉದಾಹರಣೆಯಾಗಿ ತೆಗೆದುಕೊಳ್ಳಬಹುದಾಗಿದೆ. ಚಂದ್ರಯ್ಯಗೌಡರು ಮರಣದ ಬಳಿಕ ಅಧಿಕಾರವನ್ನು ಕಳೆದುಕೊಳ್ಳುತ್ತಾಳೆ. ನಂತರ ಕಾನೂರು ಹೆಗ್ಗಡಿತಿಯಾಗಿ ಸುಬ್ಬಮ್ಮ ಅಧಿಕಾರವನ್ನು ತಾನು ವಹಿಸಿಕೊಂಡುದನ್ನು ಈ ಕಾದಂಬರಿಯಲ್ಲಿ ಕಾಣುತ್ತೇವೆ.

ಹೂವಯ್ಯ ತನ್ನ ಬದುಕಿನ ಸಂದರ್ಭದಲ್ಲಿ ಪರಿಸರದ ಕ್ಷುದ್ರತೆಯನ್ನು ಮೀರಿದ ತನ್ನ ತಿಳಿವಿನ ಸಾರ್ಥಕ ಜೀವನ ನಡೆಸಲು ಪ್ರಾಮಾಣಿಕವಾದ ಪ್ರಯತ್ನ ಮಾಡುತ್ತಾನೆ. ಹೂವಯ್ಯ ಜಾತಿ, ಮತ, ಮೌಢ್ಯ, ಗಂಡು ಹೆಣ್ಣಿನ ಅಸಮಾನತೆ, ಶೋಷಣೆ ಮುಂತಾದವುಗಳನ್ನು ಧಿಕ್ಕರಿಸಿ ಕೊನೆಗೆ ಆಧ್ಯಾತ್ಮದ ಕಡೆಗೆ ಹೋಗುತ್ತಾನೆ. ವಸಾಹತುಶಾಹಿ ಪ್ರಭಾವದಿಂದ ಅನೇಕ ಪಲ್ಲಟಗಳು ಉಂಟಾದವು. ಊಳಿಗಮಾನ್ಯ ವ್ಯವಸ್ಥೆಯಲ್ಲಿದ್ದಂತಹ ಕ್ರೂರವಾದ ನಡಾವಳಿಕೆಗಳು ಬದಲಾವಣೆ ಹೊಂದಿದ್ದವು. ಹೂವಯ್ಯ ಅನೇಕ ಬದಲಾವಣೆಗಳನ್ನು ತಂದನು. ತನ್ನ ಚಿಕ್ಕಯ್ಯನಾದಂತಹ ಚಂದ್ರಯ್ಯಗೌಡರ ಆಜ್ಞೆಯನ್ನು ಉಲ್ಲಂಘಿಸಿ ನಿಂಗ ಬೈರರಿಗೆ ಪಡಿಯನ್ನು ಕೊಡಿಸುತ್ತಾನೆ ಜೊತೆಗೆ ಹೂವಯ್ಯನಿಗೆ ಬೈರ ಅಸ್ಪೃಶ್ಯನೆಂದು ಗೊತ್ತಿದ್ದರೂ ಅವನು ಚೆಲ್ಲಿದ ಕಂಬಳಿ ಗಂಟನ್ನು ಅವನ ಗುಡಿಸಲಿಗೆ ಒಯ್ದು ಮುಟ್ಟಿಸುತ್ತಾನೆ. ಜಾತಿ, ಮತ, ಮೂಢನಂಬಿಕೆ ಅಸ್ಪೃಶ್ಯತೆ ಮುಂತಾದವುಗಳು ವಸಾಹತುಶಾಹಿಯ ಪ್ರಭಾವದಿಂದ ಪಲ್ಲಟ ಹೊಂದುತ್ತವೆ.

ಅಡಿ ಟಿಪ್ಪಣಿಗಳು

1. ಕಾನೂರು ಹೆಗ್ಗಡಿತಿ; ಕುವೆಂಪು, ಉದಯರವಿ ಪ್ರಕಾಶನ, ವಾಣಿವಿಲಾಸಪುರಂ, ಮೈಸೂರು, 2007, ಪುಟ-97
2. ಕಾನೂರು ಹೆಗ್ಗಡಿತಿ; ಕುವೆಂಪು, ಉದಯರವಿ ಪ್ರಕಾಶನ, ವಾಣಿವಿಲಾಸಪುರಂ, ಮೈಸೂರು, 2007, ಪುಟ-62
3. ಸಹ್ಯಾದ್ರಿಯ ಸೂರ್ಯ: ಸಂಪಾದಕ ಡಾ.ಚಕ್ಕೆರೆ ಶಿವಶಂಕರ್, ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ ಬೆಂಗಳೂರು, 2004, ಪುಟ-25
4. ಕಾನೂರು ಹೆಗ್ಗಡಿತಿ; ಕುವೆಂಪು, ಪುಟ-222
5. ಕಾನೂರು ಹೆಗ್ಗಡಿತಿ; ಕುವೆಂಪು, ಪುಟ-561
6. ಕಾನೂರು ಹೆಗ್ಗಡಿತಿ; ಕುವೆಂಪು, ಪುಟ-116
7. ಕಾನೂರು ಹೆಗ್ಗಡಿತಿ; ಕುವೆಂಪು, ಪುಟ-369

ಅಧ್ಯಾಯ-4

ಕೆಳಜಾತಿಗಳ ಹಾಗೂ ಸ್ತ್ರೀತ್ವದ ಅನನ್ಯತೆಯ ಪ್ರಶ್ನೆ

ಮೇಲುವರ್ಗವು ತನ್ನನ್ನು ತಾನು ಶ್ರೇಷ್ಠವೆಂದು ಕೆಳವರ್ಗವು ತನ್ನನ್ನು ತಾನು ಕೀಳೆಂದು ಭಾವಿಸುವುದಕ್ಕೆ ವರ್ಣಾಶ್ರಮ ಧರ್ಮವೇ ಮುಖ್ಯ ಅಡಿಪಾಯ. ಆದರೂ ಶೂದ್ರರಲ್ಲಿ ಮತ್ತು ಕೆಳವರ್ಗದವರಲ್ಲಿ ಇಂದಿಗೂ ಇರಬಹುದಾದ ನಂಬಿಕೆಗಳು ಮತ್ತು ಆಚರಣೆಗಳು ಶ್ರೇಣೀಕೃತ ಜಾತಿ ವ್ಯವಸ್ಥೆಯ ವಿರುದ್ಧ ಪ್ರತೀಕಾರದ ಅಸ್ತ್ರಗಳಾಗಿ ಕಂಡು ಬರುತ್ತವೆ. ಕುವೆಂಪುರವರು ಪರಂಪರೆಯ ಮೌಲ್ಯಗಳನ್ನು ವಿರೋಧಿಸುತ್ತಲೇ ಶೂದ್ರ ಸಂಸ್ಕೃತಿಯ ವಿಮರ್ಶೆಯ ಮುಖಾಂತರ ಜೀವಪರವಾದ ಹಾಗೂ ಪ್ರಜಾಸತ್ತಾತ್ಮಕವಾದ ಪ್ರತಿ ಸಂಸ್ಕೃತಿಯನ್ನು ಕಟ್ಟಲು ಪ್ರಯತ್ನಿಸಿದವರು.

ಶೂದ್ರ ಸಮುದಾಯದಿಂದ ಬಂದ ಕುವೆಂಪು ಇಂಗ್ಲೀಷ್ ವಿದ್ಯಾಭ್ಯಾಸದ ಮೂಲಕವೇ ತಾತ್ವಿಕ ಶೋಧನೆಗೆ ತೊಡಗಿಕೊಂಡವರು. ರಾಮಕೃಷ್ಣ ಪರಮಾಂಸ, ವಿವೇಕಾನಂದರ ಸರ್ವಧರ್ಮ ಸಮನ್ವಯ ಹಾಗೂ ಸರ್ವೋದಯದ ವಿಚಾರಧಾರೆಗಳಿಗೆ ಬದಲಾಗಿದ್ದ ಕುವೆಂಪು ಅವರು ವೈಧಿಕ ನೆಲೆಯ ಪುರೋಹಿತಶಾಹಿ ಚೌಕಟ್ಟಿನಿಂದ ಬಿಡಿಸಿಕೊಳ್ಳಲು ಅವಣಿಸಿದರೂ ಈ ದೃಷ್ಟಿಯಿಂದ ಮಲೆಗಳಲ್ಲಿ ಮದುಮಗಳು ಮತ್ತು ಕಾನೂರು ಹೆಗ್ಗಡಿತಿ ಕಾದಂಬರಿಗಳಲ್ಲಿ ಸೃಷ್ಟಿಸಿದ ಪುರುಷ ಪಾತ್ರಗಳು ಈ ವೈಚಾರಿಕ ಪ್ರಜ್ಞೆಯನ್ನು ಧರಿಸಿಕೊಂಡು ಬೆಳೆದಿವೆ. ಅಕ್ಷರ ಬಲ್ಲ ವಿದ್ಯೆ ಪಡೆದ ಹೂವಯ್ಯ-ಮುಕುಂದಯ್ಯ ವೈಚಾರಿಕತೆ ದಾರ್ಶನಿಕತೆಗಳು ಶೂದ್ರ ಚಳುವಳಿಯ ಜೀವಂತಿಕೆ ಪಡೆದುಕೊಂಡು ಅಕ್ಷರ ಕಲಿತ ಹೂವಯ್ಯ ಶೂದ್ರರನ್ನೆಲ್ಲ ಅಕ್ಷರವಂತರನ್ನಾಗಿ ಮಾಡುವ ದಲಿತರಿಗೆಲ್ಲ ಸಮಾನ ಆಸ್ತಿ ಹಕ್ಕುಗಳು ಸಿಗುವಂತೆ ಮಾಡುವ ಪ್ರಯತ್ನದಲ್ಲಿ ಅವೈಧಿಕ ಚಳುವಳಿಯ ಕ್ರಿಯೆ ಎದ್ದು ಕಾಣುತ್ತದೆ. ಶೂದ್ರರಿಗೆ ಆಧ್ಯಾತ್ಮಿಕ ಜ್ಞಾನವನ್ನು ಪಡೆಯುವ ಸಾಮಾಜಿಕ ನ್ಯಾಯವನ್ನು ಒದಗಿಸಿಕೊಡುವ ಪ್ರಯತ್ನವನ್ನು ಕುವೆಂಪು ಮಾಡಿದ್ದಾರೆ. ಹೀಗೆ ಕುವೆಂಪು ತಮ್ಮ ವೈಚಾರಿಕ ಬರಹಗಳಲ್ಲಿ ಅದರಲ್ಲೂ ತಮ್ಮ ಕಾದಂಬರಿಯ ಮುಖಾಂತರ ಯುವಕರು ನಿರಂಕುಶ ಮತಿಗಳಾಗುವ ಪಾತ್ರಗಳನ್ನು ಸೃಷ್ಟಿಸಿದ್ದಾರೆ. ಹೂವಯ್ಯ, ರಾಮಯ್ಯ, ಚನ್ನಯ್ಯ ಮತ್ತು ಮುಕುಂದಯ್ಯ ಈ ಪಾತ್ರಗಳು ಶೂದ್ರ ಚಳುವಳಿಯಲ್ಲಿ ರೂಪಿಸಿದ ಪಾತ್ರಗಳಾಗಿವೆ. ವಸಾಹುತಶಾಹಿ ಹಾಗೂ ಹೊಸ ಶಿಕ್ಷಣ ಫಲವಾಗಿ ಹೂವಯ್ಯ ಊಳಿಗಮಾನ್ಯ ವ್ಯವಸ್ಥೆ, ಜಾತಿವ್ಯವಸ್ಥೆ ಹಾಗು ಲಿಂಗವ್ಯವಸ್ಥೆ ವಿರೋಧಿಸಿದ ಪ್ರಗತಿಪರ ಚಿಂತನೆ ಪ್ರತಿನಿಧಿಯಾಗಿ

ಕಾದಂಬರಿಯಾಗಿ ಚಿತ್ರಿತಗೊಂಡಿದ್ದರ ಜೊತೆಗೆ ಪುರೋಹಿತಶಾಹಿಯ ಯಜಮಾನಿಕೆಯನ್ನು ವಿರೋಧಿಸುತ್ತಲೇ ಶೂದ್ರ ಶಕ್ತಿಯೊಂದು ಆಧ್ಯಾತ್ಮಿಕ ಸಾಧನೆಯನ್ನು ಸಾಧಿಸಿದ್ದರ ಕ್ರಿಯೆಯನ್ನು ಹೆಗ್ಗಡಿತಿ ಕಾದಂಬರಿಯಲ್ಲಿ ನೋಡಬಹುದಾಗಿದೆ. ಹೂವಯ್ಯ ಖಾಸಗಿ ಭೂಮಿ, ಧರ್ಮ, ಜಾತಿ, ಕುಟುಂಬ, ಮದುವೆ ಮೊದಲಾದ ಆಸೆಗಳನ್ನು ಧಿಕ್ಕರಿಸಿ ವ್ಯಕ್ತಿತ್ವದ ಎಲ್ಲಾ ಸಂಕೋಲೆಗಳಿಂದ ಮುಕ್ತವಾಗಿ ಧರ್ಮ ನಿರಪೇಕ್ಷ ವ್ಯಕ್ತಿಯಾಗಿ ಚಿತ್ರಿತಗೊಳ್ಳುವುದರೊಂದಿಗೆ ನಿರ್ವಿಕಾರ ಮೂರ್ತಿಯಾಗಿ, ರೂಪಿತವಾಗಿದ್ದಾನೆ.

ಕುವೆಂಪು ಕಾದಂಬರಿಗಳಲ್ಲಿ ವ್ಯಕ್ತಗೊಂಡ ಆಧುನಿಕತೆಯು ಕೇವಲ ಭೌತಿಕ ಪರಿಣಾಮ ಉಂಟು ಮಾಡಿದ ಮಾತ್ರವಲ್ಲದೆ ಸಾಂಸ್ಕೃತಿಕ ಪರಿವರ್ತನೆಗೂ ಕಾರಣವಾಯಿತು. ಮಲೆನಾಡನ್ನು ಪ್ರವೇಶಿಸಿದ ಯಂತ್ರನಾಗರಿತೆ, ಅಗಾಧ ವಿಸ್ಮಯಕ್ಕೆ ಅನುಮಾನಗಳಿಗೆ ಹಾಗೂ ಮಾನಸಿಕ ಹಿಂಸೆಗೆ ಕಾರಣವಾಯಿತು. "ಸಂಪ್ರದಾಯ ನಿಷ್ಠೆಯ ವೀರಾನುಯಾಯಿಯಾಗಿದ್ದ ಶಂಕರಪ್ಪ ಹೆಗ್ಗಡೆಗೆ ಕ್ರೈಸ್ತರ ಪಾದ್ರಿಗಳನ್ನೆಲ್ಲ ಮನೆಗೆ ಸೇರಿಸಿ, ಅವರೊಡನೆ ಸಹಪಂಕ್ತಿ ಭೋಜನವನ್ನು ಮಾಡಿ, ಅವರು ತೊಟ್ಟ ವಿಲಾಯತಿ ವಸ್ತುಗಳು ಲಾಟೀನು, ಬೈಸಿಕಲ್ಲು, ತೋಟ, ಕೋವಿ, ಸೀಮೆ ಬಿಸ್ಕತ್ತು, ಕ್ರಾಪ್, ಹ್ಯಾಟ್ಸ್, ಗೋಡ್ಸ್.. ಇತ್ಯಾದಿ ಕಂಡರೆ ತಿರಸ್ಕಾರ, ಜಿಗುಪ್ಸೆ ಉಂಟಾಗುತ್ತಿತ್ತು. ಈ ಯಂತ್ರಸಂಸ್ಕೃತಿ ಮೇಲ್ನೋಟಕ್ಕೆ ಪ್ರತಿಗಾಮಿಯಾಗಿ ಕಂಡರೂ ಅದು ಇಡೀ ಮಲೆನಾಡಿನ ಜೀವನ ಕ್ರಮವನ್ನೇ ಬದಲಿಸಿಬಿಟ್ಟಿತು. ಮಲೆನಾಡಿಗೆ ಪಾದ್ರಿಯ ಪ್ರವೇಶವನ್ನು ಗುಮಾನಿಯಿಂದ ನೋಡಿದ ಹಳ್ಳಿಯವರು ಕೊನೆಕೊನೆಗೆ ಅವನ ಚಟುವಟಿಕೆಯೊಂದಿಗೆ ಹೊಂದಿಕೊಳ್ಳಲು ನಿಧಾನವಾಗಿ ಪಾದ್ರಿ ಜೀವರತ್ನಯ್ಯ ಬೆಟ್ಟಳ್ಳಿ ದೇವಯ್ಯನ ಕುಟುಂಬ ಮತ್ತು ಆಸ್ತಿಯ ವಿಷಯದಲ್ಲಿ ಹಸ್ತಕ್ಷೇಪ ಮಾಡುವುದು ಮತಾಂತರಕ್ಕೆ ಪ್ರೇರೇಪಿಸುವುದು ಮೊದಲಾದ ವಸಹಾತುಶಾಹಿ ಪ್ರಕ್ರಿಯೆಗಳಿಗೆ ಸಮುದಾಯ ಸ್ಪಂದಿಸುತ್ತದೆ.

ಕಾದಂಬರಿಯಲ್ಲಿ ಬರುವ ಖಾಸಗಿ ಆಸ್ತಿಯ ವಿರುದ್ಧ ಅಸ್ಪೃಶ್ಯರ ಪರವಾಗಿ ಬಂಡಾಯ ಹೂಡುವ ಹೂವಯ್ಯನ ನಿಲುವು ಊಳಿಗಮಾನ್ಯ ಪದ್ಧತಿಯ ಒಳಗೆ ಎದ್ದಿರುವ ಬಂಡಾಯವನ್ನು ಪ್ರತಿನಿಧಿಸುತ್ತಾ ಉದಾರವಾದಿಯಾದ ಹೂವಯ್ಯ ತನ್ನ ಆಸ್ತಿ ಮಾತ್ರವಲ್ಲ ಒಟ್ಟು ಖಾಸಗಿ ಆಸ್ತಿಯ ವಿರುದ್ಧವೇ ಬಂಡೇಳುತ್ತಾನೆ. ಬೈರ ಸಿದ್ದರಿಗೆ ಕೊಡಬೇಕಾದ ಕೂಲಿಯನ್ನು ಚಂದ್ರಯ್ಯಗೌಡ ವಜಾ ಮಾಡಿದಾಗ ಈ ಸುದ್ದಿಯನ್ನು ತಿಳಿದ ಹೂವಯ್ಯ ಉಗ್ರಗೊಂಡು ಸ್ವತಃ ತಾನೇ ಬೈರ ಸಿದ್ದರೆಂಬ ಅಸ್ಪೃಶ್ಯರಿಗೆ ಭತ್ತದ ರೂಪದಲ್ಲಿ ಕೂಲಿಯನ್ನು ಸಂದಾಯ ಮಾಡುತ್ತಾನೆ. ಇಂತಹ ಆಸ್ತಿಯ

ವಿರುದ್ಧ ಅಸ್ಪೃಶ್ಯರ ಪರವಾಗಿ ಹೋರಾಡುವ ಹೂವಯ್ಯನ ನಿಲುವು ವಸಹಾತುಶಾಹಿಯ ಫಲವಾಗಿ ಇಂಥ ಖಾಸಗಿ ಆಸ್ತಿಯ ಅಸ್ಪೃಶ್ಯರಿಗೆ ಸಹಾಯ ಹಸ್ತ ನೀಡುವ ಚರ್ಚ್ ಪಾದ್ರಿಗಳು ತಳಸಮುದಾಯದ ದಿಕ್ಕನ್ನೇ ಬದಲಾಯಿಸಿಬಿಡುತ್ತದೆ. ಇವು ಶೋಷಿತರನ್ನು ಅಸ್ಪೃಶ್ಯರನ್ನು ವಿವೇಚಿಸುವ ಹೊಸ ಅಧಿಕಾರ ಕೇಂದ್ರಗಳು ಕಾದಂಬರಿಯಲ್ಲಿ ಪ್ರವೇಶ ಪಡೆಯುತ್ತವೆ. ಇದರಿಂದಾಗಿ ಕೆಳಜಾತಿಗಳು ಅಸ್ಪೃಶ್ಯರು, ಶೋಷಿತರು ಪಾರಂಪರಿಕ ಜಾತಿ ಕುರಿತ ವ್ಯವಸ್ಥೆಯಿಂದ ದೂರ ಸರಿದು ವಸಹಾತುಶಾಹಿ ರೂಪಿಸಿದ ವರ್ಗ ಸಮಾಜದಲ್ಲಿ ಅಸ್ತಿತ್ವ ಹಾಗೂ ಅನನ್ಯತೆಯ ಸಾಧಿಸಿಕೊಳ್ಳಲು ಯತ್ನಿಸಿದ್ದಾರೆ.

ಕುವೆಂಪುರವರು ತಮ್ಮ ಕಾದಂಬರಿ, ಕಥೆ, ನಾಟಕಗಳಲ್ಲಿ ಜಾತಿಪದ್ಧತಿ, ಅಸ್ಪೃಶ್ಯತೆ, ಸ್ತ್ರೀ ಶೋಷಣೆ, ಲಿಂಗರಾಜಕಾರಣ ಇವುಗಳ ಬಗ್ಗೆ ಅತ್ಯಂತ ಪ್ರಗತಿಪರವಾಗಿ ಮತ್ತು ಮುಕ್ತ ಧೋರಣೆ ಹೊಂದಿರುವುದನ್ನು ಗುರುತಿಸಬಹುದಾಗಿದೆ. ಅವರ ಕಾದಂಬರಿಗಳಲ್ಲಿ ಸಾಮಾನ್ಯ ಮನುಷ್ಯರು ಊಳಿಗಮಾನ್ಯ ಜಾತಿ ಶ್ರೇಣೀಕರಣದ ಪುರುಷಾಧಿಕಾರ ಹಾಗೂ ವಸಹಾತುಶಾಹಿಯ ಅನುಭವಕ್ಕೆ ತತ್ತರಿಸಿ ಹೋದ ಜನಸಮುದಾಯದ ನೋವುಗಳೇ ವಸ್ತುಗಳಾಗಿ ಅಪ್ಪ ಮಗನ ಜಗಳ, ಹಾದರದ ಸಂಬಂಧಗಳು, ಜೀತದಾಳುಗಳ ಗೋಳುಗಳು, ಅಸ್ಪೃಶ್ಯರ ತಳಮಳ, ಹೆಣ್ಣಿನ ಆತಂಕ.. ಮುಂತಾದ ಸಂಗತಿ ಹಾಗೂ ಬಿಕ್ಕಟ್ಟುಗಳನ್ನು ಕಾಣುತ್ತೇವೆ. ಶೋಷಿತ ಸಮುದಾಯದವರ ಕನಸು ಮತ್ತು ವಿಷಾದಗಳ ಚರ್ಚೆಯನ್ನು ಈ ಕಾದಂಬರಿಯಲ್ಲಿ ಗ್ರಹಿಸಬಹುದಾಗಿದೆ. ಮೇಲುವರ್ಗದವರು ಆಧುನಿಕ ಶಿಕ್ಷಣ ಬಂದಿದ್ದರಿಂದ ತಮ್ಮ ಪಾರಂಪರಾಗತ ಮೌಲ್ಯಗಳು ಹಾಳಾದವೆಂದು ವಿಷಾದಿಸುತ್ತಾರೆ. ಆದರೆ ಕೆಳಜಾತಿ, ಕೆಳವರ್ಗಗಳು ಇದರಿಂದ ಬದುಕಿನಲ್ಲಿ ಹೊಸ ಕನಸುಗಳನ್ನು ಕಾಣುತ್ತಾರೆ. ಕುವೆಂಪು ಸೃಷ್ಟಿಸಿರುವ ಮಹಿಳೆಯರು ತಮ್ಮ ಸ್ವಂತಿಕೆ ಅಸ್ತಿತ್ವ ಹಾಗೂ ಅಧಿಕಾರದ ನೆಲೆಗಳನ್ನು ಹುಡುಕುವ ಕಾರ್ಯದಲ್ಲಿ ಕ್ರಿಯಾಶೀಲರಾಗಿದ್ದವರು. ಊಳಿಗಮಾನ್ಯ ವ್ಯವಸ್ಥೆ ಮತ್ತು ಸಂಪ್ರದಾಯಿಕ ಕುಟುಂಬಗಳ ಮೌಲ್ಯದ ಬಲೆಯಲ್ಲಿ ಸ್ತ್ರೀಯರು ನರಳುವುದನ್ನು ಕಂಡರು. ವ್ಯಕ್ತಿ ಮತ್ತು ನೆಲೆಯಲ್ಲಿ ಇಲ್ಲಿನ ಸ್ತ್ರೀಯರು ವಿವೇಚನ ಉಳ್ಳವರಾಗಿದ್ದಾರೆ. ಕುವೆಂಪು ಅವರು ಹೆಣ್ಣನ್ನು ಹೆಚ್ಚು ಮಾನವೀಯವಾಗಿ ನೋಡಬೇಕಾದ ಅರ್ಥಪೂರ್ಣ ಭೂಮಿಕೆಯನ್ನು ಒದಗಿಸಿದ್ದಾರೆ. ಇಲ್ಲಿನ ಸ್ತ್ರೀಯರು ತಾವು ನಂಬಿದ ಮೌಲ್ಯಗಳನ್ನು ಅಷ್ಟು ಪ್ರಾಮಾಣಿಕವಾಗಿ ಬಾಳಿದರೂ ಅವರ ಜೀವನದ ಸಫಲತೆ, ಮದುವೆ ಸಾರ್ಥಕತೆ ಹಿನ್ನೆಲೆಯಲ್ಲಿ ನಿಂತಿದೆ. ಬಡಕುಟುಂಬದಲ್ಲಿ ಬೆಳೆದ ಸುಬ್ಬಮ್ಮ ವಯಸ್ಸಾದ ಮತ್ತು ಮೂರನೇ ಮದುವೆಯ ಚಂದ್ರಯ್ಯಗೌಡನಿಗೆ ವಧುವಾಗುವುದು ಆಕೆಗೆ ಇಷ್ಟವಿಲ್ಲದ ಸಂಗತಿ ಆದರೂ ಒಂದು ದೊಡ್ಡ ಕುಟುಂಬಕ್ಕೆ ಯಜಮಾನಿಯಾಗಬಹುದೆಂಬ

ಮಹಾದಾಸೆಯಿಂದ ಈ ಮೂರನೆಯ ಮದುವೆಗೆ ಒಪ್ಪುತ್ತಾಳೆ. ಅಲ್ಲಿ ವಯಸ್ಸಿನ ಅಂತರ ಲೈಂಗಿಕ ಅಸಮಾನತೆ, ಶೋಷಣೆ ದಬ್ಬಾಳಿಕೆಗಳ ಹಿಂಸೆಗೆ ಒಳಗಾಗುತ್ತಾಳೆ. ಆದರೂ ವ್ಯವಸ್ಥೆಯನ್ನು ಎದುರಿಸುವ ಧೈರ್ಯವಿಲ್ಲದೆ ಮದುವೆಯಾಗಿ ಕಾನೂರಿನ ಹೆಗ್ಗಡಿತಿಯಾಗಿ ಬಂದನಂತರ ಕೌಟುಂಬಿಕ ಸಮಸ್ಯೆ, ಲೈಂಗಿಕ ಬಿಕ್ಕಟು ಇವುಗಳಿಗೆ ಒಳಗಾಗಿ ಅನಾಗರಿಕ ಹೆಣ್ಣಿನಂತೆ ಕುಟುಂಬದಲ್ಲಿ ಕಾಣಿಸಿಕೊಳ್ಳುತ್ತಾಳೆ. ಕಡೆಗೆ ಸುಬ್ಬಮ್ಮ ಆರ್ಥಿಕ, ಸಾಮಾಜಿಕ ಮತ್ತು ಅಧಿಕಾರ ಸ್ವಾತಂತ್ರ್ಯವನ್ನು ಪಡೆಯುವದರ ಕಡೆಗೆ ಚಲಿಸುತ್ತಾಳೆ. ಹೊಸ ನೈತಿಕಗೆಯನ್ನು ಸುಬ್ಬಮ್ಮ ಸ್ಥಾಪಿಸುತ್ತಾಳೆ. ಈ ಮೂಲಕ ತನ್ನ ಅಸ್ತಿತ್ವ ಚಹರೆ ಹಾಗೂ ಸ್ವಂತಿಕೆಗಳನ್ನು ಹುಡುಕುವ ಕಾರ್ಯದಲ್ಲಿ ಅತ್ಯಂತ ಕ್ರಿಯಾಶೀಲವಾದ ಹೆಣ್ಣಾಗಿ ತೋರುತ್ತಾಳೆ. ಈ ಬಗೆಯ ಸ್ತ್ರೀ ಶಕ್ತಿಯ ಪ್ರತಿಪಾದನೆಗೆ ಅಂದಿನ ರಾಷ್ಟ್ರೀಯ ಚಳುವಳಿ, ಆಧುನೀಕರಣ, ಹೊಸಶಿಕ್ಷಣ, ವಿವೇಕಾನಂದ, ಗಾಂಧಿ, ಅಂಬೇಡ್ಕರ್ ಅವರ ಚಿಂತನೆ ಪ್ರೇರಣೆಗಳು ಸ್ತ್ರೀಪರವಾದ ನಿಲುವುಗಳು ಪ್ರಭಾವಿಸಿರುವುದು. ಕಾನೂರು ಹೆಗ್ಗಡಿತಿಯ ಹೂವಯ್ಯ ಸೀತೆ ಮೊದಲಾದ ಪಾತ್ರಗಳು ಗಾಂಧೀಜಿಯ ವ್ಯಕ್ತಿತ್ವವನ್ನು ಪ್ರಭಾವಿಸಿಕೊಂಡು ಬೆಳೆದ ಪಾತ್ರಗಳಾಗಿವೆ. ತಮ್ಮ ಅನನ್ಯತೆಯನ್ನು ಸ್ವಚ್ಛಂದ ಪ್ರೀತಿ ಹಾಗೂ ಆಧ್ಯಾತ್ಮದಲ್ಲಿ ಕಂಡುಕೊಳ್ಳುತ್ತಾರೆ. ಸಂಪ್ರದಾಯಿಕ ಕುಟುಂಬ ವ್ಯವಸ್ಥೆ, ಮದುವೆ, ಅಧಿಕಾರ ಮೊದಲಾದ ಸಾಂಸ್ಥಿಕ ಅಧಿಕಾರಗಳು ಹಾಗೂ ಅವುಗಳ ನಿಯಂತ್ರಣಗಳಿಂದ ಬಿಡುಗಡೆಗೊಂಡು ದಾರ್ಶಿಕತೆಯಲ್ಲಿ ತನ್ನ ಅಸ್ತಿತ್ವವನ್ನು ಹುಡುಕಿಕೊಳ್ಳುವ ಪಾತ್ರವಾಗಿ ಹೂವಯ್ಯ ಚಿತ್ರಿತಗೊಂಡಿದ್ದಾನೆ.

"ಗಂಗೆಯ ಮನಸ್ಸು ಮಾತ್ರ ಬೇರೆಯಾಗಿತ್ತು. ಸುಬ್ಬಮ್ಮನ ದೆಸೆಯಿಂದ ಅವಳಿಗೆ ಚಂದ್ರಯ್ಯಗೌಡರ ಪ್ರಣಯವು ಬರಬರುತ್ತಾ ಇಳಿಮುಖವಾಗಿ ಕಡೆಗೆ ತಪ್ಪತೊಡಗಿತ್ತು. ಆದಕಾರಣ ಸುಬ್ಬಮ್ಮನೊಡನೆ ಸಲಿಗೆ ಸ್ನೇಹಗಳಿಂದ ನಡೆಯುತ್ತಿದ್ದರೂ ಒಳಗೊಳಗೆ ಅವಳೆದೆ ಕುದಿಯತೊಡಗಿತ್ತು. ಅದೂ ಅಲ್ಲದೆ ಸುಬ್ಬಮ್ಮ ಎಷ್ಟೇ ಕುಸಂಸ್ಕೃತೆಯಾಗಿದ್ದರೂ ಆಕೆಯಲ್ಲಿದ್ದ ಗ್ರಾಮ್ಯ ಸಹಜವಾದ ಮುಗ್ಧತೆ ಪರಿಶುದ್ಧತೆಗಳನ್ನು ನೋಡಿ ಕರುಬಿದಳು. ಕೆಟ್ಟವರಿಗೆ ನೆಟ್ಟಗಿರುವವರನ್ನು ತಮ್ಮಂತೆ ಮಾಡಿಕೊಳ್ಳುವ ಚಪಲತೆಯಾಗುತ್ತದೆ. ಸುಬ್ಬಮ್ಮ ಆ ವಿಚಾರದಲ್ಲಿ ಎಷ್ಟು ಮೂರ್ಖಳಾಗಿದ್ದಳೆಂದರೆ ಗಂಗೆಯ ದುಷ್ಟ ಸೂಚನೆಗಳನ್ನು ತಿಳಿದುಕೊಳ್ಳಲು ಕೂಡ ಸಮರ್ಥಳಾಗಿರಲಿಲ್ಲ".[1] ಈ ಹಿನ್ನೆಲೆಯಲ್ಲಿ ಮೊದಲಿಗೆ ಕೆಳವರ್ಗದಿಂದ ಬಂದಂತಹ ಗಂಗೆ ಚಂದ್ರಯ್ಯಗೌಡರ ಹೊಲಗದ್ದೆಗಳಲ್ಲಿ ಕೆಲಸ ಮಾಡಲು ಸೇರೆಗಾರ ರಂಗಪ್ಪಸೆಟ್ಟಿಯ ಘಟ್ಟದ ಕೆಳಗಿಂದ ತಂದಂತಹ ಹೆಣ್ಣುಗಳ ಜೊತೆಗೆ ಕೆಳಜಾತಿಯ ಹೆಂಗಸರಲ್ಲಿ ಕೆಲವರು ತಮ್ಮ

ಚಾಣಾಕ್ಷತನದಿಂದ ಸಾಹುಕಾರರ ಉಪಪತ್ನಿಯೂ ಆಗಿ ಮೆರೆಯುತ್ತಾರೆ. ಇಲ್ಲಿ ಮುಖ್ಯವಾಗಿ ಗಂಗೆ ಅಂಥ ಹೆಂಗಸು. ಇವಳ ಕುತೂಹಲಕಾರಿಯ ಕಥೆಯನ್ನು ಕುವೆಂಪುರವರು ಮಾಟಗಾತಿ ಎಂದು ಕರೆದಿದ್ದಾರೆ. ಚಂದ್ರಯ್ಯಗೌಡರನ್ನು ತನ್ನ ಕಡೆಗೆ ಸೆಳೆದುಕೊಂಡಿದ್ದು ಜೊತೆಗೆ ಸುಬ್ಬಮ್ಮನನ್ನು ಚಂದ್ರಯ್ಯಗೌಡರು ಮದುವೆಯಾದ ನಂತರ ಇವಳ ಸಲಿಗೆಗಳಿಗೆ ಕತ್ತರಿಬಿದ್ದಂತಾಯಿತು. ಸುಬ್ಬಮ್ಮ ಗ್ರಾಮ್ಯ ಸಮಾಜದಿಂದ ಬಂದಂತಹ ಯಾವ ರೀತಿಯ ನಾಗರಿಕಗೆಯೂ ತಿಳಿಯದಿದ್ದಂತಹ ಮುಗ್ಧೆ ಆಗಿದ್ದಳು. ಜೊತೆಗೆ ಸುಬ್ಬಮ್ಮ ಗಂಗೆಯ ದುಷ್ಟ ಸೂಚನೆಗಳನ್ನು ತಿಳಿದುಕೊಳ್ಳುವಷ್ಟು ಅಸಮರ್ಥಳಾಗಿದ್ದಳು. ಸುಬ್ಬಮ್ಮನನ್ನು ಮದುವೆಯಾದ ನಂತರ ಚಂದ್ರಯ್ಯಗೌಡರು ತನ್ನನ್ನೂ ಎಲ್ಲಿ ಕಡೆಗಣಿಸುತ್ತಾರೆಂದು ಗಂಗೆಯು ಸುಬ್ಬಮ್ಮನ ಮೇಲೆ ಮಾನಸಿಕ ಮುನಿಸನ್ನು ಪ್ರಾರಂಭಿಸುತ್ತಾಳೆ. ಗಂಗೆ ಬಹಳ ಬುದ್ಧಿವಂತೆ, ಎಲ್ಲಾ ತಂತ್ರಗಳನ್ನು ಉಪಯೋಗಿಸಿ ತನ್ನ ಅಸ್ತಿತ್ವವನ್ನು ಬಲಪಡಿಸಿಕೊಳ್ಳುತ್ತಾಳೆ. ಹೂವಿನ ರಸಕ್ಕಾಗಿ ಬಣ್ಣದ ಚಿಟ್ಟೆ ಹೇಗೆ ಹಾತೊರೆಯುತ್ತಿತ್ತೋ ಹಾಗೆ ಗಂಗೆಯು ಚಂದ್ರಯ್ಯಗೌಡರನ್ನು ಸಂಪೂರ್ಣವಾಗಿ ತನ್ನ ವಶಕ್ಕೆ ತೆಗೆದುಕೊಳ್ಳುವ ಜಾಣ್ಮೆ ಅವಳದು ಮತ್ತು ಕಳಕಾನೂರು ಅಣ್ಣಯ್ಯಗೌಡರ ಮಗ ಗಂಗೆಯ ಸಹವಾಸ ಮಾಡಿ ವ್ಯಭಿಚಾರಿಯಾಗಿ ದುಡ್ಡಿಗಾಗಿ ಕಳ್ಳತನಕ್ಕೆ ಇಳಿಯುತ್ತಾನೆ. ಇದರಿಂದ ಅವನ ಅಂತರಂಗದಲ್ಲಿ ತನ್ನ ತಂದೆಯು ಯಾಕೆ ಈ ಸಂಕಷ್ಟಗಳಿಗೆ ಸಿಲುಕಿಕೊಂಡರು ಎಂಬುದು ಮನವರಿಕೆಯಾಗುತ್ತದೆ. ಗಂಗೆಯ ರಂಗಪ್ಪಶೆಟ್ಟರ ಪ್ರೇಯಸಿ ಚಂದ್ರಯ್ಯಗೌಡರು ಮತ್ತು ಸುಬ್ಬಮ್ಮನ ಮೇಲೆ ಲೈಂಗಿಕ ಸಂಬಂಧ ಆರೋಪವನ್ನು ಹೊರಿಸಿ ತವರು ಮನೆಗೆ ಅಟ್ಟುತ್ತಾರೆ. ಇದೆ ಸಂದರ್ಭಕ್ಕೆ ಹೊಂಚು ಹಾಕುತ್ತಿದ್ದಂತ ಗಂಗೆಯು ಚಂದ್ರಯ್ಯಗೌಡರ ಅರೆಕಾಲಿಕ ಹೆಂಡತಿಯಾಗಿ ಕಾರ್ಯನಿರ್ವಹಿಸುತ್ತಾಳೆ. ಸುಬ್ಬಮ್ಮ ಬಹಳ ಮುಗ್ಧ ಹೆಣ್ಣು ಮಗಳು, ಗಂಗೆಯ ಸಹವಾಸದಿಂದ ಕೆಟ್ಟ ದಾರಿಯನ್ನು ಹಿಡಿದು ಸೇರೆಗಾರರಿಂದ ಗರ್ಭಿಣಿಯಾಗುತ್ತಾಳೆ. ಸುಬ್ಬಮ್ಮ ಅನೈತಿಕವಾಗಿ ತನ್ನ ಗರ್ಭದಲ್ಲಿರುವಂತಹ ಇನ್ನೂ ಲೋಕದ ಬೆಳಕನ್ನು ಕಾಣದ ಆ ಸೃಷ್ಟಿಯನ್ನು ಮದ್ದುಕೊಡಿಸುವ ನೆಪದಿಂದ ಸುಬ್ಬಮ್ಮನ ಒಡವೆಗಳನ್ನು ಲಪಟಾಯಿಸುತ್ತಾಳೆ. ಇದರಿಂದ ಸುಬ್ಬಮ್ಮನಿಗೆ ಯಾವುದೇ ರೀತಿಯ ಪ್ರಯೋಜನವಾಗುವುದಿಲ್ಲ ಜೊತೆಗೆ ಮಾಟಗಾತಿ ಗಂಗೆ ಮತ್ತು ವಂಚಕನಾದ ಸೇರೆಗಾರರು ಸೇರಿಕೊಂಡು ಇನ್ನುಳಿದ ಒಡವೆಗಳನ್ನು ಲಪಟಾಯಿಸುವುದರಲ್ಲಿ ಯಶಸ್ವಿಯಾಗುತ್ತಾಳೊ ಕೊನೆಗೆ ಈ ಅನೈತಿಕ ದುರಂತದಿಂದ ಸುಬ್ಬಮ್ಮ ಸಾವಿಗೀಡಾಗುತ್ತಾಳೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿನ ಶೋಷಿತ ಸ್ತ್ರೀತ್ವದ ನೆಲೆಗಳನ್ನು ತಲೆಕೆಳಗಾಗಿಸಿದ ಪಿರಮಿಡ್ಡಿನ ಲೀಲೆ ನಾವು ಕಲ್ಪಿಸಿಕೊಂಡರೆ, ಈ ಪಿರಮಿಡ್ಡಿನ ಅತ್ಯಂತ ಕೆಳಗಿನ ಕೇಂದ್ರ ಬಿಂದುವಿನಲ್ಲಿ ಅತ್ಯಂತ ಕೆಳಗಿನವರಾದ ಕೆಳಜಾತಿ ವರ್ಗಗಳ ಸ್ತ್ರೀಯರಿದ್ದಾರೆ. ಆದರೆ ಕುವೆಂಪು ಜಾತಿಯ ಶ್ರೇಣಿಯಲ್ಲಿ

ಇವರಿಗಿಂತ ಮೇಲಿನವರಾದರೂ ಆರ್ಥಿಕ ಶ್ರೇಣಿಯಲ್ಲಿ ಕೊನೆಯಲ್ಲಿರುವ ಇತರ ದಲಿತೇತರ ಸ್ತ್ರೀಯರನ್ನು ಈ ಶೋಷಿತ ನೆಲೆಯಿಂದಲೇ ಕಂಡಿರುವುದು ಮುಖ್ಯ ಸಂಗತಿ. ಗಂಗೆ, ಸೀತೆ, ತಿಮ್ಮಿ, ಕಾಡಿಯರಂಥವರು ತಮ್ಮ ದುಡಿಮೆ, ತಮ್ಮ ವ್ಯಕ್ತಿತ್ವಗಳೆರಡರಿಂದಲೂ ಇತರರನ್ನು ಬಳಸಿರುವವರು. ಅಸ್ಥಿರವಾದ ಆರ್ಥಿಕ ನೆಲೆಯಿಂದಾಗಿ ಇವರು ಲೈಂಗಿಕ ಬಲಿಪಶುತನಕ್ಕೆ ಒಳಗಾಗುವ ಸಾಧ್ಯತೆಗಳನ್ನು ಕಾಣಬಹುದು. ಹಾಗೆಯೇ ಸುಬ್ಬಮ್ಮ ನೆಲ್ಲಹಳ್ಳಿ ಪೆದ್ದೆಗೌಡರ ಮಗಳು ಚಂದ್ರಯ್ಯಗೌಡರ ಮೂರನೇ ಹೆಂಡತಿಯಾಗಿ ಕೈಹಿಡಿದ ನಂತರ ಕಾನೂರು ಹೆಗ್ಗಡಿತಿಯಾಗುತ್ತಾಳೆ. ಬಡಕುಟುಂಬದಿಂದ ಬಂದಂತಹ ಸುಬ್ಬಮ್ಮ ಹೊಸ ಬಗೆಯ ಬದುಕಿಗೆ ಹೊಂದಿಕೊಳ್ಳಲಾಗದೆ ಚಡಪಡಿಸುತ್ತಾಳೆ. ಇಳಿವಯಸ್ಸಿನ ಗಂಡನನ್ನು ಕಟ್ಟಿಕೊಂಡು ಇವಳಲ್ಲಿ ಈಡೇರದ ಆಸೆಗಳು ಹೆಪ್ಪುಗಟ್ಟುತ್ತವೆ. ಚಂದ್ರಯ್ಯಗೌಡರ ಮರಣದ ನಂತರ ಸುಬ್ಬಮ್ಮ ಚಂದ್ರಯ್ಯಗೌಡರೇ ಆಗಿ ಪರಿವರ್ತನೆಯಾಗುತ್ತಾಳೆ. ಅವಳ ದರ್ಪ, ದಬ್ಬಾಳಿಕೆ, ಅಹಂಕಾರ ಮುಂತಾದವುಗಳು ಅಧಿಕಾರ ಸಿಕ್ಕಿದ ಮೇಲೆ ಉದ್ಭವಿಸುತ್ತವೆ. ಮನೆಯ ಯಜಮಾನಿಕೆಯನ್ನು ಎಲ್ಲಾ ರೀತಿಯಲ್ಲಿಯೂ ಮುಂದುವರಿಸಿಕೊಂಡು ಹೋಗುತ್ತಾಳೆ. "ತಾಯಿ ತನ್ನ ಮಲಗುವ ಕೋಣೆಗೆ ಹೋಗಿ, ಸಂದುಕದಿಂದ ಬೆಳ್ಳಿಯ ಎರಡಾಣೆಯೊಂದನ್ನು ತಂದು ತೊಳೆದು ಸೀತೆಗೆ ಸುಳ್ತುಬರಿಸಿ (ಪ್ರದಕ್ಷಿಣೆಬರಿಸಿ) ಮಗಳಿಗೆ ಬೇಗ ಗುಣವಾದರೆ ಒಂದು ಬೆಳ್ಳಿಯ ತ್ರಿಶೂಲವನ್ನು ಮಾಡಿಸಿ ಹಾಕುವೆ (ನಿವೇದಿಸುವೆ)ನೆಂದು ತಿರುಪತಿ ತಿಮ್ಮಪ್ಪನಿಗೆ ಕೈಮುಗಿದ ಹೇಳಿಕೊಂಡು ಆ ಎರಡಾಣೆಯನ್ನು ಒಂದು ಬಟ್ಟೆಯಲ್ಲಿ ಸುತ್ತಿ ಮೇಲಿದ್ದ ಗಳುವಿಗೆ ಬಿಗಿದಳು. ಆ ಗಳುವಿನಲ್ಲಿ ಆಗಲೇ ಅಂತಹ ಮುಡಿಪುಗಳು ಅನೇಕವಾಗಿದ್ದನ್ನು ಕಂಡು, ತಾಯಿಯ ಮನಸ್ಸಿಗೆ ಸ್ವಲ್ಪ ನೆಮ್ಮದಿಯಾಯಿತು. ತಾಯಿ ಮಾಡುತ್ತಿದ್ದುದನ್ನೆಲ್ಲ ಮಗಳು ಸಾಕ್ಷಿಯೋಪಾದಿಯಲ್ಲಿ ಮಿಳಮಿಳನೆ ನೋಡುತ್ತಿದ್ದಳು".[2] ಈ ಹಿನ್ನೆಲೆಯಲ್ಲಿ ಮಾತೃ ಪ್ರಧಾನ ವ್ಯವಸ್ಥೆಯಲ್ಲಿ ಸೀತೆಯ ತಾಯಿಯಾದ ಗೌರಮ್ಮ ಮತ್ತು ಶ್ಯಾಮಯ್ಯಗೌಡರು ವೆಂಕಪ್ಪಯ್ಯಜೋಯಿಸರ ಮಾತನ್ನು ಕೇಳಿ ವಿಭೂತಿ ಮತ್ತು ನಿಮಿತ್ತ ಕೊಡಿಸುವುದರಿಂದ ಸೀತೆಯ ಖಾಯಿಲೆ ಗುಣಮುಖವಾಗುವುದಿಲ್ಲ ಜೊತಗೆ ಅನಕ್ಷರಸ್ಥರಾದ ಈ ದಂಪತಿಗಳಿಗೆ ಜೋಯಿಸರು ಹೇಳುವುದೇ ವೇದವಾಕ್ಯ. ಇದು ವಾತಾವರಣ ವ್ಯತ್ಯಾಸದಿಂದ ಬರುವಂತಹ ಖಾಯಿಲೆಯಲ್ಲ, ಮನಸ್ಸಿಗೆ ಸಂಬಂಧಪಟ್ಟ ಖಾಯಿಲೆ. ಸೀತೆ ಹೂವಯ್ಯನನ್ನು ಆ ಪುಟ್ಟ ಹೃದಯದಲ್ಲಿ ಆರಾಧ್ಯ ಮೂರ್ತಿಯಾಗಿ ಪೂಜಿಸಿರುತ್ತಾಳೆ. ಆದರೆ ಶ್ಯಾಮಯ್ಯಗೌಡರು ಮತ್ತು ಗೌರಮ್ಮನವರು ಸೀತೆಯನ್ನು ಅರ್ಥ ಮಾಡಿಕೊಳ್ಳದಿರುವುದರಿಂದ ಇರುವುದು ಈ ದುರಂತಕ್ಕೆ ಇವರೇ ಕಾರಣರಾಗುತ್ತಾರೆ. ಇಲ್ಲಿ ಮುಖ್ಯವಾಗಿ ಹೆಣ್ಣಿನ ಮನಸ್ಸಿನಲ್ಲಿರುವಂತಹ ಆಸೆಯನ್ನು ಅರ್ಥ ಮಾಡಿಕೊಳ್ಳುವುದಿಲ್ಲ. ಹೃದಯವೇ ಸಂಪೂರ್ಣವಾಗಿ

ಕೆಟ್ಟು ಹೋಗಿರುವಾಗ ದೇಹದ ಮೇಲೆ ಮುಲಾಮು ಹಚ್ಚಿದರೆ ಹೃದಯದ ಖಾಯಿಲೆ ವಾಸಿಯಾಗುವುದೇ? ಅರ್ಥಾತ್ ಸೀತೆಯೂ ಸಂಪೂರ್ಣವಾಗಿ ಹೂವಯ್ಯನ ಮನಸ್ಸಿನಲ್ಲಿ ಗಾಢವಾಗಿ ಬೆಳೆದಿರುವ ಕಾರಣ ಮನಸ್ಸಿನಿಂದ ಕಿತ್ತೆಸೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಕುವೆಂಪು ಗ್ರಾಮೀಣ ಜಮೀನುದಾರ ಮನೆತನದ ಸ್ತ್ರೀಯರನ್ನು ಉತ್ತಮ ಸ್ತ್ರೀತ್ವದ ಮಾದರಿಗಳಾಗಿ ಚಿತ್ರಿಸಿರುವಂತೆ ಕಾಣಿಸುತ್ತಾರೆ. ಸೀತೆ, ಗೌರಮ್ಮ, ಚಿನ್ನಮ್ಮ ಮುಂತಾದವರು ಈ ಸ್ತರಕ್ಕೆ ಸೇರಿದವರು. ಇವರೆಲ್ಲರೂ ಕೌಟುಂಬಿಕ ನೆಲೆಯಲ್ಲಿ ಪಿತೃಪ್ರಧಾನ್ಯವನ್ನು ಮೀರಲಾರದವರೇ, ಆದರೆ ಒಳಗಿನ ಸತ್ಯ ಮಾತೃತ್ವದ ಅಂತಃಕರಣ ವಿವೇಚನೆಗಳಿಂದ ಅನ್ಯಾಯ ಕಂಡು ಮರುಗುವಷ್ಟಾದರೂ ಸಂವೇದನೆಯಿಂದ ತಾಯಂದಿರು ಮತ್ತು ಸೀತೆ ಅಧೀನತೆಯ ನೆಲೆಯಿಂದ ಸಮಾನತೆಯ ಕಡೆಗೆ ಮಾನವ ಜನಾಂಗವನ್ನು ವಿಕಾಸತತ್ವದ ಸಶಕ್ತ ಮೊಳಕೆಗಳನ್ನು ಹೊತ್ತಿರುವವರು, ಕಾದಂಬರಿ ಸೂಚಿಸುವ ಹೊಸ ಬದುಕಿನ ಮೌಲ್ಯಗಳ ಸಾಧ್ಯತೆಗೆ ಪ್ರತೀಕವಾದವರು ಎನ್ನಬಹುದು.

"ಸ್ತ್ರೀಯರು ಭಾಗವಹಿಸದೇ ಇರುವ, ಸಹಕರಿಸದೆ ಇರುವ ಯಾವುದೇ ಆಂದೋಳನವು ವಧುವೇ ಇಲ್ಲದ ಮದುವೆ ಇದ್ದಂತೆ. ಅವರು ಒಂದು ಜನಾಂಗದ ಆರೋಗ್ಯಕ್ಕೆ ಹೊಸ ಸಮಾಜದ ಜನ್ಮಕ್ಕೂ ಕಾರಣೀಭೂತರು. ಅಷ್ಟೇ ಅಲ್ಲದೆ ಅಹಿಂಸಾತ್ಮಕ ಹೋರಾಟಕ್ಕೆ ಮುಖ್ಯ ಬೆಂಬಲಿಗರೂ, ಸಹ".[3] ಈ ಹಿನ್ನೆಲೆಯಲ್ಲಿ ಗಮನಿಸಿದಾಗ ಸ್ತ್ರೀಯು ಯಾವುದೇ ಸಮಾರಂಭಕ್ಕೂ ಇಲ್ಲದೇ ಇರುವಂತಹ ಸನ್ನಿವೇಶದಲ್ಲಿ ಯಾವ ಚಟುವಟಿಕೆಗಳಿಗೆ ಚೈತನ್ಯವೇ ಕಂಡು ಬರುವುದಿಲ್ಲ. ಕನ್ನಡ ಪ್ರಥಮ ಕವಿಯತ್ರಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವಂತಹ ಅಕ್ಕಮಹಾದೇವಿ ಪುರುಷ ಪ್ರಧಾನ ವ್ಯವಸ್ಥೆಯನ್ನು ಧಿಕ್ಕರಿಸಿ ಮಹಿಳಾ ಸಮುದಾಯಕ್ಕೆ ಒಂದು ಹೊಸ ಚೈತನ್ಯವನ್ನು ನೀಡಿದಂತಹ ಧೀರ ಮಹಿಳೆ. ಅಕ್ಕಮಹಾದೇವಿ ಈ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಸ್ತ್ರೀಯರಿಗೆ ಪುರುಷರಂತೆ ಸರಿಯಾದ ಸ್ಥಾನಮಾನಗಳನ್ನು ನೀಡಬೇಕೆಂದು ಚಳುವಳಿಯ ಮೂಲಕ ತಮ್ಮ ಸ್ಥಾನಗಳನ್ನು ಪಡೆಯುವುದರಲ್ಲಿ ಯಶಸ್ವಿಯಾಗುತ್ತಾಳೆ. ಸ್ತ್ರೀಯು ಒಂದು ಭೋಗದವಸ್ತು ಮತ್ತು ಮಕ್ಕಳನ್ನು ಹೆರುವ ಯಂತ್ರ ಎಂದು ತಿಳಿಯುವುದು ತಪ್ಪು. ಅವಳು ಒಂದು ಹೊಸ ಸಮಾಜಕ್ಕೆ ಒಂದು ಜೀವನವನ್ನು ಸೃಷ್ಟಿಸುವ ದೇವತೆಯಾಗಿ ಕಾಣಿಸಿಕೊಳ್ಳುತ್ತಾಳೆ. ಕುವೆಂಪುರವರ ಕಾನೂರು ಹೆಗ್ಗಡಿತಿ ಕಾದಂಬರಿಯಲ್ಲಿ ಸುಬ್ಬಮ್ಮ ಪಿತೃಪ್ರಾಧಾನ್ಯದ ಸಂದರ್ಭದಲ್ಲಿ ಸ್ವತಃ ಶೋಷಿತಳು, ಆದರೆ ಜಾತಿ, ವರ್ಗಗಳ ಸಂದರ್ಭದಲ್ಲಿ ತನಗಿಂತ ದುರ್ಬಲ ಸ್ತರದ ಮಹಿಳೆಯರ ಶೋಷಕಿಯೂ ಆಗಿರುವುದು ಇದೇ ಬಗೆಯ ಸಾಂಸ್ಕೃತಿಕ ಸಂಕೀರ್ಣತೆಗೆ ನಿರ್ದಶನ. ಇಲ್ಲಿ ಒಂದು ಕಡೆ

ಸುಬ್ಬಮ್ಮನು ಉನ್ನತ ವರ್ಗದಿಂದ ಬಂದರೂ ಅಧಿಕಾರದ ಸಂದರ್ಭದಲ್ಲಿ ಕೆಳಜಾತಿಯವರನ್ನು ಶೋಷಣೆಗೆ ಒಳಪಡಿಸಿದರೆ ಅವಳು ಲೈಂಗಿಕ ಸಂಬಂಧಕ್ಕೆ ಸಿಲುಕಿದಂತಹ ಸಂದರ್ಭದಲ್ಲಿ ಶೋಷಕಿಯಾಗಿ ಕಂಡು ಬರುತ್ತಾಳೆ. ಸೀತೆಯನ್ನೇ ತೆಗೆದುಕೊಂಡಾಗ ಅವಳು ಹೂವಯ್ಯನ ಪ್ರಭಾವದಿಂದ ವಿದ್ಯಾಭ್ಯಾಸ ಹೊಂದಿದ್ದವಳು. ಕಾನೂರು ಹೆಗ್ಗಡಿತಿಯಲ್ಲಿ ಕೆಲವು ಪಾತ್ರಗಳು ದೈವವನ್ನು ನಂಬುತ್ತವೆ. ಚಂದ್ರಯ್ಯಗೌಡ, ವೆಂಕಪ್ಪಯ್ಯ ಜೋಯಿಸರು, ಗೌರಮ್ಮ, ಶ್ಯಾಮಯ್ಯಗೌಡರು, ಆದರೆ ಆ ನಂಬಿಕೆ ಎಷ್ಟು ರೂಢಿಗತವಾದದ್ದೆಂದರೆ ಅದು ನಂಬಿಕೆಯೂ ಅಲ್ಲ, ಸೀತೆಗೆ ದೆವ್ವ ಹಿಡಿದಿರುವುದನ್ನು ಕೆಲವು ಪಾತ್ರಕಗಳು ನಿರಾಕರಿಸುತ್ತವೆ ಜೊತೆಗೆ ಹೂವಯ್ಯನೆಂಬ ವಿದ್ಯಾವಂತ ಯುವಕನು ತಮ್ಮ ಹಳ್ಳಿಯಲ್ಲಿ ನಡೆಯುವಂತಹ ಮೂಢನಂಬಿಕೆಗಳನ್ನು ಪಲ್ಲಟಗೊಳಿಸುತ್ತಾನೆ. ಜೊತೆಗೆ ಸೀತೆಯೂ ರಾಮಯ್ಯನೊಂದಿಗೆ ಮದುವೆಯಾದ ಮೇಲೆ ಯಾವುದೇ ರೀತಿಯಲ್ಲಿಯೂ ಸಹಕರಿಸುವುದಿಲ್ಲ. ತಾನು ಮನಸಾರೆ ಪ್ರೀತಿಸಿದ್ದಂತಹ ವ್ಯಕ್ತಿ ಹೂವಯ್ಯನನ್ನು ಬಿಟ್ಟು ಬೇರೆ ಯಾರನ್ನೂ ಸಹ ಆ ದೃಷ್ಟಿಯಿಂದ ನೋಡಿರುವುದಿಲ್ಲ. ಈ ರೀತಿ ಸ್ಪಂದಿಸದೇ ಇರುವುದಕ್ಕೆ ಕಾರಣ ಸೀತೆಯ ಮೇಲೆ ದೆವ್ವ ಹಿಡಿದಿರಬಹುದೆಂದು ತಿಳಿದ ರಾಮಯ್ಯ ಚಂದ್ರಯ್ಯಗೌಡರನ್ನು ಕೂಡಿಕೊಂಡು ಸೀತೆಯ ತೋಳಿಗೆ ಬರೆ ಹಾಕುತ್ತಾರೆ. ಜೊತೆಗೆ ಅವರ ಮನಸ್ಥಿತಿಗೆ ದೆಯ್ಯದ ಮೇಲೆ ನಂಬಿಕೆ ಇಲ್ಲದಿರುವುದು ಗೊತ್ತಾದ ಮೇಲೆ ಪ್ರೀತಿಯ ಇನ್ನೊಂದು ವಿಕೃತರೂಪ ಹಿಂಸೆ ಎಂಬುದು ಅವರ ಮನಸ್ಸಿನಲ್ಲಿ ಮೂಡುತ್ತದೆ. ಧಾರ್ಮಿಕ ವಿಧಿ, ಆಚರಣೆಗಳು ದೇವಿಯ ಆರಾಧಕರಾಗಿ ಮೈದುಂಬಿಕೊಂಡು ಅನೇಕ ಆದೇಶಗಳನ್ನು ತಾಳಿರುವುದನ್ನು ಕಾದಂಬರಿಯಲ್ಲಿ ಕಾಣಬಹುದು. ಹೆಣ್ಣನ್ನು ಆಸ್ತಿ ಮತ್ತು ವರದಕ್ಷಿಣೆಗಾಗಿ ಹಿಂಸಿಸಿ ಸುಡಬಲ್ಲವರಿದ್ದಾರೆ. ಜನಸಾಮಾನ್ಯರ ಮೆಚ್ಚುಗೆಗೆ ಕೆಲವು ಪುರುಷಪ್ರಧಾನ ಕುಟುಂಬಗಳು ಸಾಮೂಹಿಕವಾಗಿ ಸುಪ್ತಪ್ರಜ್ಞೆಯಲ್ಲಿ ಮಾತೃದೇವೋಭವ ಎಂಬ ಆಜ್ಞೆಯ ಮಂತ್ರವಾಗಿ ಕೆಲಸ ಮಾಡುವುದರಿಂದ ಅದು ಬಹಿರಂಗದ ಮಾತೃ ದೇವತೆಗಳ ಆರಾಧನೆಯಾಗಿ ಬಿಡುಗಡೆ ಹೊಂದಬಹುದು. ಆದರೆ ಆನಂತರ ಹೆಂಡತಿಯನ್ನು ಬಡಿಯುವುದು, ಬಹುಪತ್ನಿತ್ವದ ಮೂಲಕ ಆಕೆಗೆ ಅನ್ಯಾಯ ಮಾಡುವುದು ಆಕೆಯನ್ನು ಕೇವಲ ದುಡಿಯುವ ಲೈಂಗಿಕ ತೊತ್ತಿನಂತೆ ಕಾಣುವುದು, ಈ ಹಿಂಸೆ, ದೌರ್ಜನ್ಯದ ಅಂಶ ಜಾತಿ ವ್ಯವಸ್ಥೆ ವರ್ಣಭೇದಗಳಿಂದ ಇಷ್ಟು ಕ್ರೂರವಾಗಿ ಆಗುವುದುಂಟು. ಜೊತೆಗೆ ಅನಕ್ಷರತೆ, ಬಡತನದ ಫಲವಾಗಿ ಕಾದಂಬರಿಯಲ್ಲಿ ಸ್ತ್ರೀಯರ ತಾರತಮ್ಯಗಳ ಮೂಲಕ ಅಸಂಖ್ಯ ದುಃಖ ನೋವುಗಳನ್ನು ಕಾಣಬಹುದು.

"ಪುರುಷನು ಪರಸ್ಪರ ಎರಡು ವಿರುದ್ಧ ಕಾಮನೆಗಳಿಂದ ತೊಯ್ಯಲ್ಪಟ್ಟಿದ್ದಾನೆ. ಅವನಿಗೆ ಆತನ ಹೆಣ್ಣು ತೇಜೋಮಯಿಯಾಗಿ, ಬುದ್ಧಿವಂತೆಯಾಗಿ, ಸುಂದರಿಯಾಗಿ, ಒಟ್ಟಿನಲ್ಲಿ ಚೈತನ್ಯಮಯಿಯಾಗಿ ಇರಬೇಕೆಂದಾಸೆ. ಇದರೊಡನೆಯೇ ಆಕೆ ಸಂಪೂರ್ಣ ತನ್ನವಳೇ ಆಗಬೇಕೆಂಬ ಆಸೆ. ಆದರೆ ಆಕೆಯೇ ಆಗಲಿ, ಆತನೇ ಆಗಲಿ ಒಂದು ಮರವೋ ಕಲ್ಲೋ ಆದಂತಹ ಜಡಮನಸ್ಥಿತಿಗೆ ದೂಡದೆ ಸಂಪೂರ್ಣ ಇನ್ನೊಬ್ಬರವಳಾಗಲು ಸಾಧ್ಯವೇ ಇಲ್ಲ. ಮನುಷ್ಯ ಆಕೆ ಚೈತನ್ಯಪೂರ್ಣಳು ತೇಜೋಮಯಿಯೂ ಎಂದರೆ ಸ್ವತಂತ್ರಳೂ ಆಗಬೇಕೆಂದು ಬಯಸುತ್ತಾ ಅದೇ ಸಮಯದಲ್ಲಿ ಅದಕ್ಕೆ ಸಂಪೂರ್ಣ ತದ್ವಿರುದ್ಧವಾಗಿ ಆಕೆ ತನ್ನವಳೂ ಅಸ್ವತಂತ್ರಳೂ, ಶರಣಾಗತಳೂ ಆಗಬೇಕೆಂದು ಬಯಸುತ್ತಾನೆ".[4] ಈ ಅಂಶವನ್ನು ಗಮನಿಸಿದಾಗ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣು ಸೌಂದರ್ಯದಲ್ಲಿ ಬಹಳ ಸುಂದರಿಯಾಗಿರಬೇಕು, ಬುದ್ಧಿವಂತಳಾಗಿರಬೇಕೆಂದು ಬಯಸುವ ಈ ಪುರುಷ ಸಮಾಜ ಅವಳ ವೈಯಕ್ತಿವಾದ ಸ್ವತಂತ್ರವನ್ನು ನಿರಾಕರಿಸುತ್ತಾರೆ. ಮತ್ತು ಎಲ್ಲಾ ರೀತಿಯಲ್ಲೂ ತನ್ನವಳೇ ಆಗಿರಬೇಕೆಂಬ ಸ್ವಾರ್ಥವನ್ನು ಕಾಣಬಹುದು. ಫ್ರೆಂಚ್ ಲೇಖಕಿಯಾದ 'ಸಿಮೋನ್ ದ ಬೋವ' ಹೇಳುವ ಹಾಗೆ "ಹೆಣ್ಣು ಹುಟ್ಟಿನಿಂದ ಯಾವಾಗಲೂ ಹೆಣ್ಣಾಗಿರುವುದಿಲ್ಲ ಅವಳನ್ನು ಕಾಲಾಂತರದಲ್ಲಿ ರೂಪಿಸಲಾಗುತ್ತದೆ. ನಾವು ಪ್ರಧಾನವಾಗಿ ಕುಟುಂಬ ವ್ಯವಸ್ಥೆಯನ್ನು ತೆಗೆದುಕೊಂಡಂತಹ ಸಂದರ್ಭದಲ್ಲಿ ಹೆಣ್ಣು ಮಗಳು ಪುರುಷನ ನಿಯಮಗಳಿಗೆ ಮೀರಿ ಬೆಳೆಯಬಾರದು ಎಂದು ಅವಳನ್ನು ನಿಯಂತ್ರಣದಲ್ಲಿಡುತ್ತೇವೆ. ಸ್ತ್ರೀಯರ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುವುದನ್ನು ಕುಟುಂಬ ವ್ಯವಸ್ಥೆಯನ್ನು ಪ್ರಧಾನವಾಗಿ ಕಾಣಬಹುದು. ಶೃಂಗಾರವನ್ನು ಸೃಷ್ಟಿಸುವುದಕ್ಕಾಗಿ ಸ್ತ್ರೀಯು ದೇಹ ಸಮೃದ್ಧಿಯನ್ನೇ ವರ್ಣಿಸುವುದು, ಸುಖದ ಕಲ್ಪನೆಗಳಿಗೆ ಸ್ತ್ರೀಯರನ್ನು ಅಲಂಕರಣದ ವಸ್ತುವಾಗಿ ಬಳಸುವುದು ವಿರಕ್ತಿ ಧರ್ಮದ ಕೊಂಡಾಟಕ್ಕಾಗಿ ಸ್ತ್ರೀನಿಂದನೆ, ಸ್ತ್ರೀಯ ಅವಹೇಳನವನ್ನು ಧಾಳಾಗಿ ಪ್ರತಿಪಾದಿಸುವುದು" ಸ್ತ್ರೀಯರು ಏಕೆ ಅಪಮೌಲ್ಯಕ್ಕೆ ಗುರಿಯಾಗುತ್ತಾರೆಂದರೆ ಅಲ್ಲಿನ ವ್ಯವಸ್ಥೆಯೇ ಕಾರಣವಾಗಿರುತ್ತದೆ. ಪುರುಷ ಮತ್ತು ಸ್ತ್ರೀಯು ಹೃದಯದ ಬೆಸುಗೆ ಗಟ್ಟಿಯಾಗಿದ್ದಂಥ ಸಂದರ್ಭದಲ್ಲಿ ಯಾವುದೇ ಕಾರಣಕ್ಕೂ ಬಿರುಕು ಉಂಟಾಗುವುದಿಲ್ಲ. ಉದಾಹರಣೆಗೆ ಪಂಪನ ಆದಿಪುರಾಣದಲ್ಲಿ ಬರುವಂತಹ ಶ್ರೀಮತಿ-ವಜ್ರಜಂಘರ ಜನ್ಮಜನ್ಮಾಂತರದ ಅನ್ಯೋನ್ಯ ಪ್ರೇಮ ಎಷ್ಟು ಆದರ್ಶಕೃತವೆಂದರೆ, ಸಂಭೋಗನಿರತ ದಂಪತಿಗಳು ಕಾಳೋಗರ ಧೂಪದಿಂದ ಉಸಿರು ಕಟ್ಟಿ ಒಬ್ಬರೊಬ್ಬರ ತೆಕ್ಕೆಯಲ್ಲೋ ಒಟ್ಟಾಗಿ ಸಾಯುವಂಥ ಸ್ಥಿತಿಯನ್ನು ಕಾಣಬಹುದು. ಹಾಗೆಯೇ ಲಿಂಗಭೇದ ವ್ಯವಸ್ಥೆಯ ವಿರುದ್ಧವಾಗಿ ಪ್ರತಿಭಟನೆಯನ್ನು ತೋರಿದ ಸಾಹಿತ್ಯಗಳಲ್ಲಿ ವಚನ ಸಾಹಿತ್ಯವು ಒಂದಾಗಿದೆ. ಜಾತಿ, ಮತ, ಲಿಂಗ, ವರ್ಗ ಮುಂತಾದ ಸಾಮಾಜಿಕ ಭೇದಗಳನ್ನು

ತೊಡೆದುಹಾಕಿ ಸರ್ವಸಮಾನತೆಯನ್ನು ಕಾಪಾಡುವುದರಲ್ಲಿ ವಚನಗಾರ್ತಿಯರ ಪಾತ್ರ ಪ್ರಮುಖವಾದದ್ದು. ಈ ಹಿಂದೆ ಪ್ರಸ್ತಾಪಿಸಿದಂತೆ ರಾಮಾಯಣದಲ್ಲಿ ಬರುವಂತಹ ಸೀತೆಯಲ್ಲಿಯೂ ಮೌನದ ಪ್ರತಿಭಟನೆಯ ವ್ಯಕ್ತಿತ್ವ ಇತ್ತೆಂಬುದಕ್ಕೆ ಕೆಳಗಿನ ನಿದರ್ಶನವನ್ನು ನೋಡಬಹುದಾಗಿದೆ. ಸೀತೆಯು ತುಂಬು ಗರ್ಭಿಣಿಯಾಗಿದ್ದಂತ ಸಂದರ್ಭದಲ್ಲಿ ರಾಮ ಕಾಡಿಗೆ ಕಳುಹಿಸುತ್ತಾನೆ. ಸೀತೆ ಋಷಿಗಳ ಆಶ್ರಮ ಸೇರಿ ಅಲ್ಲಿ ಲವ-ಕುಶರಿಗೆ ಜನ್ಮ ನೀಡುತ್ತಾಳೆ. ಕಾಲನಂತರದಲ್ಲಿ ಲವ-ಕುಶರು ಯಜ್ಞಕ್ಕೆ ಬಂದಿದ್ದ ಕುದುರೆಯನ್ನು ಕಟ್ಟಿಹಾಕಿ ಲಕ್ಷಣ ಮತ್ತು ಭರತರ ನಡುವೆ ಯುದ್ಧ ಮಾಡಿ ಸೋಲಿಸುತ್ತಾರೆ. ಅಷ್ಟರಲ್ಲಿ ಸೀತೆ ಬಂದು ರಾಮನನ್ನು ತೋರಿಸಿ ಇವರೇ ನಿಮ್ಮ ತಂದೆ ಎಂದು ಪರಿಚಯಿಸಿ ತಂದೆ ಮಕ್ಕಳನ್ನು ಒಂದು ಮಾಡುತ್ತಾಳೆ. ಆಗ ರಾಮ ಅರಮನೆಗೆ ಹೋಗೋಣವೆಂದು ಕರೆದಾಗಲೂ ಅವಳು ಮೌನವಾಗಿರುತ್ತಾಳೆ. ಇಲ್ಲಿನ ಸೀತೆಯ ಮೌನ ಎಷ್ಟು ವಿಸ್ತಾರವಾಗಿದೆ ಎಂದರೆ ಅವಳ ಮನಸ್ಸಿನಲ್ಲಿ ಕೋಪವೂ ಇದೆ, ಪ್ರತಿಭಟನೆಯೂ ಇದೆ. ಆದರೆ ಸೀತೆಯು ಮತ್ತೊಂದು ರೀತಿಯಲ್ಲಿ ಯೋಚನಾಮಗ್ನಳಾಗುತ್ತಾಳೆ. ಜೊತೆಗೆ ರಾವಣನ ಸೆರೆಯಲ್ಲಿದ್ದಾಗ ನಾನು ಪರಿಶುದ್ಧಳೊ ಇಲ್ಲವೋ ಎಂಬುದನ್ನು ಪರೀಕ್ಷಿಸಲು ನನ್ನನ್ನೂ ಅಗ್ನಿಪರೀಕ್ಷೆಗೆ ಒಳಪಡಿಸಿದ ಈ ರಾಮ ಇಷ್ಟು ದಿನ ಮುನಿಗಳ ಆಶ್ರಮದಲ್ಲಿ ಕಳೆದ ನನಗೆ ಇನ್ಯಾವ ಕ್ರಮ ಕೈಗೊಳ್ಳುತ್ತಾನೋ ಮತ್ತು ಇನ್ಯಾವ ಕಷ್ಟಗಳನ್ನು ಎದುರಿಸಬೇಕು ಜೊತೆಗೆ ತುಂಬು ಗರ್ಭಿಣಿ ಎಂಬ ಪ್ರಜ್ಞೆಯೂ ಇಲ್ಲದೆ ಕಾಡಿಗೆ ಅಟ್ಟಿದ, ಆಶ್ರಮದಲ್ಲಿದ್ದುದಕ್ಕೆ ಇನ್ನೂ ಕೆಲವು ಪ್ರಶ್ನೆಗಳನ್ನು ಕೇಳಿ ಮತ್ತೆ ಕಾಡಿಗೆ ಕಳುಹಿಸಬಹುದೇ ಎಂಬುದು ಅವಳ ಮನಸ್ಥಿತಿಯಲ್ಲಿಯೇ ವ್ಯಕ್ತವಾಗುತ್ತದೆ. ಸೀತೆ ತನ್ನ ಮನಸ್ಸನ್ನು ಚಿಂತನೆಗೆ ಒಳಪಡಿಸಿದ್ದಾಳೆ. ಏಕೆಂದರೆ ತುಂಬು ಗರ್ಭಿಣಿ ಎಂದು ಗೊತ್ತಾದರೂ ಸಹ ಮನುಷ್ಯತ್ವವಿಲ್ಲದ ಈ ರಾಮ ಕಾಡಿಗೆ ಕಳುಹಿಸಿದ ಮುಂದೆ ರಾಮ ಇನ್ನೂ ಯಾವ ರೀತಿಯಲ್ಲಿ ವರ್ತಿಸಬಹುದೆಂಬುದನ್ನು ತನ್ನ ಮನಸ್ಸಿನಲ್ಲಿಯೇ ಪ್ರಶ್ನೆ ಮಾಡಿಕೊಳ್ಳುತ್ತಿದ್ದಳು. ಇಲ್ಲಿ ಸೀತೆಯ ಪ್ರತಿಭಟನೆ ಒಂದು ರೀತಿಯ ಕ್ರೌರ್ಯದ ಪ್ರತಿಭಟನೆಯೆಂದರೆ ಬಹುಶಃ ತಪ್ಪಾಗಲಾರದು ರಾಮನ ಹೇಳಿಕೆಯಂತೆ 'ಬಾ' ಎಂದು ಕರೆದಾಗ ಬರುವುದಕ್ಕೆ 'ಹೋಗು' ಎಂದು ದೂಡಿದಾಗ ಹೋಗುವುದಕ್ಕೆ ಸಾಧ್ಯವಿಲ್ಲ. ನನಗೂ ಒಂದು ವ್ಯಕ್ತಿತ್ವವಿದೆಯೆಂಬುದನ್ನು ಸೀತೆ ಈ ರೀತಿಯಾಗಿ ತೋರ್ಪಡಿಸಿಕೊಂಡಿದ್ದಾಳೆ. ಹೀಗಾಗಿ ಸೀತೆಯ ಮನಸ್ಸಿನಲ್ಲಿ ಪ್ರತಿಭಟನೆ ಜೊತೆಗೆ ಅವಳ ಅಂತರಾಳದ ವೇದನೆಯನ್ನು ಗಮನಿಸಬೇಕಾಗಿದೆ. ಇಲ್ಲಿ ಮುಖ್ಯವಾಗಿ ಸೀತೆಯು ಸಹ ರಾಮನ ತಪ್ಪನ್ನು ಪರೋಕ್ಷವಾಗಿ ಎತ್ತಿತೋರಿಸಿದ್ದಾಳೆಂದರೆ ತಪ್ಪಾಗಲಾರದು. ಕಾನೂರು ಹೆಗ್ಗಡಿತಿ ಕಾದಂಬರಿಯನ್ನು ಸ್ತ್ರೀತ್ವದ ನೆಲೆಯಲ್ಲಿ ಗ್ರಹಿಸಿದಾಗ ಪುರುಷಪ್ರಧಾನ ವ್ಯವಸ್ಥೆಯ ವಿರುದ್ಧ ಸ್ತ್ರೀಯು ಹೇಗೆ ಆಸೆ, ಆಕಾಂಕ್ಷೆಗಳನ್ನು

ಬಲಿಕೊಡುತ್ತಾಳೆಂಬುದನ್ನು ಕಾದಂಬರಿಯಲ್ಲಿ ಬರುವಂತಹ ಸ್ತ್ರೀ ಪಾತ್ರಗಳು ತಮ್ಮದೇ ಆದ ರೀತಿಯಲ್ಲಿ ವಿರೋಧಿಸುತ್ತವೆ. ಬೈರ ರಾತ್ರಿಯ ವೇಳೆಯಲ್ಲಿ ಪಾನಮತ್ತನಾಗಿ ಬಂದು ತನ್ನ ಹೆಂಡತಿಯಾದ ಸೇಸಿಗೆ ಹೊಡೆಯುತ್ತಾನೆ. ಇದು ಸರ್ವಸಾಮಾನ್ಯವಾದ ವಿಷಯವಾಗಿದ್ದರೂ ಹೂವಯ್ಯನಂಥ ಪ್ರಜ್ಞಾವಂತ ಮತ್ತು ಕ್ರಿಯಾಶೀಲವ್ಯಕ್ತಿಯು ಬೈರನನ್ನು ಬೈಯ್ದು ಕುಟುಂಬದ ವಿಷಯದ ಬಗ್ಗೆ ನೀತಿಪಾಠ ಹೇಳುತ್ತಾನೆ. ಹೂವಯ್ಯ ನಗರಕ್ಕೆ ಹೋಗಿ ವಿದ್ಯಾಭ್ಯಾಸ ಮುಗಿಸಿಕೊಂಡು ರಜಾದಿನಗಳನ್ನು ಹಳ್ಳಿಯಲ್ಲಿ ಕಳೆಯುವುದಕ್ಕೆ ಬರುವಂತಹ ಸಂದರ್ಭದಲ್ಲಿ ಗಾಡಿಯ ಜಾರಿಬಿದ್ದು ಬೆನ್ನು ಮೂಳೆ ಮುರಿಯುತ್ತದೆ. ಹೂವಯ್ಯ ಮುತ್ತಳ್ಳಿಗೆ ಬಂದು ಸ್ವಲ್ಪ ದಿನಗಳು ನೆಲೆಸುತ್ತಾನೆ. ಆಗಿನ ಸಂದರ್ಭದಲ್ಲಿ ಸೀತೆ ಮತ್ತು ಹೂವಯ್ಯನ ನಡುವೆ ಪ್ರೇಮ ತೀವ್ರವಾಗಿ ಬೆಳೆಯುತ್ತದೆ. ಹೀಗೆ ಇರುವಂತಹ ಸಂದರ್ಭದಲ್ಲಿ ಇವರಿಬ್ಬರ ಪ್ರೀತಿಗೆ ಅಡ್ಡ ಬಂದಂತಹ ವ್ಯಕ್ತಿ ವೆಂಕಪ್ಪಯ್ಯ ಜೋಯಿಸರು ಹೂವಯ್ಯನ ಜೊತೆ ನಡೆಯುವಂತಹ ಸೀತೆಯ ಮದುವೆ ರಾಮಯ್ಯನಿಗೆ ನಿಶ್ಚಯವಾಗುತ್ತದೆ. ಸೀತೆಯು ವಿಷಯ ಕೇಳಿದ ನಂತರ ಮನೋರೋಗಕ್ಕೆ ತುತ್ತಾಗುತ್ತಾಳೆ. ಸೀತೆ ರಾಮಯ್ಯನೊಂದಿಗೆ ಮದುವೆಗೆ ತೋರುವ ರೋಗ ಹೆಚ್ಚಿನ ಅವೇಚನದ ಪ್ರತಿಭಟನೆ ಸುಪ್ತ ಪ್ರಜ್ಞೆಯಾಗಿ ಕಂಡು ಬರುತ್ತದೆ. "ಶ್ಯಾಮಯ್ಯಗೌಡರು ಹಳ್ಳಿಯ ವೈದ್ಯರಿಂದ ಮದ್ದು ಕೊಡಿಸಿದರು. ಅಗ್ರಹಾರದ ವೆಂಕಪ್ಪಯ್ಯ ಜೋಯಿಸರು ನಿಮಿತ್ತ ನೋಡುವುದು, ತಾಯತಿ ಕಟ್ಟುವುದು, ದಾನ ತೆಗೆದುಕೊಳ್ಳುವುದು, ಸತ್ಯನಾರಾಯಣ ವ್ರತ ಮಾಡಿಸುವುದು, ಭೂತಾದಿಗಳಿಗೆ ಬಲಿಕೊಡುವುದು.. ಇತ್ಯಾದಿ ಕರ್ಮ ಕ್ರಿಯೆಗಳಿಂದ ಸೀತೆಯ ಕ್ಷೇಮದ ಸಲುವಾಗಿ ಬಹಳ ಪ್ರಯತ್ನ ಮಾಡಿದರೂ ಯಾವುದೇ ಸಫಲವಾಗಲಿಲ್ಲ. ಆದರೂ ಅಸಮರ್ಥ ಜೋಯಿಸರು ರೋಗಿಯ ಕೇಡನ್ನೆಲ್ಲಾ ತಾವೇ ಹೊತ್ತುಕೊಳ್ಳುವ ಧರ್ಮ ಬುದ್ಧಿಯಿಂದ ವಿಧವಿಧವಾದ ದಾನಗಳನ್ನು ಸ್ವೀಕಾರ ಮಾಡುವ ಸೇವಾ ಕಾರ್ಯಕ್ಕೆ ಕೈಹಾಕಿದರು".[5] ಈ ಹಿನ್ನೆಲೆಯಲ್ಲಿ ಒಂದು ಕಡೆ ವೆಂಕಪ್ಪಯ್ಯ ಜೋಯಿಸರಿಂದ ಸೀತೆಯನಿಂದ ಚಂದ್ರಯ್ಯಗೌಡರು ಮತ್ತು ಶ್ಯಾಮಯ್ಯಗೌಡರ ನಡುವಿನ ಸಂಬಂಧ ವೆಂಕಪ್ಪಯ್ಯ ಜೋಯಿಸರ ಮೂಢನಂಬಿಕೆಯಿಂದ ಅವರಿಗೆ ಹೆಚ್ಚಿನ ಲಾಭ ಉಂಟಾಗುತ್ತದೆಯೇ ಹೊರತು ಸೀತೆಗೆ ಯಾವ ರೀತಿಯಿಂದ ಸಹಾಯವಾಗುವುದಿಲ್ಲ. ಈ ಕುತಂತ್ರಕ್ಕೆ ಜೋಯಿಸರೇ ಕಾರಣ ಮತ್ತು ರಾಮಯ್ಯ ಮತ್ತು ಸೀತೆಯ ಮದುವೆಯ ಸಂದರ್ಭದಲ್ಲಿಯೂ ಸಹ ರಾಮಯ್ಯ ತಾಳಿ ಕಟ್ಟುವುದಕ್ಕೆ ನಿರಾಕರಿಸಿದ್ದಂತಹ ಸಂದರ್ಭದಲ್ಲಿ ಜೋಯಿಸರೇ ಸೀತೆಗೆ ತಾಳಿಯನ್ನು ಕಟ್ಟುತ್ತಾರೆ. ಈ ಎಲ್ಲಾ ಕುತಂತ್ರಗಳನ್ನು ಮಾಡಿದರೂ ಸಹ ರಾಮಯ್ಯನ ಜೊತೆ ಸೀತೆಯು ಒಲ್ಲದ ಮನಸ್ಸಿನಿಂದ ಸಂಸಾರ ಮಾಡುವುದಾದರೂ ಹೇಗೆ, ಈ ಬಲವಂತದ ಮದುವೆಯ ಸಂಸಾರವು ಮುರಿದು

ಬೀಳುತ್ತದೆ. ಚಂದ್ರಯ್ಯಗೌಡರು ರಾಮಯ್ಯ ಮತ್ತು ಸೀತೆಯರ ದಾಂಪತ್ಯ ನಡೆಯದೇ ಕ್ರೂರ ದಬ್ಬಾಳಿಕೆಯಿಂದ ಹೆದರಿ ರಾತ್ರೋರಾತ್ರಿ ತನ್ನ ಗಂಡನ ಮನೆಯನ್ನು ತೊರೆದು ಪರಾರಿಯಾಗುವ ಮೂಲಕ ಪ್ರತಿರೋಧವನ್ನು ವ್ಯಕ್ತಪಡಿಸುತ್ತಾಳೆ. ಆಮೇಲೆ ರಾಮಯ್ಯನೊಂದಿಗೆ ಬದುಕಲು ಕಾನೂರಿಗೆ ಬರಲು ಬಲವಾಗಿ ನಿರಾಕರಿಸುತ್ತಾಳೆ. ಮುಂದೆ ಆತ ಸತ್ತ ನಂತರ ಹೂವಯ್ಯನೊಂದಿಗೆ ಆದರ್ಶ ತಪಸ್ವಿನಿಯಂತೆ ಕಾನೂರಿನಲ್ಲಿ ಬಂದು ನೆಲೆಸುತ್ತಾಳೆ. ಹೂವಯ್ಯನ ಬಗ್ಗೆ ಸೀತೆಗೆ ಇರುವ ಭಕ್ತಿ, ಪ್ರೀತಿ, ಈಕೆಯ ಪ್ರತಿಭಟನೆಯ ಸತ್ಯ ಕೂಡ ಕಾರ್ಯತಃ ವ್ಯಕ್ತವಾಗಿರುವುದನ್ನು ಗಮನಿಸಬಹುದು. ಜೊತೆಗೆ ರಾಮಾಯಣದಲ್ಲಿ ಬರುವಂತಹ ಊರ್ಮಿಳೆಯು ವನವಾಸಕ್ಕೆ ರಾಮಲಕ್ಷ್ಮಣರು ಕಾಡಿಗೆ ಹೋದಂತಹ ಸಂದರ್ಭದಲ್ಲಿ ತನ್ನ ಗಂಡನಾದ ಲಕ್ಷ್ಮಣನ ಯೋಗಕ್ಷೇಮದ ಬಗ್ಗೆ ಕಾಳಜಿ ವಹಿಸಿ ತಪಸ್ವಿನಿಯಾಗಿ ಕಾಣಿಸಿಕೊಳ್ಳುತ್ತಾಳೆ. "ಸಾವಿತ್ರಿ ತನ್ನ ಪತಿಯ ಬಗೆಗೆ ಇಟ್ಟಿರುವ ಗೌರವನ್ನು ಗಮನಿಸಿದಾಗ ನಮ್ಮ ಸಂಸ್ಕೃತಿ ಪರಂಪರೆ ಎಷ್ಟು ಉನ್ನತವಾದುದೆಂಬುದು ಗಮನಾರ್ಹವಾದ ಸಂಗತಿ ಭಾರತೀಯರು ಸ್ತ್ರೀಗೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡಿರುವುದನ್ನು ಕಾಣುತ್ತೇವೆ. ಮಾತೃದೇವೋಭವ, ಪಿತೃದೇವೋಭವ, ಆಚಾರ್ಯ ದೇವೋಭವ ಕೇವಲ ತತ್ವಗಳಾಗಿ ಉಳಿದಿರುವುದನ್ನು ಕಾಣುತ್ತೇವೆ. ಮಾತೃ ಎಂಬುದನ್ನೇ ಮೊದಲು ಬಳಸಿದ್ದಾರೆಂದರೆ ಈಗಿನ ಸ್ತ್ರೀವಾದಿಗಳು ಮಹಿಳೆಯನ್ನು ದೇವತೆಯ ದೃಷ್ಟಿಯಿಂದ ಕಂಡು ಕಲ್ಲು ಗೊಂಬೆಯಾಗಿ ಒಂದು ಮೂಲೆಯಲ್ಲಿ ಕೂರಿಸುವುದು ಸಹ ಸ್ತ್ರೀ ಶೋಷಣೆಯ ಇನ್ನೊಂದು ಮುಖವೆಂದು ಅರ್ಥೈಸುವುದನ್ನು ನಾವು ಮರೆಯುವಂತಿಲ್ಲ".[6] ಈ ದಿಸೆಯಲ್ಲಿ ನೋಡಿದಾಗ ಕುವೆಂಪರವರ ಯಮನ ಸೋಲು ನಾಟಕದಲ್ಲಿ ಸಾವಿತ್ರಿ ಯಮನ ವಿರುದ್ಧ ತನ್ನ ಪತಿಯಲ್ಲಿ ಇಟ್ಟಿರುವಂತಹ ಅಪಾರವಾದ ಪ್ರೀತಿಯಿಂದ ಯಮನ ಮನಸ್ಸನ್ನು ಕರಗಿಸಿ ತನ್ನ ಪತಿಯ ಪ್ರಾಣವನ್ನು ಉಳಿಸಿಕೊಳ್ಳುವುದರಲ್ಲಿ ಯಶಸ್ವಿಯಾಗುತ್ತಾಳೆ. ಇಲ್ಲಿ ಸ್ತ್ರೀಯರನ್ನು ಮುಖ್ಯವಾಗಿ ದೈವಿಕ ಶಕ್ತಿಯಾಗಿ, ಪಿತೃದೇವೋಭವ ಮುಂತಾದ ತತ್ವಗಳಿಂದ ಹೆಣ್ಣನ್ನು ಪೂಜಿಸುತ್ತೇವೆ. ಆದರೆ ಸ್ತ್ರೀ ಬಗ್ಗೆ ಕುವೆಂಪುರವರಿಗೆ ಇದ್ದ ಗಾಢವಾದ ಭಕ್ತಿಭಾವನೆಗಳನ್ನು ಅವರ ಕೃತಿಯ ರಚನೆಯ ಸಂದರ್ಭದಲ್ಲಿ ಹೊಮ್ಮಿ ಬಂದಿರುವುದರಿಂದ ಸ್ತ್ರೀಯನ್ನು ಕುರಿತಾದ ಚಿಂತನೆಯಲ್ಲಿ ಶೋಷಣೆಯನ್ನು ಕಾಣಲು ಸಾಧ್ಯವಿಲ್ಲ. ಮೇಲಾಗಿ ಸ್ತ್ರೀಯನ್ನು ಪೂಜ್ಯ ಭಾವನೆಯಿಂದ ಕಂಡವರು ಕುವೆಂಪುರವರು. ಒಂದು ಕಡೆ ತಮ್ಮ ಹೆಂಡತಿಯನ್ನು ಜಗನ್ಮಾತೆ ಎಂಬರ್ಥದಲ್ಲಿ ಕಂಡಿದ್ದುಂಟು, ಇದಕ್ಕೆ ರಾಮಕೃಷ್ಣರ ಪ್ರಭಾವ ಅವರ ಮೇಲಾಗಿತ್ತೆಂಬುದನ್ನು ಸೂಚಿಸಬಹುದು. ಕಾನೂರು ಹೆಗ್ಗಡಿತಿ ಕಾದಂಬರಿಯಲ್ಲಿ ಹೆಣ್ಣನ್ನು ಕೀಳಾಗಿ ಕಾಣುವ ಪುರುಷಪ್ರಧಾನ ವ್ಯವಸ್ಥೆ ಕಾಲನಂತರದಲ್ಲಿ ಅವಳನ್ನು ದೇವತೆಯ ಘನತೆ

ಗೌರವ ಮಟ್ಟಕ್ಕೆ ಏರಿಸಲಾಗಿದೆ. ಕಾದಂಬರಿಯಲ್ಲಿ ಚಂದ್ರಯ್ಯಗೌಡರು ಸುಬ್ಬಮ್ಮನನ್ನು ದೇವತೆಯ ಮಟ್ಟದಲ್ಲಿ ಸ್ವೀಕರಿಸಿದ್ದಾರೆ. ಅಂದರೆ ಕೆಲವು ದಿನಗಳ ಹಿಂದೆ ಚಂದ್ರಯ್ಯಗೌಡರ ದೌರ್ಜನ್ಯ, ದಬ್ಬಾಳಿಕೆ, ಇವುಗಳ ಕೂಪಕ್ಕೆ ಸಿಲುಕಿ ಹೆಣ್ಣನ್ನು ದಾಸಿಯಾಗಿ ಸ್ವೀಕರಿಸುತ್ತಿದ್ದಂತಹ ಚಂದ್ರಯ್ಯಗೌಡರು ಆರೋಗ್ಯ ಹದಗೆಟ್ಟಿದ ನಂತರ ಹೆಣ್ಣಿನ ಬಗ್ಗೆ ಅಷ್ಟು ಕನಿಕರವು, ನೋವು, ಪ್ರಾರ್ಥನೆ ಮುಂತಾದ ಭಾವನೆಗಳನ್ನು ವ್ಯಕ್ತಪಡಿಸುವುದು ಕಂಡಬರುತ್ತದೆ ಮತ್ತು ಗೃಹದೇವತೆಯಾಗಿ ಸ್ವೀಕರಿಸಿರುವುದನ್ನು ಈ ಕಾದಂಬರಿಯಲ್ಲಿ ಕಾಣಬಹುದು. ಯಾವುದೇ ವಿಷಯದಲ್ಲಿ ಹೆಣ್ಣಿನ ಬಗ್ಗೆ ಸಹಾನುಭೂತಿ ಇಲ್ಲದೆ ಹೋದರೆ ನಂದನವನವೂ ಮರುಭೂಮಿಯಾಗುತ್ತದೆ. ಸ್ತ್ರೀ ತಪಸ್ವಿನಿಯ ಜೊತೆಗೆ ಸ್ನೇಹಿತೆಯಾಗಿ, ಸಹಧರ್ಮಿಣಿಯಾಗಿ ಸಂಸಾರದಲ್ಲಿ ತಪಸ್ವಿನಿಯಾಗಿ ಬದುಕನ್ನು ಉಜ್ವಲಗೊಳಿಸುವುದರಲ್ಲಿ ಅವಳ ಪಾತ್ರವು ಬಹಳ ಮುಖ್ಯವಾಗಿದೆ. ಭಾರತೀಯ ಸಮಾಜದಲ್ಲಿ ಎಲ್ಲಾ ವರ್ಗದ ನೆಲೆಯಲ್ಲಿಯೂ ಹೆಣ್ಣು ಇರುವುದರಿಂದ ಎಲ್ಲಾ ವರ್ಗದ ಸ್ತ್ರೀಯರಿಗೂ ಸಮಾನತೆಯನ್ನು ನೀಡಿ ಗೌರವಿಸಬೇಕು.

ಕುವೆಂಪು ರೈತನನ್ನು ನೇಗಿಲಯೋಗಿ ಎಂದು ಕರೆದು ಉನ್ನತೀಕರಿಸಿದಂತೆ ಹೆಣ್ಣನ್ನು ಮನೆಮನೆಯ ತಪಸ್ವಿ ಎಂದು ಕರೆದು ಗೌರವ ಘನತೆಯನ್ನು ತಂದುಕೊಟ್ಟರು. ವೈಚಾರಿಕ ಹಿನ್ನೆಲೆಯೊಂದಿಗೆ ಅತ್ಯಂತ ಅರ್ಥಪೂರ್ಣವಾಗಿ, ಆರೋಗ್ಯಕರ ನೆಲೆಯಲ್ಲಿ ಮನೆಯ ಬಗ್ಗೆ ಮಾತನಾಡಿದರು, ಈ ಮಾತುಗಳು ಮಾನವೀಯ ನೆಲೆಯಲ್ಲಿ ಎಷ್ಟರ ಮಟ್ಟಿಗೆ ಬೆಂಬಲ, ಸಮರ್ಥನೆ, ಸಹಾನುಭೂತಿ, ಅನುಕಂಪಗಳನ್ನು ಅಭಿವ್ಯಕ್ತಿಸಿವೆ ಎಂಬುದನ್ನು ಕಾನೂರು ಹೆಗ್ಗಡಿತಿ ಕಾದಂಬರಿಯಲ್ಲಿ ಪರಿಶೀಲಿಸಬಹುದು. ಕುವೆಂಪುರವರು ಸೃಷ್ಟಿಸಿರುವ ಸ್ತ್ರೀ ಪಾತ್ರಗಳೆಲ್ಲವೂ ಚಲನೆಯೊಂದಿಗೆ ಆರಂಭವಾಗುತ್ತವೆ ಮತ್ತು ಹೆಣ್ಣಿನ ಮೂಲಕ ಸಮಾಜದ ಚಲನೆಯನ್ನು ಕಂಡಿರಿಸಿದ್ದಾರೆ. ಇಂತಹ ಹೆಣ್ಣಿಗಾಗಿ ಗಂಡುಗಳ ಪಯಣ ನಿಸರ್ಗ–ಹೆಣ್ಣು–ಭೂಮಿಯ ಹುಡುಕಾಟವು ಕಾದಂಬರಿಯಲ್ಲಿ ಕಾಣಬಹುದು. ಆದರೆ ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಕಂಡುಬರುವ ಚಿನ್ನಮ್ಮನು ಸಂಪ್ರದಾಯವನ್ನು ಮೀರಿ ಬದಲಾಗುತ್ತಿದ್ದ ಸಾಮಾಜಿಕ ಧೋರಣೆಗಳಿಗೆ ಸ್ಪಂದಿಸಿದಳು. ಆದರೆ ಸೀತೆಯಂತೆ ಕೊರಗುತ್ತ ಕುಳಿತವಳಲ್ಲ, ಇಲ್ಲಿ ಮುಖ್ಯವಾಗಿ ಚಿನ್ನಮ್ಮ ತನ್ನ ಸಂಗಾತಿಯ ಆಯ್ಕೆಯ ಹಕ್ಕನ್ನು ತಾನೇ ನಿರ್ಣಯಿಸುವ ಸ್ವತಂತ್ರ ವ್ಯಕ್ತಿತ್ವ ಅವಳದು. ಆದರೆ ಸೀತೆಗೆ ತನ್ನ ಬಾಳ ಸಂಗಾತಿಯನ್ನು ಸ್ವತಂತ್ರವಾಗಿ ಆಯ್ಕೆ ಮಾಡಿಕೊಳ್ಳುವ ಹಕ್ಕು ಸಹ ಇಲ್ಲ. ಚಿನ್ನಮ್ಮ ಕೌಟುಂಬಿಕ ಚೌಕಟ್ಟನ್ನು ಒಪ್ಪದಿದ್ದಾಗ ಅದನ್ನು ಕಿತ್ತೆಸೆದು ಹೊರ ಬಂದಳು. ಆದರೆ ಸೀತೆಯು ಸಂಪ್ರದಾಯಕ್ಕೆ ಮತ್ತು ಮೌಢ್ಯತೆಗೆ ಸಿಲುಕಿ

ನೊಂದಳು. ತಾನು ಬಯಸಿದವನನ್ನು ಕೂಡುವ ಸನ್ನಿವೇಶವನ್ನು ನಾವು ಕಾದಂಬರಿ ಕೊನೆಯಲ್ಲಿ ಕಾಣಬಹುದು. ಸೀತೆಯ ಆಯ್ಕೆ ಕುಟುಂಬದ ವ್ಯವಸ್ಥೆಯು ಸರಿಯಾದ ರೀತಿಯಲ್ಲಿ ಸಹಕರಿಸಿದ ಅವಳ ಬಾಳನ್ನು ಹಾಳಾಗುವುದಕ್ಕೆ ಒಂದು ಕಡೆ ಪುರೋಹಿತಶಾಹಿ ಕಾರಣವಾದರೆ ಇನ್ನೊಂದು ಕಡೆ ಕುಟುಂಬ ವ್ಯವಸ್ಥೆಯು ಕಾರಣವಾಗುತ್ತದೆ.

"ಸುಬ್ಬಮ್ಮನಿಗೆ ಚಂದ್ರಯ್ಯಗೌಡರು ನೀಡುವ ಶಿಕ್ಷೆಯು ಅತ್ಯಂತ ಕ್ರೂರವಾದುದು ಪುರುಷ ಬಲತ್ಕಾರಗಳಿಗೆ ಬಲಿಯಾಗುವ ಮುಗ್ಧರು, ತಂದೆಯ ಬಡ್ತಿಗಾಗಿ ತಮ್ಮ ದೇಹವನ್ನು ಒತ್ತೆಯಿಡುವ ಮಕ್ಕಳು, ಒಡೆಯರ ಜೊತೆ ಮಲಗುವ ಜೀತದವರು, ಬಡತನದ ಬೇಗೆಯಿಂದ ಪಾರಾಗಲು ಶ್ರೀಮಂತರ ಮುದುಕರನ್ನು ಕೈ ಹಿಡಿಯುವ ಹೆಣ್ಣುಗಳು, ಯಾರನ್ನೋ ಬಯಸಿ ಯಾರನ್ನೋ ಮದುವೆಯಾಗುವವರು, ಭೂಮಾಲೀಕರ ಹಿತಗಳಿಗಾಗಿ ತಮ್ಮ ಪ್ರೇಮಿಗಳನ್ನು ಕಳೆದುಕೊಂಡು ಪಾಡುಪಡುವವರು ಹೀಗೆ ಬದುಕನ್ನು ಜೀವಂತಗೊಳಿಸಲು ಈ ಚೈತನ್ಯ ಶಕ್ತಿಗಳು ನಿಕೃಷ್ಟವಾದ ಸಾಮಾಜಿಕ ಧೋರಣೆಗಳಿಂದ ಪಡಬಾರದ ಪಾಡು ಪಡುತ್ತವೆ. ಸಂಘರ್ಷಹೀನವಾದ ಈ ಸ್ಥಿತಿಯಲ್ಲಿ ಪುರುಷ ದಬ್ಬಾಳಿಕೆಗೆ ಸಮ್ಮತಿ ಕೊಟ್ಟು ಶರಣಾಗತಿ, ಸಹಜವಾಗಿದೆ".[7] ಈ ಹಿನ್ನೆಲೆಯಲ್ಲಿ ಕಾನೂರು ಹೆಗ್ಗಡಿತಿ ಕಾದಂಬರಿಯಲ್ಲಿ ಚಂದ್ರಯ್ಯಗೌಡರ ದಬ್ಬಾಳಿಕೆ, ಶೋಷಣೆ ಮುಂತಾದವುಗಳಿಂದ ಉನ್ನತ ಶ್ರೇಣಿಗೆ ಸೇರಿದ ಚಂದ್ರಯ್ಯಗೌಡರು ಸುಬ್ಬಮ್ಮನ ಮೇಲೆ ಲೈಂಗಿಕ ಹಿಂಸೆಯಿಂದ ಅನೇಕ ತೊಂದರೆಗಳನ್ನು ಎದುರಿಸಬೇಕಾಗುತ್ತದೆ. ಜೊತೆಗೆ ಗಂಗೆಯು ಚಂದ್ರಯ್ಯಗೌಡರ ಲೈಂಗಿಕ ಸಮಸ್ಯೆಗೆ ಸಿಲುಕಿ ತನ್ನ ಬಾಳನ್ನು ಹಾಳುಮಾಡಿಕೊಳ್ಳುವುದು ಊಳಿಗಮಾನ್ಯ ವ್ಯವಸ್ಥೆಯ ಕ್ರೂರ ದಬ್ಬಾಳಿಕೆಯನ್ನು ಕಟ್ಟಿಕೊಡುತ್ತದೆ ಪ್ರಬಲ ಅಧಿಕಾರ ಕೇಂದ್ರಗಳನ್ನು ಮಣಿಸಿ ತಮ್ಮ ಕೈಯಲ್ಲಿ ಅಧಿಕಾರಗಳನ್ನು ಕೈಗೊಳ್ಳುವುದರಲ್ಲಿ ಚಂದ್ರಯ್ಯಗೌಡರು ಸತ್ತನಂತರ ಸುಬ್ಬಮ್ಮನು ಕಾನೂರಿಗೆ ಹೆಗ್ಗಡಿತಿಯಾಗುತ್ತಾಳೆ. ಇಷ್ಟು ದಿನ ಅಧೀನತೆಯಲ್ಲಿದ್ದಂತಹದ್ದು ಜೊತೆಗೆ ಬಡತನದಲ್ಲಿ ಬಂದಂತಹ ಸುಬ್ಬಮ್ಮ ಅಧಿಕಾರ ತನ್ನ ಕೈಗೆ ಸಿಕ್ಕ ನಂತರ ಅವಳಲ್ಲಿದ್ದಂತಹ ದರ್ಪ, ಕ್ರೌರ್ಯಗಳು ಹೆಡೆ ಎತ್ತಿದ್ದವು. ಹಾಗೆಯೇ ತನ್ನ ತಂದೆ ಮಾಡಿದಂತಹ ಸಾಲವನ್ನು ಮಗನು ತೀರಿಸುವಂತಹದು ಕಾದಂಬರಿಯಲ್ಲಿ ಅಣ್ಣಯ್ಯಗೌಡರು ಮಾಡಿದಂತಹ ಸಾಲಕ್ಕೆ ಓಬಯ್ಯ ಜೀತ ಮಾಡಿ ಸಾಲವನ್ನು ಜಮಾ ಮಾಡುವುದು ಮತ್ತು ಪುರುಷಪ್ರಧಾನ ವ್ಯವಸ್ಥೆಯು ಸೀತೆಗೆ ವೈಯಕ್ತಿಕ ಸ್ವಾತಂತ್ರ್ಯ ನೀಡಿದರೆ ಅವಳ ಬಾಳು ಭಗ್ನವಾಗುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಭೂಮಾಲೀಕರ ತೆಕ್ಕೆಗೆ ಸಿಲುಕಿ ಪ್ರೇಮಿಗಳು ಪಡುವಂತಹ ಪಾಡನ್ನು ಹೂವಯ್ಯ ಮತ್ತು ಸೀತೆಯ ಮುಖಾಂತರ ಕಾದಂಬರಿಯಲ್ಲಿ ಗಮನಿಸಬಹುದು.

"ತುಂಬಿರುವ ನೀರಿನ ಮೇಲೆ ಗೆರೆ ಎಳೆದು ನಿಲ್ಲಿಸಲು ಸಾಧ್ಯವೇನು? ಅಸ್ಪೃಶ್ಯರು, ಶೂದ್ರರು ಎನಿಸಿಕೊಂಡ ಬಾಂಧವರಿಗೆ ಸಮಾನತೆಯನ್ನು ನೀಡಲು ಎಷ್ಟು ಜನ ಬ್ರಾಹ್ಮಣರು ಸಿದ್ಧರಿದ್ದಾರೆ? ಆದ್ದರಿಂದ ಜಾತಿವಿನಾಶದ ಕಾರ್ಯ ಬ್ರಾಹ್ಮಣರಿಂದ ಸಾಧ್ಯವಿಲ್ಲ. ಅಸ್ಪೃಶ್ಯರೆನಿಸಿದ ಬಾಂಧವರಿಗೆ ಸಮಾನತೆ ನೀಡಲು ಅವರು ಸಿದ್ಧರಿಲ್ಲ. ಅಸ್ಪೃಶ್ಯತೆಯ ನಿವಾರಣೆಗೆ ಅವರು ಮುಂದೆ ಬರುವುದಿಲ್ಲ. ಏಕೆಂದರೆ ಜಾತಿಪದ್ಧತಿಯಿಂದ ಅವರು ಕಂಡಿರುವ ರುಚಿಯನ್ನು ಮರೆಯುವಂಥ ದಡ್ಡರೇನೂ ಅವರಲ್ಲ, ಧರ್ಮಶಾಸ್ತ್ರಗಳ ಸಹಾಯದಿಂದ ಅಸ್ಪೃಶ್ಯತೆ, ಜಾತಿವಿನಾಶ ಖಂಡಿತಾ ಸಾಧ್ಯವಿಲ್ಲ. ಎಂದಾದರೂ ಮಣ್ಣಿನಿಂದ ಮಣ್ಣಿನ ಕೊಳೆಯನ್ನು ತೊಳೆಯಲು ಸಾಧ್ಯವೇನು".[8] ಈ ಹಿನ್ನೆಲೆಯಲ್ಲಿ ಇಡೀ ಭಾರತದಲ್ಲೇ ಜಾತಿ ಎಂಬುದು ಪಾರ್ಥೇನಿಯಂ ತರಹ ಸಂಪೂರ್ಣವಾಗಿ ಹಬ್ಬಿರುವಂತಹದ್ದು, ಕೆಲವು ಕಡೆ ಜಾತ್ಯತೀತವಾಗಿ ಮಾತನಾಡಿದರೆ ಅದರ ವಾಸನೆ ಹೋಗುವುದೇ ಆದರೆ ಶೂದ್ರ ಮತ್ತು ಅಸ್ಪೃಶ್ಯನಿಗೆ ಸರಿಸಮಾನವಾದಂತಹ ಅರ್ಹತೆಯನ್ನು ನೀಡಲು ಯಾರು ಸಿದ್ಧರಿದ್ದಾರೆ? ಯಾರು ಸಹ ತಮ್ಮ ಅನುಕೂಲಗಳಿಗೆ ಧಕ್ಕೆ ಉಂಟಾಗಲು ಬಯಸುವುದಿಲ್ಲ. ಬ್ರಾಹ್ಮಣ ಸಮುದಾಯ ಯಾವುದೇ ಕಾರಣಕ್ಕೂ ಸಮಾನತೆಯನ್ನು ನೀಡಲು ಸಹಕರಿಸುವುದಿಲ್ಲ. ಅಸ್ಪೃಶ್ಯತೆಯ ನಿವಾರಣೆಗೆ ಮುಂದೆ ಬರುವುದಿಲ್ಲ ಏಕೆಂದರೆ ಜಾತಿಯಿಂದ ಒಂದು ಉನ್ನತ ಮಟ್ಟಕ್ಕಿರುವುದರಿಂದ ಈ ವರ್ಣ ಯಾವತ್ತೂ ಸಹ ಸಮಾನತೆಯನ್ನು ಕಾಪಾಡಲು ಸಾಧ್ಯವಿಲ್ಲ. ಈ ಜಾತಿಯಿಂದ ಅಸ್ಪೃಶ್ಯರಿಗೆ ಮತ್ತು ಶೂದ್ರವರ್ಗಕ್ಕೆ ಸರಿಸಮಾನಂದತಹ ಸೌಲಭ್ಯಗಳನ್ನು ನೋಡಿದರೆ ಅವರ ಬೊಕ್ಕಸಕ್ಕೆ ಧಕ್ಕೆ ಉಂಟಾಗುತ್ತದೆ. ಈ ಬ್ರಾಹ್ಮಣ ಸಮುದಾಯಕ್ಕೆ ಪುರಾಣ ಮತ್ತು ಧರ್ಮಶಾಸ್ತ್ರಗಳೇ ಬಂಡವಾಳ ಜೊತೆಗೆ ಈ ಬಂಡವಾಳವನ್ನು ಶೂದ್ರ ಸಮುದಾಯಕ್ಕೆ ಹಂಚುವುದು ಕಷ್ಟದ ಕೆಲಸ ಧರ್ಮಶಾಸ್ತ್ರಗಳನ್ನು ಇಟ್ಟುಕೊಂಡು ತಮ್ಮ ಹೊಟ್ಟೆಯನ್ನು ಹೊರೆದುಕೊಳ್ಳುತ್ತಾರೆ. ಧರ್ಮಶಾಸ್ತ್ರಗಳು ಇರುವ ತನಕ ಜಾತಿ ವಿನಾಶವನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಬ್ರಾಹ್ಮಣ ಸಮುದಾಯಕ್ಕೆ ಅಂಟಿಕೊಂಡಿರುವಂತಹ ಜಾತಿ ಎಂಬ ಕೊಳೆಯನ್ನು ತೊಳೆಯಲು ಸಾಧ್ಯವಾಗುವುದಿಲ್ಲ. ಜಾತಿಪದ್ಧತಿ ತೊಲಗಬೇಕಾದರೆ ಹಿಂದು ಧರ್ಮದ ಅನಿಷ್ಟ ಪದ್ಧತಿಗಳಾದ ಅಸ್ಪೃಶ್ಯತೆ ಹಾಗೂ ಮೇಲುಕೀಳಿನ ಭಾವನೆ ಮೂಢನಂಬಿಕೆಗಳನ್ನು ಬೆಳೆಸಿರುವ ವೇದ ಉಪನಿಷತ್ತು, ಪುರಾಣ ಮನುಸ್ಮೃತಿ ಮುಂತಾದ ಧಾರ್ಮಿಕ ಗ್ರಂಥಗಳ ವಿರುದ್ಧ ಹೋರಾಡುವುದರಿಂದ ಅಸ್ಪೃಶ್ಯತೆಯನ್ನು ತೊಲಗಿಸಬಹುದು. ವಸಾಹತುಶಾಹಿ ಸಂದರ್ಭದಲ್ಲಿ ಆಧುನಿಕ ಶಿಕ್ಷಣ, ತಂತ್ರಜ್ಞಾನ ಮುಂತಾದವುಗಳು ಇದರ ಪ್ರಭಾವದಿಂದ ಪಲ್ಲಟ ಹೊಂದಿದ್ದವು. ಆದರೆ ವಸಾಹತುಶಾಹಿ ಬಂದರೂ ಸಹ ಅಸ್ಪೃಶ್ಯತೆ ಮಾತ್ರ ವಿನಾಶವಾಗಲಿಲ್ಲ. ಬದಲಾಗಿ ಒಂದು ಜಾತಿಯ ಜನಾಂಗೀಯ ಶ್ರೇಷ್ಠತೆಯನ್ನು ಎತ್ತಿ ಹಿಡಿಯಿತು.

ಅಂದರೆ ಆರ್ಯ ಜನಾಂಗ ಯುರೋಪಿನ ಜನಾಂಗವಾದ್ದರಿಂದ ಅದು ಶ್ರೇಷ್ಠವೆಂದು ಪ್ರಚಾರ ಮಾಡಿತ್ತು. ಜಾತಿ ಕಟ್ಟುಪಾಡು, ಜಾತಿ ಶ್ರೇಣಿಕರಣ, ಜಾತಿ ನಡತೆಗಳಂತಹ ನೀಚ ಪದ್ಧತಿಗಳನ್ನು ತೊಲಗಿಸಿ ಒಂದು ಹೊಸ ವಾತಾವರಣವನ್ನು ಸೃಷ್ಟಿಸಬೇಕಾದಂತಹ ವಸಾಹತುಶಾಹಿ ಅದಕ್ಕೆ ತದ್ವಿರುದ್ಧವಾಗಿ ಜಾತಿಗೆ ಬೆಂಬಲ ನೀಡಿದ್ದು ಒಂದು ರೀತಿಯ ನೋವಿನ ಸಂಗತಿ ವಸಾಹತುಶಾಹಿಯಿಂದ ಮೇಲ್ಜಾತಿಯ ಸಮುದಾಯಕ್ಕೆ ಕೆಳಜಾತಿಗಳನ್ನು ತುಳಿಯುವುದಕ್ಕೆ ತಕ್ಕ ಅಸ್ತ್ರವನ್ನು ವಸಾಹತುಶಾಹಿ ರೂಪಿಸಿತು ಮತ್ತು ಬ್ರಿಟಿಷ್ ವಸಾಹತುಶಾಹಿಯಿಂದ ಅಸ್ಪೃಶ್ಯತೆ ಮುಂದುವರಿಯಲು ದಾರಿಮಾಡಿಕೊಟ್ಟಿತ್ತು ಮೇಲುವರ್ಗದ ಸಮುದಾಯ ಜಾತಿಯನ್ನು ಮುಖ್ಯ ಕೇಂದ್ರವಾಗಿಟ್ಟುಕೊಂಡು ತಮ್ಮ ಅಸ್ತಿತ್ವವನ್ನು ಹೇಗೆ ಬಲಪಡಿಸಿಕೊಳ್ಳುತ್ತಾರೆ ಎಂಬುದಕ್ಕೆ ಜಾತಿ ವ್ಯವಸ್ಥೆ ಮುಖ್ಯಕಾರಣ ಜೊತೆಗೆ ಜಮೀನ್ದಾರಿ ವ್ಯವಸ್ಥೆಯನ್ನು ಜಾರಿಗೆ ತಂದು ಮೇಲ್ಜಾತಿ ಸಮುದಾಯಕ್ಕೆ ಉನ್ನತವಾದ ಹುದ್ದೆಗಳನ್ನು ನೀಡಿತ್ತು. ಜಮೀನ್ದಾರ, ಜಾಗೀರದಾರ ಮುಂತಾದ ಹುದ್ದೆಗಳನ್ನು ನೀಡಿ ಇಂತಹ ಜಾತಿ ಕಚೇರಿಗಳನ್ನು ತೆರೆದು ಜಾತಿ ವ್ಯವಸ್ಥೆಯನ್ನು ಗಟ್ಟಿಗೊಳಿಸುವುದಕ್ಕೆ ಸಹಾಯ ನೀಡಿತು. ಹೀಗಾಗಿ ಕಾನೂರು ಹೆಗ್ಗಡಿತಿ ಕಾದಂಬರಿಯಲ್ಲಿ ಜಾತಿ ವ್ಯವಸ್ಥೆ ಹೇಗೆ ತನ್ನ ಅಧಿಕಾರವನ್ನು ಪ್ರಬಲಗೊಳಿಸಿತೆಂದರೆ ಚಂದ್ರಯ್ಯಗೌಡರು ಕೆಳಜಾತಿಗಳನ್ನು ಜಾತಿ ಆಧರಿಸಿ ವಿಂಗಿಡಿಸಿದ್ದಾರೆ. ಬೇಲರ ಬೈರ ವೃತ್ತಿಯಲ್ಲಿ ಕೆಳಜಾತಿಯವನು ಊಳಿಗಮಾನ್ಯ ವ್ಯವಸ್ಥೆಯ ಕ್ರೌರ್ಯಕ್ಕೆ ಅವನು ಬಗನಿ ಕಟ್ಟುವುದಕ್ಕೆ ತನ್ನ ಜೀವನವನ್ನು ಮುಡುಪಾಗಿಡಿಬೇಕಾಗುತ್ತದೆ. ಕೆಳಜಾತಿಗಳು ಇಂತಹ ವ್ಯವಸ್ಥೆಗೆ ಸಿಲುಕಿ ತಮ್ಮ ಸ್ವಾತಂತ್ರ್ಯದ ಹಕ್ಕನ್ನು ಪಡೆಯಲು ಸಾಧ್ಯವಾಗುವುದಿಲ್ಲ. ಹಾಗೆಯೇ ಹಳೆಪೈಕದ ತಿಮ್ಮ ಚಂದ್ರಯ್ಯಗೌಡರ ಒಕ್ಕಲು ಇವನು ಬಗಿನಿಕಟ್ಟುವುದು ಇವನ ಮುಖ್ಯ ಕಸುಬು ಇದರಿಂದ ಚಂದ್ರಯ್ಯಗೌಡರಿಗೆ ಅತ್ಯುತ್ತಮವಾದ ಶಿಷ್ಯ ಆಗಿರುತ್ತಾನೆ. ಜೊತೆಗೆ ಬೇರೆ ಕಸುಬನ್ನು ಮಾಡುವುದಕ್ಕೆ ಇಲ್ಲಿನ ಊಳಿಗಮಾನ್ಯ ವ್ಯವಸ್ಥೆ ಕೆಳಜಾತಿಗಳಿಗೆ ಅವಕಾಶ ಮಾಡಿಕೊಡುವುದಿಲ್ಲ ಏಕೆಂದರೆ ಎಲ್ಲಿ ಆರ್ಥಿಕವಾಗಿ ಮುಂದೆ ಬರುತ್ತಾರೆಂಬ ಸ್ವಾರ್ಥದ ರಾಜಕಾರಣವನ್ನು ಗಮನಿಸಬಹುದು ಜೊತೆಗೆ ಕುವೆಂಪುರವರ ನಾಟಕವಾದ 'ಬೆರಳ್‌ಗೆ ಕೊರಳ್' ನಾಟಕವನ್ನು ತೆಗೆದುಕೊಂಡಾಗ ಅಲ್ಲಿನ ಜಾತಿವ್ಯವಸ್ಥೆ ಹೇಗೆ ತನ್ನ ಅಸ್ತಿತ್ವವನ್ನು ಪ್ರಬಲಗೊಳಿಸಿತ್ತು ಎಂಬುದನ್ನು ಗಮನಿಸಬಹುದಾಗಿದೆ. ಏಕಲವ್ಯ ಕೀಳು ಜಾತಿಯವನಾದ್ದರಿಂದ ಶಿಕ್ಷಣವನ್ನು ಪಡೆಯಲು ವಂಚಿತನಾಗುತ್ತಾನೆ. ಇವನು ಕಾಡಿನ ಹುಡುಗನಾದ್ದರಿಂದ ತನ್ನ ಸ್ವಂತ ಪರಿಶ್ರಮದಿಂದ ಬಿಲ್ವಿದ್ಯೆಯನ್ನು ಕಲಿಯುತ್ತಾನೆ. ಸಹಜ ಸಾಮರ್ಥ್ಯ, ಕಲಿಯುವ ಬಗೆಗಿನ ಶ್ರದ್ಧೆ, ಪರಿಸರ ಕಲಿಸುವ ಗಾಢ ಅನುಭವಗಳಿಂದ ಒಂದು ಉನ್ನತ ಮಟ್ಟಕ್ಕೆ ಏಕಲವ್ಯ ಏರಿರುವುದನ್ನು ಕಾಣಬಹುದು. ಏಕಲವ್ಯ ಗುರುವಿನಿಂದ ವಿದ್ಯೆ

ಕಲಿಯದಿದ್ದರೂ ತನ್ನ ಗುರುವಾಗಿ ದ್ರೋಣಾಚಾರ್ಯರನ್ನು ಸ್ವೀಕರಸುತ್ತಾನೆ. ಪ್ರಭುತ್ವದ ವ್ಯವಸ್ಥೆಗೆ ಮನಸೋತ ದ್ರೋಣಚಾರ್ಯರು ಏಕಲವ್ಯನ ಬೆರಳನ್ನು ಬಲಿತೆಗೆದುಕೊಳ್ಳಬೇಕಾದಂತ ಸಂಗತಿ ಒದಗಿ ಬರುತ್ತದೆ. ಇಲ್ಲಿ ಮುಖ್ಯವಾಗಿ ಸಾಮ್ರಾಜ್ಯಶಾಹಿ ಮತ್ತು ಪುರೋಹಿತಶಾಹಿಯ ಕ್ರೌರ್ಯಕ್ಕೆ ತೋರಿದ ಪ್ರತಿಕ್ರಿಯೆ ಗಾಢವಾಗಿ ಕಂಡುಬರುತ್ತದೆ. ಇಲ್ಲಿನ ಮುಖ್ಯ ಉದ್ದೇಶ ಕೆಳವರ್ಗದವನಾದ ಏಕಲವ್ಯ ಬಿಲ್ವಿದ್ಯೆಯನ್ನು ಕಲಿತು ಒಂದು ಉನ್ನತ ಮಟ್ಟಕ್ಕೆ ಏರುವುದು ಇಲ್ಲಿ ಮೇಲ್ಜಾತಿಗಳಿಗೆ ನುಂಗಲಾರದ ತುತ್ತಾಯಿತು.

ಕುವೆಂಪುರವರ ಮತ್ತೊಂದು ನಾಟಕವಾದ 'ಜಲಗಾರ' ನಾಟಕದಲ್ಲಿ ಲೋಕದ ಅಸಹ್ಯವಾದ ವರ್ಣ ವ್ಯವಸ್ಥೆಯನ್ನು ಕಸದಂತೆ ಗುಡಿಸಿ ಹಾಕುವ ಹಾಗೂ ಹೊಸದೊಂದು ವ್ಯವಸ್ಥೆಯನ್ನು ಕಟ್ಟಬಯಸುವ ಆಶಯವನ್ನು ಕಾಣಬಹುದು. ಜಲಗಾರನ ಗುಡಿಸುವ ಕ್ರಿಯೆ ಹಲವು ಅರ್ಥ ಪರಂಪರೆಗಳನ್ನು ಹೊರಡಿಸುತ್ತದೆ. ಗಾಂಧಿ, ಅಂಬೇಡ್ಕರ್ ವಿಚಾರಧಾರೆಗೆ ವಚನಕಾರರ ಕಾಯಕ ತತ್ವದ ವಿಚಾರಗಳು ಇಲ್ಲಿ ಮೈ ಪಡೆದಿದೆ. ಪೂಜೆ ದೇವರು ಧಾರ್ಮಿಕ ನೆಲೆಗಳಿಗೆ ಹಲವು ಅರ್ಥ ಪರಂಪರೆಗಳು ಎದುರಾಗುತ್ತವೆ.

ಜಲಗಾರ :

'ಕರ್ಮವರಾಧನೆ ಸೇವೆಯೆ ಪೂಜೆ
ನನ್ನ ಭಾಗಕ್ಕೆ ಪೊರಕೆ ಆರತಿ, ಗುಡಿಸುವುದೆ
ನನ್ನ ದೇವರ ಪೂಜೆ

ನನ್ನೆದೆಯ ದೇಗುಲ; ನನ್ನೊಲ್ಮೆಯದೆ ಪೂಜೆ

ತಿರುಕ :

ಗುಡಿಗಳಿವು ಪಾಪಿಗಳ ಭೋಗಿಗಳ ಗೂಡುಗಳು;
ಪೂಜೆಯೆಂಬುದೊ, ಧರ್ಮ ಬುದ್ಧಿಯನು ಜೋಗುಳದಿ
ಮಲಗಿಸುವ ಕಾಳಮಂತ್ರವು ದೇವ!"[9]

ಇಂತಹ ಅನೇಕ ಸಂಭಾಷಣೆಗಳಲ್ಲಿ ದೇವರು, ದೇವಾಲಯ, ಪೂಜಾವಿಧಾನಗಳನ್ನು ವಿಮರ್ಶೆಗೆ ಗುರಿಪಡಿಸುತ್ತಾ ತಮ್ಮದೇ ಆದ ಹೊಸ ವ್ಯಾಖ್ಯಾನವನ್ನು ಕುವೆಂಪುರವರು ನೀಡಿದ್ದಾರೆ. ಜೊತೆಗೆ

ಜಾತಿ, ಧರ್ಮ, ಅಸ್ಪೃಶ್ಯತೆ ಮುಂತಾದ ವ್ಯವಸ್ಥೆಗಳ ವಿರೋಧ ವ್ಯಕ್ತಪಡಿಸಿದ್ದಾರೆ. ಹಾಗೆಯೇ ಮನೆ ಭಾಗವಾಗುವ ಸಂದರ್ಭದಲ್ಲಿ ಕಂಡುಬರುವ ಜಾತಿಯತೆ ಅಸ್ಪೃಶ್ಯತೆ ವಿಚಿತ್ರವಾದುದು.

"ಶ್ಯಾಮಯ್ಯಗೌಡರೂ ಸಿಂಗಪ್ಪಗೌಡರೂ ನಡುನಡುವೆ ಇತರರ ಸಲಹೆಗಳನ್ನು ತೆಗೆದುಕೊಳ್ಳುತ್ತಾ ಆ ಪದಾರ್ಥಗಳ ಹಂಚಿಕೆಗೆ ತೊಡಗಿದರು. ಪುಟ್ಟಣ್ಣ, ಸೇರೆಗಾರರು, ನಿಂಗ ಮೊದಲಾದ ಸ್ಪೃಶ್ಯ ಜಾತಿಗಳು ಆ ಪದಾರ್ಥಗಳನ್ನೆಲ್ಲ ಹೇಳಿದಂತೆ ಎರಡು ಭಾಗವಾಗಿ ಬೇರೆ ಬೇರೆ ಮಾಡತೊಡಗಿದರು. ಸುಮಾರು ಒಂದು ಒಂದೂವರೆ ಗಂಟೆಯ ತರುವಾಯ ಅಂಗಳದಲ್ಲಿ ಮೊದಲು ಒಟ್ಟಾಗಿದ್ದ ರಾಶಿ ಈಗ ಭಾಗವಾಗಿ ನಿಂತಿತು". ಈ ಹಿನ್ನೆಲೆಯಲ್ಲಿ ಚಂದ್ರಯ್ಯಗೌಡರ ಮನೆಯು ಭಾಗವಾಗುವಂತಹ ಸಂದರ್ಭದಲ್ಲಿ ಉಂಟಾಗುವಂತಹ ಒಂದು ವ್ಯವಸ್ಥೆ ಇರುವಂತಹ ಕೆಳಜಾತಿಗಳಲ್ಲಿಯೇ ಕೆಳಪಂಗಡಗಳನ್ನು ತಮ್ಮ ಸ್ವಾರ್ಥಕ್ಕಾಗಿ ಮೇಲ್ಜಾತಿಯವರು ಸೃಷ್ಟಿಸುತ್ತಾರೆ. ಅಸ್ಪೃಶ್ಯತೆ ಎಂಬುದು ಎಷ್ಟು ಅಮಾನುಷವಾದದ್ದು ಎಂಬುದನ್ನು ಮನೆಯು ಭಾಗವಾದಂಥ ಸಂದರ್ಭದಲ್ಲಿ ಕಾಣಬಹುದು. ಶ್ರಮದ ಆಧಾರದ ಮೇಲೆ ಜಾತಿಯನ್ನು ವಿಂಗಡಿಸುವ ಪದ್ಧತಿಯನ್ನು ಕಾಣಬಹುದು. ಜೊತೆಗೆ ಜಾತಿಯ ಅಸಮಾನತೆಯನ್ನು ಮತ್ತು ದಬ್ಬಾಳಿಕೆಯನ್ನು ಹುಟ್ಟುಹಾಕುವುದರ ಜೊತೆಗೆ ಜಾತಿ ಎನ್ನುವುದನ್ನು ಇನ್ನಷ್ಟು ಬಲಪಡಿಸುತ್ತದೆ. ಇಲ್ಲಿ ಮುಖ್ಯವಾಗಿ ಎರಡು ಜಾತಿಗಳು; ಇವುಗಳು ಕೆಳಜಾತಿಗಳೇ ಆದರೂ ಅದರಲ್ಲೂ ಒಳಪಂಗಡಗಳನ್ನು ಕಾಣಬಹುದು. ಜಾತಿಯನ್ನು ನಿರ್ಮೂಲನಗೊಳಿಸಬೇಕಾದರೆ ಊಳಿಗಮಾನ್ಯ ವ್ಯವಸ್ಥೆಯ ವಿರುದ್ಧ ಹೋರಾಡಬೇಕು ಮತ್ತು ಮೇಲ್ಜಾತಿಯಲ್ಲಿರುವ ಅಸ್ಪೃಶ್ಯತೆಯನ್ನು ಮಟ್ಟ ಹಾಕುವುದಕ್ಕೆ ಧಾರ್ಮಿಕತೆಯನ್ನು ಹೋಗಲಾಡಿಸುವುದರ ಮೂಲಕ ಅಸ್ಪೃಶ್ಯತೆಯನ್ನು ನಿರ್ಮೂಲನಗೊಳಿಸಬಾರದು. ಒಂದು ಜಾತಿಯಲ್ಲಿರುವ ವರ್ಗದ ತಾರತಮ್ಯಗಳನ್ನು ನಿರ್ಮೂಲನಗೊಳಿಸಬೇಕು. ಒಟ್ಟಾರೆಯಾಗಿ ಹೇಳಬೇಕೆಂದರೆ ಆರ್ಥಿಕ, ಸಾಮಾಜಿಕ ಇವುಗಳಲ್ಲಿರುವ ಅಸಮಾನತೆಗಳನ್ನು ನಿಯಂತ್ರಿಸಿ ಆಯಾ ಜಾತಿಗಳು ತಮ್ಮೊಳಗೆ ಐಕ್ಯವಾಗಿರುವುದರಿಂದ ಸಾಧ್ಯವಾಗುವುದಿಲ್ಲ. ಎಲ್ಲರೂ ಒಗ್ಗೂಡಿ ಈ ಜಾತಿ ಪದ್ಧತಿಯ ವಿರುದ್ಧ ಹೋರಾಟ ಮಾಡಿದಂತಹ ಪಕ್ಷದಲ್ಲಿ ಜಾತಿ ಪದ್ಧತಿಯನ್ನು ನಿಯಂತ್ರಿಸಬಹುದು.

'ಕೆಲದಿನಗಳ ಮೇಲೆ ಒಂದು ಸಾರಿ ತಮ್ಮ ಸೊಸೆ ತಮ್ಮನ್ನು ಕಡೆಗಣ್ಣಿನಿಂದಲೂ ಲೆಕ್ಕಿಸದೆ ತನ್ನ ತಂದೆಗೆ ಅನ್ನ ಪಾನಗಳನ್ನು ಕೊಟ್ಟು ದಿಟ್ಟ ತನದಿಂದ ಹೋಗುತ್ತಿರಲು, ಮುತ್ತಳ್ಳಿ ಬಾವನನ್ನು ಮಾತಾಡಿಸಿಕೊಂಡು ಹೋಗಲು ಬಂದಿದ್ದ ಚಂದ್ರಯ್ಯಗೌಡರು ಬೇಕಾಗಿಯೇ 'ಸೀತೆ, ನಂಗೊಂದು

ಲೋಟಾ ತಣ್ಣೀರು ತಗೊಂಡು ಬಾ, ಕುಡಿಯುವುದಕ್ಕೆ'. ಎಂದರು ಆ ಧ್ವನಿಯನ್ನು ಕೇಳಿದ ಕೂಡಲೆ, ಬಾಲವನ್ನು ಮೆಟ್ಟಿದ ಸರ್ಪಿಣಿ ಹೆಡೆಯೆತ್ತಿ ತಿರುಗಿ ನಿಲ್ಲುವಂತೆ, ಸೀತೆ ತಲೆಯನ್ನು ಮಾತ್ರ ತಿರುಗಿಸಿ ದುರುದುರನೆ ನೋಡಿ, ತಿರಸ್ಕಾರಪೂರ್ವಕವಾಗಿ ಅಲ್ಲಿಂದ ಹೊರಟುಹೋದಳು. ನೀರನ್ನು ತರಲಿಲ್ಲ. ಚಂದ್ರಯ್ಯಗೌಡರು ನಾಲಗೆ ಕಚ್ಚಿಕೊಂಡು 'ಮನೆಗೆ ಬಾ ನಿನಗೆ ದೆಯ್ಯ ಬಿಡಿಸ್ತೀನಿ ಎಂದು ಮನಸ್ಸಿನಲ್ಲಿಯೇ ಬುಸುಗುಟ್ಟಿದರು".[10] ಈ ಹಿನ್ನೆಲೆಯಲ್ಲಿ ಊಳಿಗಮಾನ್ಯತೆಯ ವಿರುದ್ಧ ಸ್ತ್ರೀತ್ವವು ಹೇಗೆ ತಿರುಗಿ ಬೀಳುತ್ತದೆ ಎಂಬುದನ್ನು ಈ ಕಾದಂಬರಿಯ ಮೂಲಕ ಕಾಣಬಹುದು. ಚಂದ್ರಯ್ಯಗೌಡರು ದಬ್ಬಾಳಿಕೆಯಿಂದ ವೆಂಕಪ್ಪಯ್ಯ ಜೋಯಿಸರ ತಂತ್ರದಿಂದ ಸೀತೆ ಮತ್ತು ರಾಮಯ್ಯನ ಮದುವೆ ನಡೆಯಿತು. ಇಲ್ಲಿ ಸೀತೆಯ ಪ್ರತಿಭಟನೆ ದ್ವೇಷದ ಮತ್ತು ವೈಯಕ್ತಿಕ ಪ್ರತಿಭಟನೆ ಎಂಬುದನ್ನು ಕಾಣಬಹುದು. ಮುಖ್ಯವಾಗಿ ಚಂದ್ರಯ್ಯಗೌಡರ ಅಭಿಪ್ರಾಯ ಸೀತೆಯ ಮೇಲೆ ಕೃಷ್ಣಪ್ಪನ ದೆಯ್ಯ ಬಂದಿದೆ ಎಂಬ ಅಪ್ರಜ್ಞಾಪೂರ್ವಕವಾಗಿ ತಿಳಿದ ಚಂದ್ರಯ್ಯಗೌಡರು ಕ್ರೂರ ರೀತಿಯಲ್ಲಿ ತಿಳಿದು ಸೀತೆಗೆ ಬರೆಯಿಡುತ್ತಾರೆ. ಈ ಕಷ್ಟಗಳಿಂದ ನೊಂದು ಬೆಂದು ಕೊನೆಗೆ ಅವಳು ನಡುರಾತ್ರಿಯಲ್ಲೇ ಎದ್ದು ಹೂವಯ್ಯನಲ್ಲಿಗೆ ಧಾವಿಸಿ ಬರುತ್ತಾಳೆ. ಈ ಘಟನೆಯಿಂದಾಗಿಯೇ ಅವಳು ಕಾನೂರಿಗೆ ಹೋಗುವುದು ತಾನಾಗಿಯೆ ತಪ್ಪಿಹೋಗುತ್ತದೆ. ಸುಬ್ಬಮ್ಮನ ಮರಣದ ಕೆಲ ದಿನಗಳಲ್ಲಿಯೇ ರಾಮಯ್ಯ ಆತ್ಮಹತ್ಯೆ ಮಾಡಿಕೊಂಡ ನಂತರ ತನ್ನ ಮತ್ತು ತನ್ನ ಇನಿಯನ ಸಮಾಗಮದ ನಡುವೆ ಅಡ್ಡ ಬಂದಿದ್ದ ವ್ಯಕ್ತಿಗಳೆಲ್ಲ ಸತ್ತು ಹೋದ ಮೇಲಾದರೂ ಹೂವಯ್ಯನ ಮದುವೆಯಾಗುವೆ ಎನ್ನುವ ಉಚ್ಚಮಟ್ಟದ ಆದರ್ಶವಾದಿ. ಕೊನೆಗೆ ಸೀತೆಯು ಹೂವಯ್ಯನ ಜೊತೆಗೆ ಸೇರಿಕೊಳ್ಳುತ್ತಾಳೆ.

ಸೀತೆಯು ಊಳಿಗಮಾನ್ಯದ ವಿರುದ್ಧ ಸ್ತ್ರೀಜಗತ್ತು, ತನ್ನದೇ ಆದ ರೀತಿಯ ಸಂಸ್ಕೃತಿಯನ್ನು ಧಿಕ್ಕರಿಸಿ ಒಂದು ಹೊಸ ಸಂಸ್ಕೃತಿಯನ್ನು ಕಟ್ಟಿಕೊಳ್ಳುವುದರಲ್ಲಿ ಯತ್ನಿಸುತ್ತಾಳೆ. ಜೊತೆಗೆ ಹಳೆಯ ಸಂಪ್ರದಾಯ ಮೌಲ್ಯಗಳನ್ನು ಮುರಿದು ಹೊಸ ಮೌಲ್ಯಗಳತ್ತ ಹೆಜ್ಜೆ ಹಾಕುತ್ತಾಳೆ. ಹೂವಯ್ಯ ಕಾದಂಬರಿಯಲ್ಲಿ ಕ್ರಿಯಾಶೀಲವಾದ ವ್ಯಕ್ತಿ ಮತ್ತು ಒಬ್ಬ ಭಾವಜೀವಿ ಎನ್ನುವುದರಲ್ಲಿ ಯಾವ ರೀತಿಯಾದಂತಹ ಅನುಮಾನಗಳು ಎದ್ದು ಕಾಣುವುದಿಲ್ಲ. ಜೊತೆಗೆ ಲೋಕದಲ್ಲಿರುವಂತಹ ಜಾತಿಯೆಂಬ ಕೊಳೆಯನ್ನು ತಕ್ಕಮಟ್ಟಿಗೆ ಹೊಸ ಮೌಲ್ಯಗಳನ್ನು ಉಪಯೋಗಿಸಿಕೊಂಡು ತೊಳೆಯಲು ಪ್ರಯತ್ನಿಸಿದನು. ಮೌಢ್ಯತೆ, ಅಸ್ಪೃಶ್ಯತೆ, ಜಾತಿಪದ್ಧತಿ ವ್ಯವಸ್ಥೆಗಳ ಮುಖಾಂತರ ತನ್ನದೇ ಆದ ಚಳುವಳಿಯನ್ನು ಮಾಡಿ ಕೊನೆಗೆ ಎಲ್ಲವನ್ನೂ ತೊರೆದು ತನ್ನ ಜ್ಞಾನವನ್ನು ಆಧ್ಯಾತ್ಮದ ಕಡೆಗೆ ವಿಸ್ತರಿಸುತ್ತಾನೆ. ಜೊತೆಗೆ ಹೊಸ ಮೌಲ್ಯಗಳನ್ನು

ಸ್ಥಾಪಿಸಿಕೊಳ್ಳುವುದರಲ್ಲಿ ಹೂವಯ್ಯ ಪ್ರಯತ್ನಿಸುತ್ತಾನೆ. ಜಾತಿ, ಮತ, ಮೌಢ್ಯತೆ, ಮೂಢನಂಬಿಕೆ, ಕಂದಚಾರ ಮುಂತಾದವುಗಳನ್ನು ಸಂಪೂರ್ಣವಾಗಿ ತೊರೆದು ಒಂದು ಹೊಸ ದಿಕ್ಕಿನತ್ತ ನಡೆದಿದ್ದಾರೆ. ಒಟ್ಟಾರೆಯಾಗಿ ಈ ಅಧ್ಯಯನವು ಎಲ್ಲಾ ನೆಲೆಗಳನ್ನು ಪುನರ್‌ಮೌಲ್ಯೀಕರಣಕ್ಕೆ ಒಳಪಡಿಸುವುದು ಮತ್ತು ಪುನರ್‌ಸ್ಥಾಪಿಸುವುದರಲ್ಲಿ ಪ್ರಯತ್ನಿಸುತ್ತದೆ.

ಅಡಿಟಿಪ್ಪಣಿಗಳು :

1. ಕಾನೂರು ಹೆಗ್ಗಡಿತಿ; ಕುವೆಂಪು, ಉದಯರವಿ ಪ್ರಕಾಶನ, ವಾಣಿವಿಲಾಸಪುರಂ, ಮೈಸೂರು, 2007, ಪುಟ-143
2. ಕಾನೂರು ಹೆಗ್ಗಡಿತಿ; ಕುವೆಂಪು, ಪುಟ-274
3. ಲೋಹಿಯಾ; ಸಂಪಾದಕರು, ಎಂ.ಡಿ.ನಂಜುಂಡಸ್ವಾಮಿ ಮತ್ತು ಕೆ.ಪಿ.ಪೂರ್ಣಚಂದ್ರ ತೇಜಸ್ವಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2007, ಪುಟ-46
4. ಲೋಹಿಯಾ; ಸಂಪಾದಕರು, ಎಂ.ಡಿ.ನಂಜುಂಡಸ್ವಾಮಿ ಮತ್ತು ಕೆ.ಪಿ.ಪೂರ್ಣಚಂದ್ರ ತೇಜಸ್ವಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2007, ಪುಟ-49
5. ಕಾನೂರು ಹೆಗ್ಗಡಿತಿ; ಕುವೆಂಪು, ಪುಟ-247
6. ಕುವೆಂಪು ನಾಟಕಗಳು ಗುರುಗುರಿ; ಸುಶೀಲ, ಕೆ.ಎಸ್.ಮುದ್ದಪ್ಪ ಸ್ಮಾರಕ ಟ್ರಸ್ಟ್, ಕೃಷ್ಣಪುರ ದೊಡ್ಡಿ, ಪುಟ-243
7. ಪ್ರತಿಸಂಸ್ಕೃತಿ; ರಹಮತ್ ತರೀಕೆರೆ, ಅಭಿನವ, 17/18-2, ಮೊದಲನೇ ಮುಖ್ಯರಸ್ತೆ, ಮಾರೇನಹಳ್ಳಿ, ವಿಜಯನಗರ, ಬೆಂಗಳೂರು, ಪುಟ-124
8. ಜಾತಿವಿನಾಶ; ಅನುವಾದ; ಡಾ.ಮ.ನ.ಜವರಯ್ಯ, ಪ್ರಕಾಶಕರು, ಸಿದ್ಧಾರ್ಥಗ್ರಂಥ ಮಾಲೆ, ನಂ.ಇ-47, ಮೊದಲ ಹಂತ, ಕುವೆಂಪುನಗರ, ಮೈಸೂರು, ಪುಟ-155
9. ಜಲಗಾರ; ಕುವೆಂಪು, ಉದಯರವಿ ಪ್ರಕಾಶನ, ಮೈಸೂರು-1989, ಪುಟ-10
10. ಕಾನೂರು ಹೆಗ್ಗಡಿತಿ; ಕುವೆಂಪು, ಪುಟ-317
11. ಕಾನೂರು ಹೆಗ್ಗಡಿತಿ; ಕುವೆಂಪು, ಪುಟ-456

ಸಮಾರೋಪ

ಈ ಅಧ್ಯಯನದ ಹಿನ್ನೋಟದಲ್ಲಿ "ಕುವೆಂಪುರವರ ಕಾನೂರು ಹೆಗ್ಗಡಿತಿ ಕಾದಂಬರಿಯಲ್ಲಿ ಜಾತಿ ಮತ್ತು ಲಿಂಗದ ಪರಿಕಲ್ಪನೆ" ಎಂಬ ವಿಷಯವನ್ನು ವಸ್ತುಕೇಂದ್ರಿತ ನೆಲೆಯಲ್ಲಿ ಚರ್ಚಿಸಲು ಯತ್ನಿಸುತ್ತಿದೆ. ಇದರ ಜೊತೆಗೆ ಅಂಬೇಡ್ಕರ್, ಲೋಹಿಯಾ, ಗಾಂಧಿ, ಬಸವಣ್ಣ, ಕುವೆಂಪು ಮೊದಲಾದವರ ವಿಚಾರಧಾರೆಗಳನ್ನು ಬಳಸಿಕೊಂಡು ಈ ಅಧ್ಯಯನ ಚರ್ಚಿಸಲು ಯತ್ನಿಸಿದೆ.

ಕುವೆಂಪುರವರು ಚಿತ್ರಿಸಿರುವ ಜಮೀನ್ದಾರಿ, ಪ್ರಭುತ್ವ ಅದರ ಅಧಿಕಾರ, ಲೈಂಗಿಕ ರಾಜಕಾರಣ, ಜಮೀನ್ದಾರಿ ಪದ್ಧತಿ, ಶೂದ್ರ ಸಮುದಾಯ, ಪುರೋಹಿತಶಾಹಿ, ಊಳಿಗಮಾನ್ಯ ಪದ್ಧತಿ, ಕೆಳಜಾತಿ ಮತ್ತು ಸ್ತ್ರೀ ಸಂಬಂಧದ ಬಿಕ್ಕಟ್ಟು ಮತ್ತು ಸಂಘರ್ಷದ ಚಳುವಳಿಗಳು, ಸ್ತ್ರೀ ಸಮುದಾಯದಲ್ಲಿ ಉಂಟಾದ ಆಕರ್ಷಣೆ ಮತ್ತು ವಿಕರ್ಷಣೆ, ಗಂಡು ಮತ್ತು ಹೆಣ್ಣಿನ ಸಂಬಂಧ, ಲಿಂಗರಾಜಕಾರಣ, ಕೌಟುಂಬಿಕ ಮೌಲ್ಯಗಳು, ಸ್ತ್ರೀತ್ವದ ಪ್ರತಿಪಾದನೆ ಜೊತೆಗೆ ಭೂ ಒಡೆಯನ ಡೋಂಗಿತನ, ಅಸ್ತಿತ್ವವಾದಿ ಯಾತನೆ ಮುಂತಾದ ಸಾಮಾಜಿಕ ಸಮಸ್ಯೆಗಳು ನಮ್ಮ ಸಮಾದಲ್ಲಿ ನಿರಂತರವಾಗಿವೆ.

ವಸಾಹತುಶಾಹಿ ಹಾಗೂ ಮತ್ತು ಆಧುನಿಕತೆಯ ಪ್ರಭಾವ ಮತ್ತು ಇಂಗ್ಲಿಷ್ ಶಿಕ್ಷಣದಿಂದ ಗ್ರಾಮೀಣ ಪ್ರದೇಶದಲ್ಲಿ ಇದ್ದಂತಹ ಊಳಿಗಮಾನ್ಯ ವ್ಯವಸ್ಥೆ ಮೇಲುವರ್ಗ-ಕೆಳವರ್ಗ, ಪ್ರಭುತ್ವ, ನಾಗರಿಕ-ಅನಾಗರಿಕ, ಮೂಢನಂಬಿಕೆ, ಪುರೋಹಿತಶಾಹಿ, ಜಾತಿವ್ಯವಸ್ಥೆ ಮುಂತಾದವುಗಳು ಪಲ್ಲಟಗೊಂಡಿದ್ದವು. ಕುವೆಂಪುರವರ ಕಾದಂಬರಿಯಲ್ಲಿ ಸ್ತ್ರೀಯನ್ನು ದೈವಿಕ ಶಕ್ತಿಯಾಗಿ ಮತ್ತು ತಪಸ್ವಿನಿಯಾಗಿ ನೋಡಿದ್ದಾರೆ ಊಳಿಗಮಾನ್ಯ ವ್ಯವಸ್ಥೆಗೆ ಆಯುಧವಾಗಿ ಕಟ್ಟಿರುವ ಕ್ರಮವನ್ನು ಆಧುನಿಕ ನೆಲೆಯಲ್ಲಿ ನೋಡುವ ಹಾಗೂ ಪುನರ್ ಪರಿಶೀಲಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಕುವೆಂಪುರವರಿಗೆ ಬ್ರಿಟಿಷ್ ವಸಾಹತುಶಾಹಿಗೆ ಪ್ರತಿಕ್ರಿಯಿಸುವುದು ಎಷ್ಟು ಮುಖ್ಯವಾಗಿತ್ತೋ ಹಾಗೆಯೇ ಪುರೋಹಿತಶಾಹಿ, ಜಾತಿವ್ಯವಸ್ಥೆ, ಧರ್ಮ, ಲಿಂಗರಾಜಕಾರಣ, ಗಂಡು ಹೆಣ್ಣಿನ ನಡುವೆ ಪ್ರೀತಿಪ್ರೇಮ, ಹಾದರದ ಸಂಬಂಧಗಳನ್ನು ಪುನರ್ ಮೌಲ್ಯೀಕರಣಕ್ಕೆ ಒಡ್ಡುವುದೂ

ಮುಖ್ಯವಾಗಿತ್ತು. ಈ ಅಧ್ಯಯನದಲ್ಲಿ ಗುರುತಿಸಬಹುದು ಜೊತೆಗೆ ತಾಯ್ತನ, ಲೈಂಗಿಕತೆ, ಊಳಿಗಮಾನ್ಯ ವ್ಯವಸ್ಥೆ ವಿರುದ್ಧ ಸ್ತ್ರೀ ತೋರುವ ಬಂಡಾಯದ ಧೋರಣೆಗಳನ್ನು ಇಲ್ಲಿ ಅನಾವರಣಗೊಳಿಸಿದ್ದಾರೆ. ಕೆಳಜಾತಿ ಮತ್ತು ಸ್ತ್ರೀ ಸಂಬಂಧಗಳ ಬಿಕ್ಕಟ್ಟುಗಳು ಸ್ತ್ರೀ ತನ್ನ ಅಸ್ತಿತ್ವವನ್ನು ಬಲಪಡಿಸಿಕೊಳ್ಳಲು ಪ್ರಯತ್ನಿಸುವುದು ಮತ್ತು ಊಳಿಗಮಾನ್ಯ ವ್ಯವಸ್ಥೆಯ ಲಕ್ಷಣಗಳನ್ನು ಧಿಕ್ಕರಿಸಿ ತನ್ನದೇ ಆದ ಪ್ರತಿ ಸಂಸ್ಕೃತಿಯನ್ನು ಕಟ್ಟಿಕೊಳ್ಳಲು ಯತ್ನಿಸುವುದು, ಜಾತಿ ಏಣೀಶ್ರೇಣಿ, ಪಾತಿವ್ರತ್ಯ ಮತ್ತು ಲೈಂಗಿಕ ಸಂಬಂಧಗಳು ಇವೆಲ್ಲವನ್ನೂ ಕುವೆಂಪು ಪ್ರತಿಸಂಸ್ಕೃತಿಯ ನೆಲೆಯಲ್ಲಿ ಅನಾವರಣಗೊಳಿಸುತ್ತಾರೆ. ಜೊತೆಗೆ ಕುವೆಂಪುರವರು ಹೆಣ್ಣನ್ನು ಸೃಜನಶೀಲ ಶಕ್ತಿಯಾಗಿ, ಜೈವಿಕ ಶಕ್ತಿಯಾಗಿ, ಗೃಹ ದೇವತೆಯಾಗಿ ಮತ್ತು ತಪಸ್ವಿನಿಯಾಗಿ ಗ್ರಹಿಸುವುದರ ಮೂಲಕ ಸಮಾಜದಲ್ಲಿ ಹೆಣ್ಣಿಗೆ ಗಂಡಿನಷ್ಟೆ ಸಮಾನಸ್ಥಾನ-ಮಾನ ಸಿಗಬೇಕೆಂಬ ಆಶಯಗಳನ್ನು ಸೀತೆ, ಸುಬ್ಬಮ್ಮನಂತಹ ಅನೇಕ ಪಾತ್ರಗಳ ಮೂಲಕ ಸಾಮಾಜಿಕ ನ್ಯಾಯವನ್ನು ಪ್ರತಿಪಾದನೆ ಮಾಡುತ್ತಾರೆ. ಜೊತೆಗೆ ಸ್ತ್ರೀಸ್ವಾತಂತ್ರ್ಯ, ಸ್ತ್ರೀ ಸಮಾನತೆ, ಪವಿತ್ರ-ಅಪವಿತ್ರ, ನೈತಿಕ-ಅನೈತಿಕ ಎಂಬ ರೂಢಿಗತ ಮಾದರಿಗಳನ್ನು ಮುರಿದು ಹೊಸ ನೆಲೆಯಲ್ಲಿ ಸ್ತ್ರೀ ವ್ಯಕ್ತಿತ್ವ ಹಾಗೂ ಸ್ತ್ರೀ ಸಂವೇದನೆಯನ್ನು ಕ್ರಿಯಾಶೀಲಗೊಳಿಸಿರುವುದನ್ನು ಇಲ್ಲಿ ಪರಿಶೀಲಿಸಲಾಗಿದೆ.

ಒಟ್ಟಿನಲ್ಲಿ ಕುವೆಂಪುರವರ ಕಾನೂರು ಹೆಗ್ಗಡಿತಿ ಕಾದಂಬರಿಯಲ್ಲಿ ಊಳಿಗಮಾನ್ಯ ವ್ಯವಸ್ಥೆ ದುರ್ಬಲಗೊಂಡು ಒಡೆತನ, ದಾಸ್ಯ, ಹೆಣ್ಣು ಈ ಸಂಬಂಧಗಳು ಬೇರೆಯದೆ ಆದ ಹೊಸ ಆಯಾಮವೊಂದನ್ನು ಪಡೆದಿರುವುದು ಕಾದಂಬರಿಯ ಹಲವು ಸನ್ನಿವೇಶಗಳನ್ನು ಪರಿಶೀಲಿಸಲು ಸಾಧ್ಯವಾಗಿದೆ. ಜೊತೆಗೆ ಗಂಡು ಹೆಣ್ಣಿನ ಸಂಬಂಧ, ನೈತಿಕತೆಯ ಪ್ರಶ್ನೆ ಮದುವೆ, ಕುಟುಂಬ, ಜಾತಿವ್ಯವಸ್ಥೆ ಮತ್ತು ಸ್ತ್ರೀವಾದಿ ಹಿನ್ನೆಲೆಯಲ್ಲಿಯೂ ಈ ಅಧ್ಯಯನ ಮುಖ್ಯವಾಗಿದೆ.

ಪರಾಮರ್ಶನ ಗ್ರಂಥಗಳು :

1. ಅಮೃತ ಮತ್ತು ಗರುಡ- ಡಾ.ಡಿ.ಆರ್.ನಾಗರಾಜ್, ಅಕ್ಷರ ಪ್ರಕಾಶನ, ಹೆಗ್ಗೋಡು.
2. ಸಂಸ್ಕೃತಿ ಕಥನ- ಡಾ.ಡಿ.ಆರ್.ನಾಗರಾಜ್, ಸಂಪಾದಕರು ಅಗ್ರಹಾರ ಕೃಷ್ಣಮೂರ್ತಿ, ಕನ್ನಡ ಪುಸ್ತಕ ಪ್ರಾಧಿಕಾರ.
3. ಸಾಹಿತ್ಯ ಕಥನ- ಡಾ.ಡಿ.ಆರ್.ನಾಗರಾಜ್, ಅಕ್ಷರ ಪ್ರಕಾಶನ, ಹೆಗ್ಗೋಡು.
4. ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ- ಡಾ.ನಟರಾಜ್ ಹುಳಿಯಾರ್, ಕನ್ನಡ ವಿಶ್ವವಿದ್ಯಾಲಯ, ಹಂಪಿ.
5. ಪ್ರತಿಸಂಸ್ಕೃತಿ- ಡಾ.ರಹಮತ್ ತರೀಕೆರೆ, ಅಭಿನವ ಪ್ರಕಾಶನ, ಬೆಂಗಳೂರು.
6. ವಸಾಹತೋತ್ತರ ಚಿಂತನೆ - ಸಿ.ಎನ್.ರಾಮಚಂದ್ರನ್, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
7. ದಲಿತಮಾರ್ಗ- ಸಂ.ಅರವಿಂದ ಮಾಲಗತ್ತಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
8. ಲೋಹಿಯಾ- ಸಂ.ಪ್ರೊ.ಎಂ.ಡಿ.ನಂಜುಂಡಸ್ವಾಮಿ, ಪೂರ್ಣಚಂದ್ರ ತೇಜಸ್ವಿ, ಕನ್ನಡ ಪುಸ್ತಕ ಪ್ರಾಧಿಕಾರ,
9. ಕಣ್ಣೆದುರಿನ ಪ್ರಶ್ನೆಗಳು- ರಾಮಮನೋಹರ ಲೋಹಿಯಾರ ಬರಹಗಳು, ಸಂ.ನಟರಾಜ್ ಹುಳಿಯಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
10. ಗಾಂಧಿ, ಮಾರ್ಕ್ಸ್ ಸಮಾಜವಾದ- ರಾಮಮನೋಹರ ಲೋಹಿಯಾ ಬರಹಗಳು, ಸಂ. ನಟರಾಜ್ ಹುಳಿಯಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
11. ಜಾತಿವಿನಾಶ- ಡಾ.ಬಿ.ಆರ್.ಅಂಬೇಡ್ಕರ್, ಕನ್ನಡಕ್ಕೆ ಅರವಿಂದ ಮಾಲಗತ್ತಿ.
12. ಕನ್ನಡ ರಾಷ್ಟ್ರೀಯತೆ- ಡಾ. ಬಂಜಗೆರೆ ಜಯಪ್ರಕಾಶ್.
13. ನಿಲ- ಡಾ.ಬಂಜಗೆರೆ ಜಯಪ್ರಕಾಶ್.
14. ದೇವನೂರಮಹಾದೇವ ಅವರ ಸಮಗ್ರ ಕಥೆಗಳು- ದೇವನೂರ ಮಹಾದೇವ, ಪತ್ರಿಕೆ ಪ್ರಕಾಶನ, ಬೆಂಗಳೂರು.
15. ಯಾರ ಜಪ್ತಿಗೂ ಸಿಗದ ನವಿಲುಗಳು- ಸಂ.ಪಿ.ಚಂದ್ರಿಕಾ, ಅಭಿನವ ಪ್ರಕಾಶನ, ಬೆಂಗಳೂರು.
16. ಹಕ್ಕಿನೋಟ- ಡಾ. ಸಿದ್ಧಲಿಂಗಯ್ಯ.
17. ಮಾತುಸೋತ ಭಾರತ- ಡಾ.ಯು.ಆರ್.ಅನಂತಮೂರ್ತಿ, ಅಭಿನವ ಪ್ರಕಾಶನ, ಬೆಂಗಳೂರು.
18. ದಲಿತಲೋಕದ ಒಳಗೆ- ಡಾ. ಎಲ್.ಹನುಮಂತಯ್ಯ.
19. ದಲಿತ ಕಥನ- ಡಾ.ಮೊಗಳ್ಳಿ ಗಣೇಶ್
20. ದಲಿತ ಅಧ್ಯಯನ- ಸಂ.ಟಿ.ಆರ್.ಚಂದ್ರಶೇಖರ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

21. ಟೀಕೆ–ಟಿಪ್ಪಣಿ ಭಾಗ–1 ಮತ್ತು 2– ಪಿ.ಲಂಕೇಶ್, ಸಂ.ಡಾ.ನಟರಾಜ್ ಹುಳಿಯಾರ್.

22.ಮರದೊಳಗಳಣ ಕಿಚ್ಚು– ಡಾ.ರಹಮತ್ ತರೀಕೆರೆ, ಬೆಳ್ಳಚುಕ್ಕಿ ಪ್ರಕಾಶನ, ಬೆಂಗಳೂರು.

23.ಕ್ಯಾಸ್ಟ್ ಕೆಮಿಸ್ಟ್ರಿ– ಡಾ.ಸಿ.ಜಿ.ಲಕ್ಷ್ಮೀಪತಿ, 'ಸಖಿ' ಪ್ರಕಾಶನ ಹೊಸಪೇಟೆ.

24.ತಲಪರಿಗೆ– ಸಂ.ಕೋಟಿಗಾನಹಳ್ಳಿರಾಮಯ್ಯ, ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು.

048599

AKSHARA GRANTHALAYA
ACC.NO. 048599